ಕರ್ನಾಟಕ ಗಾಂಧೀ ಸ್ಮಾರಕ ನಿಧಿ


ಬಾಪು ಪ್ರಪಂಚ

BAPU PRAPANCHA

ಕನ್ನಡ - English Monthly

ಸಂಪುಟ – 3 : ವಿಶೇಷ ಸಂಚಿಕೆ – 2 ಸೆಪ್ಟಂಬರ್ – ಅಕ್ಟೋಬರ್ – ನವೆಂಬರ್ 2021 ಪುಟ – 52 ₹ 28/-













ಸ್ವಾತಂತ್ರ್ಯೋತ್ಸವ @ 75 ವರ್ಷಾಚರಣೆ - 2021-2022



ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಕನ್ನಡ - ಇಂಗ್ಲಿಷ್ ಮಾಸಪತ್ರಿಕೆ

BAPU PRAPANCHA

(A Monthly Kannada - English Magazine of Gandhian Thoughts)

ಪ್ರಧಾನ ಸಂಪಾದಕರು :
ನಾಡೋಜ ಡಾ.ವೂಡೇ ಪಿ. ಕೃಷ್ಣ
Chief Editor :
Nadoja Dr. Wooday P. Krishna

ಸಂಪಾದಕರು : ಇಂದಿರಾ ಕೃಷ್ಣಪ್ಪ
Editor : **Indira Krishnappa**

ಸಲಹಾ ಸಂಪಾದಕರು : ವಿ.ಎನ್. ತಿಪ್ಪನಗೌಡ
Advisory Editor : **V.N. Tippana Gouda**

ಪ್ರಕಾಶಕರು : ಕಾರ್ಯದರ್ಶಿ
ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ
ಕುಮಾರ ಪಾರ್ಕ್ ಪೂರ್ವ, ಬೆಂಗಳೂರು-560001

Published by :
Karnataka Gandhi Smaraka Nidhi
Gandhi Bhavana, Kumarapark East
Bengaluru - 560001
Phone : +91 80 22261967, 9738605799
gandhibhavanabengaluru@gmail.com

Design & Print : **CreativeGeekZ**
Yadhava College Road, Madhavanagara
Bengaluru - 560001
Ph : +91 80 40927049
E-mail : mail@creativegeekz.com

ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು, ಬಾಪು ಪ್ರಪಂಚದ್ದಲ್ಲ.ಚಿತ್ರಗಳು ಸಾಂದರ್ಭಿಕವಾಗಿರುತ್ತವೆ.

ಈ ಸಂಚಿಕೆಯಲ್ಲಿ

ಸಂಪಾದಕೀಯ



– ಇಂದಿರಾ ಕೃಷ್ಣಪ್ಪ

ಎಲ್ಲರಿಗೂ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಶುಭಾಶಯಗಳು,

ಭಾರತದ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ಹರ್ಷದಿಂದ ಆಚರಿಸುವಂಥಹ ಸ್ಥಿತಿ ಭಾರತದಲ್ಲಿ ಇಲ್ಲದೆ, ಇರುವ ಕಾಲದಲ್ಲಿ ಕ್ರಮಿಸುತ್ತಿದ್ದೇವೆ. ಎಲ್ಲರೂ ಆತಂಕ ಸಂಕಷ್ಟದಿಂದ ಮುಂದೇನು? ಹೇಗೆ ನಿಭಾಯಿಸುವುದು? ಎಂಬ ಚಿಂತೆಯಲ್ಲಿ ಮುಳುಗಿದ್ದಾರೆ. ಕರೋನಾ–19ರ 2 ವರ್ಷಗಳಲ್ಲಿ ಸುಧೀರ್ಘ ಅವಧಿಯಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಆರೋಗ್ಯದ ತೀವ್ರ ಅವನತಿಗೆ ಇಳಿದಿರುವ ಸ್ಥಿತಿಯಿಂದ ನಿಧಾನವಾಗಿ ಸಾಮಾನ್ಯ ಸ್ಥಿತಿಗೆ ಕಳೆದ ಮೂರು ತಿಂಗಳಿಂದ ಸಾಗುತ್ತಿದ್ದೇವೆ. ಈ ಪಿಡುಗು ವುಹಾನ್‌ನಲ್ಲಿ ಹೇಗೆ ಆರಂಭವಾಯಿತು ಎಂಬ ಸಂಶೋಧನೆಗಳು ಚೀನಾದಲ್ಲಿ ಇನ್ನೂ ನಡೆಯುತ್ತಲೇ ಇದೆ. ಆದರೆ ಈ ಚೇತರಿಕೆಯ ನಡುವೆಯೇ ಪ್ರಕೃತಿಯ ಮುನಿಸು – ಸೈಕ್ಲೋನ್ ರೂಪದಲ್ಲಿ ಮತ್ತೆ ಎರಗಿರುವುದು ಸಾಮಾನ್ಯ ಜನರ ಸಂಕಷ್ಟ ವರ್ಣಿಸದಸಳದಾಗಿದೆ. ಪ್ರಕೃತಿ–ಪರಿಸರವನ್ನು ನಾವು ಕಾಪಾಡಿದರೆ, ಆ ಮಹಾಮಾತೆ ನಮ್ಮನ್ನು ಸಂರಕ್ಷಿಸುವಳು ಎಂಬ ನೀತಿಯನ್ನು ಮಾನವ ಎಲ್ಲಿಯವರೆಗೆ ಹೃದಯದಾಳಕ್ಕೆ ಇಳಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಸೃಷ್ಟಿಯ ತಾಪಕ್ಕೆ ನಾವು ಈಡಾಗಲೇ ಬೇಕು. ಕಳೆಹ ಒಂದು ತಿಂಗಳಿಂದ ಧಾರಾಕಾರವಾಗಿ ಸುರಿಯುತ್ತಿರುವ ವರ್ಷಧಾರೆಯಿಂದ ಭಾರತ ಅದರಲ್ಲೂ ದಕ್ಷಿಣ ಭಾರತ ತತ್ತರಿಸಿದೆ. ಜನರು ನಲುಗಿದ್ದಾರೆ. ದೈನಂದಿನ ಚಟುವಟಿಕೆಗಳು ನಿರ್ವಹಿಸಲಾರದ ಸ್ಥಿತಿಯೆಡೆಗೆ ಸಾಗಿದೆ. ಕಾರ್ಖಾನೆ, ಕಂಪನಿ, ತಾಂತ್ರಿಕತೆ, ಐಷಾರಾಮಿ ಕಟ್ಟಡಗಳು ಮಿತಿಯಿಲ್ಲದ ಬೆಳವಣಿಗೆ, ಕೆರೆ, ಕಟ್ಟೆ, ನದಿಗಳನ್ನು, ಕಾಲುವೆಗಳನ್ನು ಮುಚ್ಚಿ, ಎಲ್ಲೆಲ್ಲೂ ತಾನೇ ಇರಬೇಕೆಂಬ ಕುವಿಚಾರದ ಮಾನವನಿಗೆ ಸೃಷ್ಟಿ ದುರಂತ ತಂದೊಡ್ಡುವುದರ ಮೂಲಕ ಪಾಠ ಕಲಿಸುತ್ತಿದ್ದಾಳೆ. ಇನ್ನೂ 15 ದಿನಗಳವರೆಗೆ ಈ ಜಲಧಾರೆ ಮುಂದುವರಿಯುವುದಾಗಿ ಹವಾಮಾನ ಇಲಾಖೆ ತಿಳಿಸುತ್ತಿದೆ. ಹೀಗಾದಲ್ಲಿ, ಮನೆಮಠ, ಸಹಜೀವಿಗಳು, ಬಂಧು–ಬಳಗವನ್ನು ಕಳೆದುಕೊಂಡು ದುಡಿಮೆ ಇಲ್ಲದೆ ಹಸಿವು ನೀಗಿಸಿಕೊಳ್ಳಲಾರದೆ ಪರಿತಾಪ ಪಡುತ್ತಿರುವ ಸಾಮಾನ್ಯ ಜನರ ಯಾತನಾಮಯ ಜೀವನಕ್ಕೆ ನಾವು–ನೀವು, ಆಳುವ ಸರ್ಕಾರಗಳು ಎಷ್ಟು ಕಾರಣವೆಂಬುದನ್ನು ಆಲೋಚಿಸಬೇಕಿದೆ. ಇಂಥಹ ದುರ್ಭರ ಸಂದರ್ಭದಲ್ಲೂ ಅದಾನಿ – ಅಂಬಾನಿಗಳ ಆರ್ಥಿಕಮಟ್ಟ ಕುಸಿಯದೆ ಲಾಭದ ಏರುಗತಿಯನ್ನು ಕಾಣುತ್ತಿರುವುದು, ಬಡವ ಶ್ರೀಮಂತರ ಅಂತರವನ್ನು ಹೆಚ್ಚಿಸಿರುವುದಲ್ಲದೆ, ಅವರ ಅಮಾನವೀಯ ನಡೆಯನ್ನು ಭಿತ್ತರಿಸುತ್ತಿದೆ. ಕೆರೆ ಕಟ್ಟೆ, ನದಿ, ಹೊಳೆ, ಸಾಗರಗಳನ್ನು ಸಂರಕ್ಷಿಸುವ, ಅಲ್ಲಿ ಜನವಸತಿ ರಹಿತವಾಗಿ ಮಾಡುವ, ಅರಣ್ಯ ಬೆಳೆಸುವ, ವಸುಂಧರೆಯ ಗರ್ಭವನ್ನು ಸೀಳದೆ ಇರುವ ಕಾರ್ಯದಲ್ಲಿ ತೊಡಗಬೇಕಿದೆ. ಬಸವಣ್ಣನವರ ವಚನ "ಮನೆ ಹತ್ತಿ ಉರಿದೊಡೆ ನಿಲಬಹುದು – ಧರೆ ಹತ್ತಿ ಉರಿದರೆ ಇರಲುಬಹುದೇ" ಎಂಬ ಸಾಲುಗಳು ನೆನಪಿಗೆ ಬರುತ್ತವೆ.

ಹೀಗೆ ಮಾನವನೆಡೆಗೆ ಪರಿಸರ ಮುನಿಸಿಕೊಂಡಿದ್ದು, ಒಂದು ಬಗೆಯಾದರೆ, ದೆಹಲಿಯಲ್ಲಿ ತೀವ್ರ ಕಲುಶಿತಗೊಂಡ ವಾತಾವರಣ ನಿರ್ಮಾಣವಾಗಿದ್ದು, ಮನುಷ್ಯರು ಬದುಕಲಾರದ ಸ್ಥಿತಿಗೆ ತಲುಪಿದೆ. ರಾಷ್ಟ್ರದ ರಾಜಧಾನಿಯೇ, ಇಂಥಹ ಸ್ಥಿತಿಗೆ ಒಳಗಾದರೆ ಅದು ಪ್ರಭುತ್ವದ ದಿವ್ಯ ನಿರ್ಲಕ್ಷತೆಯನ್ನು, ಬೇಜವಾಬ್ದಾರಿಯನ್ನು ಕೈಎತ್ತಿ ತೋರಿಸುತ್ತದೆ. ಕರೋನಾ, ಮಳೆ, ಕಲುಷಿತ ಗಾಳಿ, ಹೊಗೆ ತುಂಬಿದ ಪರಿಸರದ ಚಿತ್ರಣವೇ ದೃಶ್ಯ ಮಾಧ್ಯಮಗಳಲ್ಲಿ ಗೋಚರವಾಗುತ್ತಿದೆ. ಈ ವಾತಾವರಣವನ್ನು ಶುಭ್ರ ಸ್ವಚ್ಛಗೊಳಿಸುವುದು ಹೇಗೆಂಬುದರ ಬಗ್ಗೆ ದೇಶದ ನಾಯಕರು, ಸರ್ಕಾರಗಳು, ಪರಿಸರ ತಜ್ಞರು, ಮಾಲಿನ್ಯ ನಿಯಂತ್ರಣ ಮಂಡಳಿಗಳು ಒಗ್ಗಟ್ಟಾಗಿ ಯೋಜನೆ ರೂಪಿಸಿ, ಅನುಷ್ಠಾನಗೊಳಿಸಿದರೆ ಮಾತ್ರ ನಿರ್ಮಲ ಭಾರತವಾಗಲು ಸಾಧ್ಯ.

ಈಗ್ಗೆ ಒಂದು ವಾರದಿಂದ ಮಾಧ್ಯಮಗಳಲ್ಲಿ ಮಕ್ಕಳನ್ನು ಬಿಕ್ಷಾಟನೆಗಾಗಿ ಬಾಡಿಗೆಗೆ ಪಡೆಯುವ ಭೀಕರ ಕೃತ್ಯ ಪ್ರಕಟಗೊಂಡಿದೆ. ತಂದೆ ತಾಯಿಯರು ತಮ್ಮ ಜೀವನ ನಿರ್ವಹಣೆಗಾಗಿ ಎಳೆಗೂಸುಗಳನ್ನು ಬಾಡಿಗೆಗೆ ಕೊಡುವುದು – ಪಡೆಯುವುದು, ಕಂಕುಳಲ್ಲಿ ಮಗು ಕಟ್ಟಿಕೊಂಡು ತೋರಿಸುತ್ತಾ ಭಿಕ್ಷೆ ಬೇಡುವ ಹೃದಯ ವಿದ್ರಾವಕ ಚಿತ್ರಗಳು ಕಣ್ಣುಮುಂದೆ ಚಲಿಸುತ್ತಿದೆ.

ಇವೆಲ್ಲದರ ನಡುವೆ ಕೇಂದ್ರ ಸರ್ಕಾರ, ಸುಗ್ರೀವಾಜ್ಞೆ ಮುಖಾಂತರ ಎರಡೂ ಕೃಷಿ ಕಾಯ್ದೆಗಳನ್ನು ರದ್ದುಗೊಳಿಸಿ, ಪ್ರಧಾನಿ ಅವರು ದೇಶದ ಜನರಲ್ಲಿ ಕ್ಷಮೆ ಕೋರಿರುವುದು ಚಳುವಳಿಗೆ ಸಂದ ಗೌರವಾಗಿದೆ ಮತ್ತು ಭಾರತದ ರೈತರ ಘನತೆಯನ್ನು ಹೆಚ್ಚಿಸಿದೆ. ರೈತಾಪಿ ವರ್ಗ ಮಿಗಿಲಾಗಿ ದೇಶದ ಬೆನ್ನೆಲುಬಾದ ರೈತನ ಕಾಯಕವಿಲ್ಲದೆ, ದೇಶ ಸುಭದ್ರವಾಗಲಾರದು ಎಂಬ ಸಂದೇಶವನ್ನು ಸಾರಿದೆ.

ಕರ್ನಾಟಕದಲ್ಲಿ ಶಾಲಾಕಾಲೇಜು ಪಠ್ಯಪುಸ್ತಕದಲ್ಲಿ ಭಾರತದ ಇತಿಹಾಸವನ್ನು ಬದಲಾವಣೆ ಮಾಡಿ, ಪಠ್ಯದಲ್ಲಿ ಸೇರಿಸುವ ಹುನ್ನಾರ ನಡೆಯುತ್ತಿರುವ ಬಗ್ಗೆಯೂ, ಅದಕ್ಕೆ ತೀವ್ರ ಪ್ರತಿರೋಧಗಳು ತಜ್ಞರು–ವಿದ್ವಾಂಸರಿಂದ ಬಂದ ನಂತರ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿರುವುದು ಸಹ ಭಾರತದ ಇತಿಹಾಸ ಧ್ವಂಸೀಕರಣ ಮಾಡುವ ಶತೃತ್ವದ ನಡೆಯನ್ನು ಅಭಿವ್ಯಕ್ತಗೊಳಿಸುತ್ತದೆ. ಆಳುವ ಸರ್ಕಾರಗಳು ಯಾವುದೇ ಪಕ್ಷವಾಗಿರಲಿ, ನೆಲ ಸಂಸ್ಕೃತಿ, ಇತಿಹಾಸ, ಜನಸಮುದಾಯದ ಅಬೀಪ್ಸೆಯ ವಿರುದ್ಧ ನಿಲ್ಲಲಾಗದು.

ನವೆಂಬರ್ 14ರ ಸ್ಕಾಟ್ಲೆಂಡ್ ಗ್ಲಾಸೋದಲ್ಲಿ ನಡೆಸಿದ ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಶೃಂಗಸಭೆ COP–26ನಲ್ಲಿ ಕಲ್ಲಿದ್ದಲಿನಂತಹ ದಹನ ಇಂಧನ ಬಳಕೆ ಪ್ರಮಾಣವನ್ನು ಹಂತ ಹಂತವಾಗಿ ಕಡಿಮೆಗೊಳಿಸಲು ಜಾಗತಿಕ ತಾಪಮಾನವನ್ನು 1.5 ಡಿಗ್ರಿ ಸೆಲ್ಸಿಯಸ್‌ಗೆ ಇಳಿಸುವ ನಿರ್ಣಯವನ್ನು 200ಕ್ಕೂ ಅಧಿಕ ದೇಶಗಳು ಅನುಮೋದಿಸಿರುವುದು, ಹವಾಮಾನ ವೈಪರೀತ್ಯದ ವಿಧ್ವಂಸಕತೆಗೆ ತಡೆಯೊಡ್ಡುವ ಪ್ರಕ್ರಿಯೆ ಆರಂಭವಾಗಿರುವುದು ಸಂತೋಷದ ವಿಚಾರವಾಗಿದೆ. ಇದೇ ರೀತಿಯ ನಡಾವಳಿ ಬಿಟ್ ಕಾಯಿನ್ ಮಾಫಿಯಾ ವಿರುದ್ಧ ಆಗಬೇಕಿದೆ. ಮುಖಂಡರು, ಸರ್ಕಾರಗಳು, ಈ ಮಾಫಿಯಾದಿಂದ, ದೇಶದ ಆರ್ಥಿಕತೆ ಮತ್ತು ಜನಜೀವನ ಕುಸಿಯುತ್ತಿರುವ ಕಡೆ ಗಮನಹರಿಸಬೇಕಿದೆ. ದೇಶದ ಆರ್ಥಿಕತೆಯನ್ನು ನಿಯಂತ್ರಿಸುವ ಇಂಥಹ ಮಾಫಿಯಾದಾರರ ಮೇಲೆ ಕಠಿಣಕ್ರಮ ಜರುಗಿಸಲು ಗಾಂಧಿ ಅನುಯಾಯಿಗಳ ಕೋರಿಕೆ ಇದೆ.

ವಂದನೆಗಳು..

ನೇಟಾಲನ್ನು ತಲುಪಿದುದು : ಗಾಂಧೀಜಿ ಅವರ "ನನ್ನ ಸತ್ಯಾನ್ವೇಷಣೆ" ಕೃತಿಯಿಂದ ಆಯ್ದ ಭಾಗ

(ಗಾಂಧೀಜಿ ಅವರ ಜೀವನದಲ್ಲಿ ನಡೆದ ಹಲವಾರು ಘಟನೆಗಳು ಇಂದಿನ ಹಲವು ಸಂಕಷ್ಟದಲ್ಲಿ ದಾರಿತೋರುವ ದೀವಿಗೆಗಳಾಗಿವೆ. ಹೀಗಾಗಿ ಗಾಂಧೀಜಿ ಅವರ ಆತ್ಮಕಥೆಯ ಆಯ್ದ ಭಾಗಗಳನ್ನು ನಿಯತವಾಗಿ ಪ್ರಕಟಿಸುತ್ತಿದ್ದೇವೆ.)

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಇತರ ಭಾರತೀಯರು ನ್ಯಾಯಸ್ಥಾನವನ್ನು ಪ್ರವೇಶಿಸಿದ ಕೂಡಲೇ ರುಮಾಲನ್ನು ಕಡ್ಡಾಯವಾಗಿ ತೆಗೆಯಬೇಕೆಂದು ಅವರು ಹೇಳಿದರು. ಈ ಸೂಕ್ಷ್ಮ ವ್ಯತ್ಯಾಸ ತಿಳಿಯಬೇಕಾದರೆ ಕೆಲವು ವಿವರಗಳನ್ನು ಹೇಳಬೇಕಾಗಿದೆ. ನಾನು ದಕ್ಷಿಣ ಆಫ್ರಿಕಾದಲ್ಲಿದ್ದ ಎರಡು ಮೂರು ದಿನಗಳಲ್ಲಿ ಕೆಲವು ಸಂಗತಿಗಳು ನನಗೆ ಗೊತ್ತಾಗಿದ್ದುವು. ಅಲ್ಲಿಯ ಭಾರತೀಯರಲ್ಲಿ ಅನೇಕ ಪಂಗಡಗಳಿದ್ದವು. ಒಂದು, ಮುಸಲ್ಮಾನ್ ವರ್ತಕರ ಪಂಗಡ ಅವರು ತಮ್ಮನ್ನು ಅರಬ್ಬರು ಎಂದು ಕರೆದುಕೊಳ್ಳುತ್ತಿದ್ದರು. ಮತ್ತೊಂದು ಪಂಗಡ ಹಿಂದೂಗಳದು ಇನ್ನೊಂದು ಪಂಗಡ ಪಾರ್ಸಿ ಗುಮಾಸ್ತರದು. ಹಿಂದೂ ಗುಮಾಸ್ತರು ಯಾವ ಪಂಗಡಕ್ಕೂ ಸೇರದವರು. ಅವರು ಅರಬ್ಬರೊಂದಿಗೆ ಬೇಕಾದಾಗ ಸೇರಿಕೊಳ್ಳಬಹುದಾಗಿತ್ತು. ಪಾರ್ಸಿ ಗುಮಾಸ್ತರು ತಮ್ಮನ್ನು ಪರ್ಶಿಯನ್ನರೆಂದು ಕರೆದುಕೊಳ್ಳುತ್ತಿದ್ದರು. ಈ ಮೂರು ವರ್ಗಗಳು ಪರಸ್ಪರ ಕೆಲವು ಸಾಮಾಜಿಕ ಸಂಬಂಧಗಳನ್ನೂ ಹೊಂದಿದ್ದವು. ಆದರೆ ಎಲ್ಲದಕ್ಕಿಂತ ಹೆಚ್ಚಾದ ದೊಡ್ಡ ಪಂಗಡ, ಕರಾರುಬದ್ಧ ಮತ್ತು ಸ್ವತಂತ್ರರಾದ ಕೂಲಿಗಳನ್ನೊಳಗೊಂಡ ತಮಿಳು, ತೆಲುಗು ಮತ್ತು ಉತ್ತರ ಭಾರತದವರ ಪಂಗಡ, ಕರಾರುಬದ್ಧ ಕೂಲಿಗಳು ಎಂದರೆ ನೇಟಾಲಿನಲ್ಲಿ ಕೆಲಸ ಮಾಡಲು ಐದು ವರ್ಷಗಳ ಕರಾರಿಗೆ ಭಾರತದಿಂದ ಒಪ್ಪಿ ಹೋದವರು. ಇವರಿಗೆ ಗಿರಮಿಟಿಯರು ಎಂದೂ ಹೆಸರು. ಇದು ಇಂಗ್ಲಿಷಿನ ಅಗ್ರಿಮೆಂಟ್ ಎಂಬ ಶಬ್ಧದ ಅಪಭ್ರಂಶದಿಂದ ಹುಟ್ಟಿದುದು. ಮೊದಲು ಹೇಳಿದ ಮೂರು ಪಂಗಡದವರಿಗೆ, ಈ ಕೂಲಿಗಳೊಂದಿಗೆ ಕೆಲಸ ಕಾರ್ಯ ವ್ಯಾಪಾರದ ಸಂಬಂಧವಿದ್ದಿತೇ ಹೊರತು ಮತ್ತಾವುದೂ ಸಂಬಂಧವಿರಲಿಲ್ಲ. ಇಂಗ್ಲಿಷಿನವರು ಇವರನ್ನು ಕೂಲಿಗಳೆಂದು ಕರೆಯುತ್ತಿದ್ದರು. ಭಾರತೀಯರ ಬಹುಭಾಗ ಕೂಲಿಗಳಾಗಿದ್ದುದರಿಂದ, ಎಲ್ಲ ಭಾರತೀಯರನ್ನು 'ಸಾಮಿ' ಅಥವಾ ಕೂಲಿಗಳೆಂದೇ ಕರೆಯುತ್ತಿದ್ದರು. ತಮಿಳು ಹೆಸರುಗಳ ಕೊನೆಯಲ್ಲಿ ಸಾಮಿ ಎಂಬ ಪದ ಇರುತ್ತದೆ. ಅದು ಸಂಸ್ಕೃತದ ಸ್ವಾಮಿ ಅಥವಾ ಯಜಮಾನ ಎಂಬ ಮಾತಿಗೆ ಸಮನಾದುದು. ಭಾರತೀಯನನ್ನು ಸಾಮಿ ಎಂದು ಕರೆದಾಗ ಅವನಿಗೆ ಅಸಮಾಧಾನವಾಗುತ್ತಿತ್ತು. ಆದರೆ ಅವನು ಚತುರನಾದರೆ ಮಾತನ್ನು ಹೀಗೆ ಹಿಂದಿರುಗಿಸುತ್ತಿದ್ದನು. "ನೀವು ನನ್ನನ್ನೇನೋ ಸಾಮಿ ಎಂದು ಕರೆಯುತ್ತೀರಿ. ಆದರೆ ಸಾಮಿ ಎಂದರೆ ಯಜಮಾನ. ನಾನು ನಿಮ್ಮ ಯಜಮಾನನಲ್ಲವಲ್ಲ!", ಇದನ್ನು ಕೇಳಿ ಕೆಲವು ಇಂಗ್ಲಿಷಿನವರಿಗೆ ಅಳುಕು ಉಂಟಾಗುತ್ತಿತ್ತು. ಕೆಲವರು ಸಿಟ್ಟಿಗೇಳುತ್ತಿದ್ದರು, ಬಯ್ಯುತ್ತಿದ್ದರು. ಅವಕಾಶ ದೊರೆತರೆ ಹೊಡೆದು ಬಿಡುತ್ತಿದ್ದರು. ಏಕೆಂದರೆ ಸಾಮಿ ಎಂಬುದು ತಿರಸ್ಕಾರದ ಮಾತು. ಈ ವಿಷಯ ಅವರಿಗೆ ಗೊತ್ತಿತ್ತು. ಅದಕ್ಕೆ ಯಜಮಾನ ಎಂದು ಅರ್ಥಮಾಡುವುದಾದರೆ ಕರೆದವರಿಗೆ ಅವಮಾನ ಮಾಡಿದಂತೆ ತಾನೆ! ಆದುದರಿಂದ ನನ್ನನ್ನು ಕೂಲಿ ಬ್ಯಾರಿಸ್ಟರ್ ಎಂದು ಕರೆಯುತ್ತಿದ್ದರು. ವರ್ತಕರನ್ನು ಕೂಲಿ ವರ್ತಕರೆಂದು ಕರೆಯುತ್ತಿದ್ದರು. ಕೂಲಿ ಎಂಬ ಪದದ ಮೂಲ ಅರ್ಥ ಮರೆತುಹೋಗಿ ಭಾರತೀಯರಿಗೆಲ್ಲ ಅದೇ ಹೆಸರಾಯಿತು. ಮುಸಲ್ಮಾನ ವರ್ತಕರಿಗೆ ತಮ್ಮನ್ನು ಕೂಲಿಗಳೆಂದು ಕರೆದರೆ ಕೋಪ ಬರುತ್ತಿತ್ತು. ಅವರು ನಾನು ಕೂಲಿಯಲ್ಲ, ನಾನು ಅರಬ್ ಎನ್ನುತ್ತಿದ್ದರು, ಅಥವಾ ನಾನು ವ್ಯಾಪಾರಿ ಎನ್ನುತ್ತಿದ್ದರು. ಇಂಗ್ಲಿಷಿನವನು ವಿನೀತನಾದವನಾದರೆ, ಹಾಗೆ ಕರೆದುದಕ್ಕೆ ಕ್ಷಮೆ ಬೇಡುತ್ತಿದ್ದ.

ಇಂತಹ ಪರಿಸ್ಥಿತಿಯಲ್ಲಿ ರುಮಾಲನ್ನು ಧರಿಸುವ ಪ್ರಶ್ನೆಗೆ ಬಹಳ ಪ್ರಾಮುಖ್ಯತೆ ದೊರೆಯುತ್ತಿತ್ತು. ತಾನು ಧರಿಸಿದ್ದ ಭಾರತೀಯ ರುಮಾಲನ್ನು ತೆಗೆಯುವುದೆಂದರೆ ದೊಡ್ಡ ಅವಮಾನವನ್ನು ಸಹಿಸಿದಂತೆ ಆಗುತ್ತಿತ್ತು. ಆದುದರಿಂದ ರುಮಾಲಿಗೆ ಶರಣು ಹೊಡೆದು ಫರಂಗಿ ಹ್ಯಾಟನ್ನು ಧರಿಸಿಕೊಂಡರೆ ಇಂತಹ ಅವಮಾನ ಪ್ರಸಂಗಗಳಿಂದಲೂ ಅದರ ಸಂಬಂಧದ ವಾದವಿವಾದದಿಂದಲೂ ತಪ್ಪಿಸಿಕೊಳ್ಳಬಹುದೆಂದು ನನಗೆ ತೋರಿತು. ಆದರೆ ಸೇಠ್ ಅಬ್ದುಲ್ಲಾ ನನ್ನ ಅಭಿಪ್ರಾಯವನ್ನು ಒಪ್ಪಲಿಲ್ಲ. "ನೀವು ಹಾಗೇನಾದರೂ ಮಾಡಿದರೆ ಅದರ ಪರಿಣಾಮ ಬಹಳ ಕೆಟ್ಟದಾಗುತ್ತದೆ. ಭಾರತದ ರುಮಾಲನ್ನೇ ಹಾಕಿಕೊಳ್ಳುವೆವೆಂದು ದೃಢಸಂಕಲ್ಪ ಹೊಂದಿರುವ ಬ್ಯಾರಿಸ್ಟರರ ಸ್ಥಿತಿ, ಸಂಕಟಕ್ಕೆ ಈಡಾಗುವುದು. ರುಮಾಲು ನಿಮ್ಮ ತಲೆಗೆ ಬಹಳ ಚೆನ್ನಾಗಿ ಒಪ್ಪುತ್ತದೆ, ನೀವು ಇಂಗ್ಲಿಷ್ ಹ್ಯಾಟನ್ನು ಧರಿಸಿದರೆ ಪರಿಚಾರಕನಂತೆ ಕಾಣುತ್ತೀರಿ" ಎಂಗು ಹೇಳಿದರು. ಈ ಸಲಹೆಯಲ್ಲಿ ದೇಶಪ್ರೇಮ, ವ್ಯವಹಾರಕುಶಲತೆ ಮತ್ತು ಸ್ವಲ್ಪ ಸಂಕುಚಿತ ಭಾವ ಎಲ್ಲ ಇದ್ದವು. ವ್ಯವಹಾರ ಕುಶಲತೆ ಎದ್ದು ಕಾಣುತ್ತಿತ್ತು. ರುಮಾಲನ್ನು ಧರಿಸಬೇಕೆಂದು ಹೇಳಲು ಕಾರಣ ಅವರ ದೇಶಪ್ರೇಮವೆ. ಪರಿಚಾರಕನಾಗಿ ಕಾಣುತ್ತೇನೆಂಬ ತಿರಸ್ಕಾರದಲ್ಲಿ ಸಂಕುಚಿತ ಬುದ್ಧಿ ವ್ಯಕ್ತವಾಗುತ್ತಿತ್ತು. ಕರಾರುಬದ್ಧ ಕೂಲಿಗಳೂ ಮೂರು ಪಂಗಡದವರಿದ್ದರು. ಹಿಂದೂ, ಮುಸಲ್ಮಾನ್ ಮತ್ತು ಕ್ರೈಸ್ತರು. ಕೊನೆಯವರು, ಕ್ರೈಸ್ತರಾಗಿ ಮತಾಂತರ ಹೊಂದಿದ ಭಾರತದ ಕರಾರುಬದ್ಧ ಕೂಲಿಗಳ ಮಕ್ಕಳು. 1893ರಲ್ಲಿಯೇ ಅವರ ಸಂಖ್ಯೆ ದೊಡ್ಡದಾಗಿತ್ತು. ಅವರು ಇಂಗ್ಲಿಷ್ ಪೋಷಾಕು ಧರಿಸುತ್ತಿದ್ದರು. ಅವರಲ್ಲಿ ಬಹು ಸಂಖ್ಯೆಯವರು ಹೋಟಲುಗಳಲ್ಲಿ ಪರಿಚಾರಕರಾಗಿ ತಮ್ಮ ಜೀವನವನ್ನು ಸಂಪಾದಿಸಿಕೊಳ್ಳುತ್ತಿದ್ದರು.

ಮುಂದುವರಿಯುವುದು...

ಕರ್ನಾಟಕದಲ್ಲಿ ಕಾಂಗ್ರೆಸ್ : ಬೆಳಗಾವಿ, 1924

ಗಾಂಧಿ ಮತ್ತು ಕರ್ನಾಟಕ ಕೃತಿಯಿಂದ : ಸಂಪಾದನೆ : ಸಿದ್ದವನಹಳ್ಳಿ ಕೃಷ್ಣಶರ್ಮ

"ಗಾಂಧೀಜಿ ಅವರ ವಿಚಾರಗಳು - ಚಿಂತನೆಗಳು - ಈ ಅಂಕಣದಲ್ಲಿ ಗಾಂಧೀಜಿ ಅವರು ಕೈಗೊಂಡ ನಿಲುವು ನಿರ್ಧಾರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ಈ ಅಂಕಣವು ನಿಯತವಾಗಿ ಬರಲಿದೆ.

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಅಲ್ಲಿಗೆ ನಾನು ಹೋದರೆ ನನ್ನ ಹೃದಯ ಕರಗಬೇಕು. ಶ್ರದ್ಧೆಯೇ ಮುಖ್ಯ. ಹಸುವನ್ನು ಕಂಡರೆ ನನಗದು ತಿನ್ನುವ ಪ್ರಾಣಿ ಅಲ್ಲ. ಅದೊಂದು ಕರುಣೆಯ ಕಾವ್ಯ. ನಾನದನ್ನು ಪೂಜಿಸುತ್ತೇನೆ. ಇಡೀ ಜಗತ್ತಿನ ಎದುರು ಅದರ ಪೂಜೆಯನ್ನು ಸಮರ್ಥಿಸಿಕೊಳ್ಳುತ್ತೇನೆ. ದೇವರು ಇರುವುದು ಒಬ್ಬನೇ. ಆದರೆ ಕಲ್ಲಿನಲ್ಲಿ ಆಂಗ್ಲನಲ್ಲಿ, ಇಷ್ಟೇಯೇಕೆ ದೇಶದ್ರೋಹಿಯಲ್ಲಿ ಕೂಡ ನಾನು ದೇವರನ್ನು ಕಾಣುತ್ತೇನೆ. ಈ ಸಾಮರ್ಥ್ಯ ದೇವರದು. ದೇಶದ್ರೋಹಿಯನ್ನು ಕಂಡು ದ್ವೇಷಿಸಲಾರೆ. ಅಲ್ಲಿಯವರೆಗೆ ಒಯ್ಯುತ್ತದೆ, ನನ್ನ ಧರ್ಮ ಅಪರಿವರ್ತನವಾದಿಯಾದ ಪ್ರತಿಯೊಬ್ಬನಿಗೂ ಹೇಳುತ್ತೇನೆ. ನಿಮ್ಮ ಪಂಥಕ್ಕೆ ನೀವು ಯೋಗ್ಯರು ಎನಿಸಿಕೊಳ್ಳಬೇಕಾದರೆ, ಅಹಿಂಸಾವಾದಿಗಳಾಗಿದ್ದರೆ, ಸ್ವರಾಜ್ಯ ಪಕ್ಷದವರೊಡನೆ ಕೈಕುಲುಕಿ. ನಾವು ಮಾಡಿದ್ದಕ್ಕೆ ಕ್ಷಮಿಸಿ ಎಂದು ಕೇಳಿಕೊಳ್ಳಿ ಎನ್ನುತ್ತೇನೆ. ಯಾರೊಬ್ಬರ ಬಗ್ಗೆಯೂ ಅಸಾಧು ಭಾವನೆಯನ್ನು ತಳೆಯಲು ನಿಮಗೆ ಹಕ್ಕು ಇಲ್ಲ. ಅವರ ವಿರುದ್ಧವಾಗಿ ಒಂದೇ ಒಂದು ಮಾತನ್ನು ಹೇಳಲು ಕೂಡ ನಿಮಗೆ ಹಕ್ಕು ಇಲ್ಲ. ಈ ಉತ್ತಮ ಸೂತ್ರವನ್ನು ಅನುಸರಿಸಿ. ಇದಕ್ಕಿಂತ ಉತ್ತಮ ಸೂತ್ರವನ್ನು ನಾನು ಕೊಡಲಾರೆ. ಇದನ್ನು ಅನುಸರಿಸಲು ದೇವರು ನಿಮಗೆ ಶಕ್ತಿ ಕೊಡಲಿ. ವರ್ಷದ ಕೊನೆಯಲ್ಲಿ ಎಲ್ಲವೂ ಸರಿಹೋಗುತ್ತದೆ.

ಕಾಂಗ್ರೆಸ್ ಅಧಿವೇಶನ ನಡೆಯುವ ದಿನ ಗಾಂಧೀಜಿ ಸ್ವಾಗತಾಧ್ಯಕ್ಷರನ್ನು ಮೊದಲೇ ಕರೆದರು. ಭಾಷಣ ಕಡಿಮೆ ಮಾಡಿ ಕೆಲಸ ಹೆಚ್ಚು ಮಾಡಬೇಕು ಎಂದು ಹೇಳಿದರು. ಇದಕ್ಕಿಂತ ಮೊದಲು ನಡೆದ ಎಲ್ಲ ಕಾಂಗ್ರೆಸ್ಸುಗಳಲ್ಲೂ ಮೂರು ದಿನಗಳಲ್ಲಿ ಕಾಂಗ್ರೆಸ್ ಕಾರ್ಯಕಲಾಪ ಎಂದೂ ಮುಗಿದಿರಲಿಲ್ಲ. 4–6 ದಿನ ನಡೆಯುತ್ತಿತ್ತು. ಮೊದಲನೆಯ ದಿನ ಸ್ವಾಗತ ಭಾಷಣ, ಅಧ್ಯಕ್ಷ ಭಾಷಣ, ಇವುಗಳಲ್ಲೇ ಕಳೆದುಹೋಗುತ್ತಿತ್ತು. ಆಮೇಲೆ ಎರಡನೆಯ ದಿನ ಇತರ ಬೇರೆ ಬೇರೆ ಭಾಷಣಗಳು, ಇದೆಲ್ಲವನ್ನೂ ತಪ್ಪಿಸಿ ಅಧಿವೇಶನವನ್ನು ಆದಷ್ಟು ಕಾರ್ಯಶೀಲವಾಗಿ ಹೇಗೆ ಮಾಡಬೇಕು, ನಿಜವಾದ ಕೆಲಸವನ್ನು ಬೇಗ ಬೇಗ ಹೇಗೆ ನಡೆಸಬೇಕು ಎಂಬುದು ಗಾಂಧೀಜಿಯ ಯೋಚನೆ.

ಗಾಂಧೀಜಿಯ ಈ ಸ್ವಭಾವ ಸ್ವಾಗತಾಧ್ಯಕ್ಷರಿಗೆ ಚೆನ್ನಾಗಿ ಗೊತ್ತು. ಮೊದಲೇ ತಮ್ಮ ಸ್ವಾಗತಭಾಷಣವನ್ನು ಚಿಕ್ಕದು ಮಾಡಿಬಿಟ್ಟರು. ಕರ್ನಾಟಕದ ಬಗ್ಗೆ ಇತರ ಪ್ರಾಂತದ ಜನರಿಗೆ ಸ್ವಲ್ಪ ಮಾಹಿತಿ ಕೊಡಬೇಕಾಗಿತ್ತು. ಪೂರ್ಣ ಭಾಷಣವನ್ನು ಅವರು ಓದಲೇ ಇಲ್ಲ. ಗಾಂಧೀಜಿಯ ಅಪ್ಪಣೆಯಂತೆ ಅದರ ಸಾರಾಂಶವನ್ನು ಹೇಳಿದರು. ಅದಕ್ಕೆ 5–6 ನಿಮಿಷ ಸಾಕು ಎಂದು ಮೊದಲೇ ಗೊತ್ತಾಗಿತ್ತು. ನಿಮ್ಮ ಭಾಷಣ ಅಚ್ಚಾಗಿದ್ದರೆ ಮೊದಲು ಪ್ರತಿನಿಧಿಗಳಿಗೆ ಹಂಚಿಬಿಡಿ. ಉಳಿದವರಿಗೂ ಬಹಳ ಕಡಿಮೆ ಬೆಲೆಗೆ ಮಾರಿ ಎಂದು ಗಂಗಾಧರರಾಯರಿಗೆ ಗಾಂಧೀಜಿ ಮೊದಲೇ ಹೇಳಿದ್ದರು. ಅವರು ತಮ್ಮ ಅಧ್ಯಕ್ಷ ಭಾಷಣವನ್ನು ಅಚ್ಚು ಮಾಡಿಸಿ ತಂದಿದ್ದರು. ಅದನ್ನೂ ಹಾಗೆಯೇ ಹಂಚಿಸಿದರು. ಅವರ ಭಾಷಣವನ್ನು ಮಾರಿದ್ದರಿಂದ ಸ್ವಾಗತ ಸಮಿತಿಗೆ ಒಂದು ಸಾವಿರ ರೂಪಾಯಿಯಷ್ಟು ಹಣ ಬಂತು.

ಗಂಗಾಧರರಾಯರು ತಮ್ಮ ಆತ್ಮಕಥೆಯಲ್ಲಿ ಬರೆದ ವರ್ಣನೆ ಈಗ ನೋಡೋಣ.

ಸಭೆಯ ಪ್ರಾರಂಭದಲ್ಲಿ ಸಂಗೀತಕ್ಕೆ ಬಹಳ ಸಮಯ ಹೋಗುತ್ತದೆ. ಸಭೆ ಆರಂಭವಾಗುವುದಕ್ಕೆ ಮೊದಲೇ ಅದನ್ನು ಪ್ರಾರಂಭಿಸಬೇಕು. ಕಾರ್ಯಕ್ರಮ ಆರಂಭವಾಗುವ ಮೊದಲು 5–11 ನಿಮಿಷಗಳಲ್ಲಿ ಒಂದು ಹಾಡನ್ನು ಹಾಡಿ ಮುಗಿಸಬೇಕು. ಸಭೆ ಆರಂಭವಾಗುವ ಮೊದಲು ಮಂಟಪದಲ್ಲಿ ಗದ್ದಲ ಆಗುತ್ತದೆ. ಹಾಡುಗಳನ್ನು ಹಾಡುತ್ತಿದ್ದರೆ ಜನರು ಸುಮ್ಮನಿರುತ್ತಾರೆ. ಇದು ಒಂದು ಲಾಭವೇ ಎಂದರು. ಅವರೇ ಕಾಂಗ್ರೆಸ್ ಅಧ್ಯಕ್ಷರಾಗಿದ್ದುದರಿಂದ ಎಲ್ಲವನ್ನೂ ಅವರ ಇಚ್ಛೆಯಂತೆ ಮಾಡಬೇಕೆಂದು ನನಗೆ ಮೊದಲಿನಿಂದಲೂ ಅನಿಸುತ್ತಿತ್ತು. ಅಂತೆಯೇ ಅವರು ಹೇಳಿದಂತೆ ಎಲ್ಲ ಕಾರ್ಯಕ್ರಮವನ್ನೂ ನಿಶ್ಚಯಿಸಿದೆ. ಸಭೆ ಆರಂಭವಾಗುವುದಕ್ಕೆ 10 ನಿಮಿಷ ಮೊದಲು ಮನೆ ಬಿಡುವುದೆಂದು ಅವರು ಗೊತ್ತುಮಾಡಿದ್ದರು. ಹೊರಡುವುದಕ್ಕೆ ಮೊದಲು ಮನೆಯಲ್ಲಿದ್ದ ಎಲ್ಲರೂ ಸೇರಿ 10–15 ನಿಮಿಷ ಪ್ರಾರ್ಥನೆ ಮಾಡಿದರು. 'ವೈಷ್ಣವ ಜನತೋ' ಹಾಡು ಅವರಿಗೆ ತುಂಬ ಮೆಚ್ಚಿಗೆ, ಅವರ ಮುಖ ಆಗ ಅತ್ಯಂತ ಗಂಭೀರವಾಗಿತ್ತು. ಕಾಂಗ್ರೆಸ್ಸಿನ ಅಧ್ಯಕ್ಷ ಎಂದರೆ ಎಷ್ಟು ಹೊಣೆ ಹೊರಬೇಕೋ ಅದರ ಪೂರ್ಣ ಕಲ್ಪನೆ ಅವರಿಗೆ ಬಂದಿತ್ತು. ಯಶಸ್ವಿಯಾಗಿ ಆ ಹೊಣೆಯನ್ನು ನಡೆಸಲು ದೇವರ ಪ್ರಾರ್ಥನೆ ಎಷ್ಟು ಅಗತ್ಯವೋ ಅದರ ಚಿತ್ರ ಅವರ ಮುಖದಲ್ಲಿ ಸ್ಪಷ್ಟವಾಗಿ ಮೂಡಿತ್ತು. ಪ್ರಾರ್ಥನೆ ಮುಗಿದ ನಂತರ ವಾಡಿಕೆಯಂತೆ ಹಿಂದಿನ ಕಾಂಗ್ರೆಸ್ ಅಧ್ಯಕ್ಷ, ಕಾರ್ಯ ನಿರ್ವಾಹಕ ಮಂಡಲಿಯ ಸದಸ್ಯರು, ಕಾರ್ಯದರ್ಶಿ, ಪ್ರತಿಯೊಂದು ಪ್ರಾಂತದ ಪ್ರಮುಖ ಮುಂದಾಳುಗಳೂ ಎಲ್ಲರ ಜೊತೆಯಲ್ಲಿ ಕಾಂಗ್ರೆಸ್ಸಿನ ಆಯೋಜಿತ ಅಧ್ಯಕ್ಷ ಮಂಟಪ ಪ್ರವೇಶ ಮಾಡಬೇಕು. ಗಾಂಧೀಜಿಯೂ ಹಾಗೆ ಮಾಡಿದರು. ಮಂಟಪವು ಕಿಕ್ಕಿರಿದು ತುಂಬಿತ್ತು. ಗಾಂಧೀಜಿಯ ಇಚ್ಛೆಯಂತೆ ಹಾಡು ಕೂಡ ಪ್ರಾರಂಭವಾಗಿತ್ತು. ಎಲ್ಲರೂ ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತ ಮೇಲೆ ಹಾಡು ಮುಗಿಯಿತು. ನಾನು ನನ್ನ ಭಾಷಣ ಪ್ರಾರಂಭ ಮಾಡಿದೆ. "ವಿಷಯ ನಿಯಾಮಕ ಸಮಿತಿ ಈ ಮೊದಲೇ ಸೇರಿತ್ತು. ಇಂತಿಂಥ ವಿಷಯ ಕಾಂಗ್ರೆಸ್ಸಿನ ಮುಂದೆ ಬರಬೇಕು ಎಂದು ಗೊತ್ತಾಯಿತು. ಕಾಂಗ್ರೆಸ್ಸನ್ನು ಸ್ವರಾಜ್ಯ ಪಕ್ಷದವರ ಕಡೆಗೆ ಕೊಡಬೇಕು. ಪಾಟ್ನಾದಲ್ಲಿ ನಡೆದ ಕಾರ್ಯನಿರ್ವಾಹಕ ಮಂಡಲಿಯ ಸಭೆಯಲ್ಲಿ ಆದ ತೀರ್ಮಾನವನ್ನು ಪುಷ್ಟೀಕರಿಸುವುದೇ ಮುಖ್ಯ ಠರಾವು.

ಮುಂದುವರಿಯುವುದು...

ಡಾ. ಬಾಬು ಜಗಜೀವನರಾಮ್ :
ಬಾಬೂಜಿಯವರ ಕುರಿತು ಗಣ್ಯರ ಅನಿಸಿಕೆ (05.04.1908 – 06.07.1986)

ರುದ್ರಪ್ಪ ಹನಗವಾಡಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)



ಬಾಬೂಜಿ ಮತ್ತು ಪತ್ನಿ ಮಾಜಿ

ಜಯ ಪ್ರಕಾಶ್ ನಾರಾಯಣ ಅವರ ಅಭಿಪ್ರಾಯ – 'ಬಾಬೂಜಿ ಕೇವಲ ಒಬ್ಬ ವ್ಯಕ್ತಿಯಷ್ಟೇ ಅಲ್ಲ. ಅವರೊಬ್ಬ ರಾಜನೀತಿ ಮತ್ತು ಸಾಮಾಜಿಕ ಶಕ್ತಿಯಿದ್ದಂತೆ. ಅದ್ದರಿಂದ ಇವರ ಸಹಭಾಗಿತ್ವವಿಲ್ಲದೆ ನವಭಾರತದ ನಿರ್ವಾಣ ಕಲ್ಪನೆಯನ್ನು ಊಹಿಸಲೂ ಸಾಧ್ಯವಿಲ್ಲ.

ಸುಭಾಸ್ ಚಂದ್ರ ಬೋಸ್ ಮಾತಿನಲ್ಲಿ – "ಬಾಬೂಜಿಯವರು ಕಲ್ಕತ್ತದ ಕಾರ್ಮಿಕರು ಮತ್ತು ಹರಿಜನರನ್ನು ಸಂಘಟಿಸಿದ ರೀತಿ ಎಲ್ಲರಿಗೂ ಆದರ್ಶಪ್ರಾಯ ಮತ್ತು ಅನುಕರಣೀಯವಾಗಿದೆ. ಅವರ ಸುಧಾರಣಾ ಆಂದೋಲನವು ಈ ಶ್ರಮಿಕ ಜನರಲ್ಲಿ ಹೊಸ ಬೆಳಕನ್ನು ತೋರಿದೆ ಮತ್ತು ಅವರಲ್ಲಿ ನವಚೈತನ್ಯವನ್ನು ತಂದಿದೆ. ಬಾಬೂಜಿಯವರ ವಿಚಾರ ಧಾರೆಯಿಂದ ಪ್ರಭಾವಿತರಾಗಿರುವ ಹರಿಜನ ಯುವಕರು ಭವಿಷ್ಯದಲ್ಲಿ ಸಮಾಜದ ಹಾಗೂ ದೇಶದ ಒಳಿತನ್ನು ಸಮರ್ಥವಾಗಿ ಮಾಡಬಲ್ಲರು ಎಂಬುದರಲ್ಲಿ ಸಂದೇಹವಿಲ್ಲ.

ಲಾಲ್ ಬಹದ್ದೂರ್ ಶಾಸ್ತ್ರಿ – 'ಸ್ವಾತಂತ್ರ್ಯ ಚಳುವಳಿಯು ಭಾರತದಲ್ಲಿ ಅನೇಕ ವರ್ಷಗಳಿಂದ ನಡೆದುಕೊಂಡು ಬರುತ್ತಿದ್ದಿತ್ತಾದರೂ ಅದಕ್ಕೆ ಹೆಚ್ಚಿನ ಚಾಲನೆ ದೊರೆತದ್ದು ಮಹಾತ್ಮಗಾಂಧಿ ಮತ್ತು ಬಾಬೂಜಿ ಅವರ ಕರೆಯ ಮೇರೆಗೆ ಬಡವರು ಮತ್ತು ದಲಿತರು ಈ ಚಳುವಳಿಗೆ ಧುಮುಕಿದಾಗ ಮಾತ್ರ ಆ ಮೇಲೆಯೇ ನಾವು ಸ್ವಾತಂತ್ರ್ಯಗಳಿಸಲು ಸಾಧ್ಯವಾದದ್ದು.

ಇಂದಿರಾಗಾಂಧಿ ಅವರ ದೃಷ್ಟಿಯಲ್ಲಿ – ಬಾಬೂಜಿ ಅವರು ನವಭಾರತ ನಿರ್ಮಾಪಕರಲ್ಲಿ ಒಬ್ಬ ಪ್ರಮುಖರಾಗಿ ಈ ಶತಮಾನದ ಬಹು ಚರ್ಚಿತ ನಾಯಕರು, ಈ ದೇಶದ ಕೋಟ್ಯಾಂತರ ದಲಿತರ, ಆದಿವಾಸಿಗಳ, ಹಿಂದುಳಿದವರ ಮತ್ತು ಅಲ್ಪ ಸಂಖ್ಯಾತ ವರ್ಗಗಳವರು ಇವರನ್ನು ತಮ್ಮ ಮುಕ್ತಿಧಾಶವೆಂದು ಗೌರವಿಸುತ್ತಾರೆ.

ಅಟಲ ಬಿಹಾರಿ ವಾಜಪೇಯಿ – ಬಾಬೂಜಿಯವರು ತಮ್ಮ ಜೀವನದಲ್ಲಿ ಸಾಕಷ್ಟು ಕಹಿಯನ್ನೇ ಉಂಡರೂ ಬೇರೆಯವರಿಗೆ ಸದ್ಭಾವನೆಯ ಅಮೃತವನ್ನ ಹಂಚಿದರು. ಅವರ ಹೃದಯದಲ್ಲಿ ಸಮಾಜದ ಅಸಮಾನತೆಯ ವಿರುದ್ಧ ಜ್ವಾಲಾಮುಖಿಯು ಉರಿಯುತ್ತಿದ್ದುದು ನಿಜ. ಒಮ್ಮೊಮ್ಮೆ ಅದರ ಕಿಡಿಗಳೂ ಹೊರಹೊಮ್ಮುತ್ತಿದ್ದವು. ಆದಾಗ್ಯೂ ಅವರು ಯಾವಾಗಲೂ ರಾಷ್ಟ್ರ ಏಕತೆ, ಸಾಮಾಜಿಕ ಸಾಮರಸ್ಯ, ಸೌಹಾರ್ದತೆಯನ್ನು ಕಾಪಾಡಲು ಮಹತ್ತರವಾಗಿ ಶ್ರಮಪಟ್ಟರು.

ಶಂಕರ್ ದಯಾಳ್ ಶರ್ಮ – 'ಶೋಷಣೆ ರಹಿತ ಮತ್ತು ಮಾನವೀಯತೆಯ ನೆಲೆಗಟ್ಟಿನ ಮೇಲೆ ನಿಂತ ಸಮಾಜವನ್ನು ನಿರ್ಮಾಣ ಮಾಡಲು ಅವಿರತ ಶ್ರಮ ವಹಿಸಿದವರೆಂದೇ ಬಾಬೂಜಿಯವರನ್ನು ನೆನಪಿಸಿಕೊಳ್ಳಲಾಗುವುದು. ಸ್ವಾತಂತ್ರೋತ್ತರ ಭಾರತದಲ್ಲಿ ಗಣನೀಯ ಸಾರ್ವಜನಿಕ ಸೇವೆಯ ವಿಶೇಷ ದಾಖಲೆಯನ್ನೇ ಹೊಂದಿರುವ ಬಾಬು ಜಗಜೀವನರಾಮ್‌ರು ಆಧುನಿಕ ಭಾರತೀಯ ರಾಜ್ಯಾಂಗದ ಬೆಳವಣಿಗೆಗೆ ಪರಮಾತಿ ಶ್ರೇಷ್ಠವಾದ ಕೊಡುಗೆಯನ್ನು ನೀಡಿದ್ದಾರೆ. ರಾಷ್ಟ್ರದ ಸೇವೆಗಾಗಿ ತಮ್ಮ ಸುದೀರ್ಘ ಬದುಕನ್ನೇ ಮೀಸಲಿಟ್ಟ, ಮಹಾಪುರುಷರು ಜಗಜೀವನ ರಾಮ್.

'ಗಾಂಧೀಜಿ ಅವರ ಮಾತುಗಳಲ್ಲಿ – 'ಅಗ್ನಿಯಲ್ಲಿ ಪುಟವಿಟ್ಟಚಿನ್ನದಂತೆ ಹೊರಹೊಮ್ಮಿದ ಬಾಬು ಜಗಜೀವನರಾಮರ ಬಗ್ಗೆ ನನ್ನ ಹೃದಯ ಮತ್ತು ಗೌರವಗಳಿಂದ ತುಂಬಿದೆ. ನಾನು ಅವರನ್ನು ಹೃತೂರ್ವಕವಾಗಿ ಪ್ರಶಂಸಿಸುತ್ತೇನೆ.'

ಡಾ. ಬಿ. ಆರ್. ಅಂಬೇಡ್ಕರ್ ದೃಷ್ಟಿಯಲ್ಲಿ – 'ಬಾಬೂಜಿ ಅವರು ಭಾರತದಲ್ಲಿ ಹೊಸ ವಿಚಾರಗಳ ಹರಿಕಾರರು, ಭವಿಷ್ಯದ ದ್ರಷ್ಟಾರರು ಹಾಗೂ ಋಷಿ ಸದೃಶರಾದ ಉತ್ತಮ ನಾಯಕರಾಗಿದ್ದಾರೆ. ಜನರು ಅಸ್ಪೃಶ್ಯರೇ ಆಗಿರಲಿ ಅಥವಾ ಬ್ರಾಹ್ಮಣರೇ ಆಗಿರಲಿ ಬಾಬೂಜಿ ಯಾವಾಗಲೂ ಸಮಾಜದ ಎಲ್ಲ ವರ್ಗದವರ ಕಲ್ಯಾಣವನ್ನೇ ಯೋಚಿಸುತ್ತಾರೆ.



ಬಾಬೂಜಿ ರೈಲ್ವೆ ಸಚಿವರಾಗಿದ್ದಾಗ ಮುಖ್ಯಮಂತ್ರಿಗಳ ಸಭೆಯಲ್ಲಿ, 14.11.1961



ಜಗಜೀವನರಾಂ ಅವರು ರಕ್ಷಣಾ ಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ ಸಂದರ್ಭ – 1971

ಗಾಂಧೀಜಿಯ ಕೊನೆಯ ಉಪವಾಸಗಳು

'ಮಹಾತ್ಮ ಗಾಂಧಿ, ಜಗತ್ತಿಗೆ ಅವರ ಸಂದೇಶ' ಕೃತಿಯಿಂದ ಆಯ್ದ ಭಾಗಗಳು
ಲೇಖಕರು : ಲೂಯಿ ಫಿಷರ್

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಪ್ರಾರ್ಥನೆಗೆ ಮೊದಲೇ ಸಾವು.

'ಉಪವಾಸ ಮುಗಿದ ಮೊದಲನೆಯ ದಿನ ಗಾಂಧಿಯನ್ನು ಕುರ್ಚಿಯ ಮೇಲೆ ಪ್ರಾರ್ಥನೆಗೆ ಎತ್ತಿಕೊಂಡು ಹೋದರು, ಕ್ಷೀಣ ಧ್ವನಿಯಲ್ಲಿ ಭಾಷಣ ಮಾಡುತ್ತಾ, ಹಿಂದೂ ಪ್ರಾಬಲ್ಯದಲ್ಲಿ ವಿಶ್ವಾಸವಿದ್ದ, ಯುದ್ಧ ಮನೋಭಾವದ, ರಾಷ್ಟ್ರೀಯ ಸೇವಕ ಸಂಘದ ಮೂಲ ಕರ್ತೃವಾದ ಹಿಂದೂ ಮಹಾ ಸಭೆ ದೆಹಲಿಯ ಶಾಂತಿ ಪ್ರಮಾಣವನ್ನು ತಿರಸ್ಕರಿಸಿತೆಂದು ಹೇಳಿ ದುಃಖ ಸೂಚಿಸಿದನು. ಮರುಸಂಜೆ ಮಹಾತ್ಮ ಪ್ರಾರ್ಥನಾ ಸಭೆಯಲ್ಲಿ ಮಾತನಾಡುತ್ತಿದ್ದಾಗ ಸಿಡಿತದ ಸದ್ದಾಯಿತು. ಸಭಿಕರಿಗೆ ಗಾಬರಿಯಾಯಿತು. "ಗಾಬರಿಪಡಬೇಡಿ, ನನ್ನ ಮಾತು ಕೇಳಿ," ಎಂದು ಗಾಂಧಿ ಹೇಳಿದರು. ಆಗ ಹತ್ತಿರದ ತೋಟದ ಗೋಡೆಯ ಮೇಲಿಂದ ನಾಡ ಬಾಂಬೊಂದು ಎಸೆಯಲ್ಪಟ್ಟಿತ್ತು.

ಮಾರನೆಯ ದಿನ ಉಪವಾಸ ಮುಗಿದ ಮೇಲೆ ಮೊದಲನೆಯ ಬಾರಿ ಗಾಂಧಿ ಪ್ರಾರ್ಥನೆಗೆ ನಡೆದು ಬಂದರು. ಬಾಂಬು ಸಿಡಿದಾಗಲೂ ಸಮಾದಾನದಿಂದಿದ್ದುದಕ್ಕಾಗಿ ಎಲ್ಲರೂ ಆತನನ್ನು ಅಭಿನಂದಿಸಿದ್ದರು. ಆತನು ಅದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಲಿಲ್ಲ. "ಆ ಸಿಡಿತದಿಂದ ಬಿದ್ದರೂ ನಗುತ್ತಿದ್ದು, ಹೊಡೆದವನ ವಿಚಾರದಲ್ಲಿ ಕ್ರೋಧವಿಲ್ಲದಿದ್ದರೆ ಆಗ ಅಭಿನಂದಿಸಬೇಕು. ಹಾಗೆ ಹೊಡೆದ ಯುವಕನನ್ನು ಯಾರೂ ಅಲ್ಲಗಳೆಯಬಾರದು, ನಾನು ಹಿಂದೂ ಮತದ ಶತ್ರುವೆಂದು ಆತನ ಅಭಿಪ್ರಾಯವಿರಬಹುದು. ಆ ಯುವಕನ ಅಭಿಪ್ರಾಯ ನನ್ನ ಅಭಿಪ್ರಾಯಕ್ಕೆ ವಿರುದ್ಧವಾದುದರಿಂದ ಆತನು ಕೆಟ್ಟವನಲ್ಲ. ಇಲ್ಲಿ ಸೇರಿದ್ದವರು ಆತನ ಮನಸ್ಸನ್ನು ಪರಿವರ್ತಿಸಲು ಪ್ರಯತ್ನಿಸಬೇಕು," ಎಂದು ಬೇಡಿದನು.

ಆ ಯುವಕ ಮದನಲಾಲನೆಂಬ ಪಂಜಾಬಿನ ನಿರಾಶ್ರಿತ ಗಾಂಧಿಗೆ ಕೊಟ್ಟ ಪ್ರಮಾಣಕ್ಕನುಸಾರವಾಗಿ ಮಸೀದಿಗಳನ್ನು ಬಿಡುವು ಮಾಡಿಸುವವರೆಗೂ ದೆಹಲಿಯ ಒಂದು ಮಸೀದಿಯಲ್ಲಿ ವಾಸವಾಗಿದ್ದನು. ವಿಚಾರಣೆಯಾದಾಗ "ಪಾಕಿಸ್ತಾನದಲ್ಲಿ ಆದ ಭಯಂಕರ ಘಟನೆಗಳನ್ನು ಕಣ್ಣಾರೆ ಕಂಡಿದ್ದೇನೆ. ಪಂಜಾಬಿನ ಪಟ್ಟಣಗಳಲ್ಲಿ ಹಿಂದುಗಳನ್ನು ಗುಂಡಿನಿಂದ ಹೊಡೆದುದನ್ನು ಕಂಡಿದ್ದೇನೆ," ಎಂದು ಹೇಳಿದನು. ರೋಷದಿಂದ ಗಾಂಧಿ ಯನ್ನು ಕೊಲ್ಲಬೇಕೆಂದು ರಾಷ್ಟ್ರೀಯ ಸೇವಕ ಸಂಘದ ಒಂದು ಸಂಸ್ಥೆಗೆ ಸೇರಿದ್ದನು. ಆತನ ಪ್ರಯತ್ನ ವಿಫಲವಾಗಿ ಸೆರೆಸಿಕ್ಕಲು ಆತನ ಸಹೋದ್ಯೋಗಿ ನಾಥುರಾಂ ವಿನಾಯಕ ಗೋಡ್ಸೆ ಬೊಂಬಾಯಿಯಿಂದ ದೆಹಲಿಗೆ ಬಂದನು, 35 ವರ್ಷದ ಗೋಡ್ಸೆ ಪೂನಾದಲ್ಲಿ ಹಿಂದೂ ಮಹಾಸಭೆಯ ವಾರಪತ್ರಿಕೆಯ ಸಂಪಾದಕನೂ, ಪ್ರಕಟನಕಾರನೂ ಆಗಿದ್ದನು. ದೊಡ್ಡ ಬ್ರಾಹ್ಮಣ ವಂಶಕ್ಕೆ ಸೇರಿದವನು. ಅವನನ್ನೂ, ಮದನಲಾಲ್ ಮತ್ತು ಇತರ ಏಳು ಜನರನ್ನೂ, ವಿಚಾರಣೆಗೆ ಗುರಿಮಾಡಿದರು. ಆರು ತಿಂಗಳವರೆಗೆ ಮೊಕದ್ದಮೆ ನಡೆಯಿತು. ಗೋಡ್ಸೆ ಸಾಕ್ಷ್ಯ ಕೊಡುತ್ತಾ "ಹಿಂದೂ ಧರ್ಮದ ಮೇಲೆ ನಡೆಯುತ್ತಿದ್ದ ಅತ್ಯಾಚಾರ, ಹೊರಗೆ, ಇಸ್ಲಾಂ ಒಳಗೆ ಗಾಂಧಿಯನ್ನು ಎದುರಿಸಬೇಕಾಗಿದ್ದ, ಅದರ ಕರಾಳ ಭವಿಷ್ಯದ ವಿಚಾರವಾಗಿ ನಾನು ತೀವ್ರವಾಗಿ ಆಲೋಚಿಸಿದೆ" ಎಂದಿದ್ದನು.

ಮುಂದುವರಿಯುವುದು...

ನಾಸ್ತಿಕ ಗೋ. ರಾಮಚಂದ್ರರಾಯರು ಮತ್ತು ಗಾಂಧೀಜಿ

– ಡಾ. ಎಚ್.ಎಸ್. ದೊರೆಸ್ವಾಮಿ



'ರಾಮಚಂದ್ರರವರೇ, ನೀವು ದೇವರನ್ನು ನಂಬುವವರಲ್ಲ. ಎಲ್ಲಾ ಜವಾಬ್ದಾರಿಯನ್ನೂ ನೀವೇ ವಹಿಸಿಕೊಂಡು ನಿಮ್ಮ ಸಂಕಟಮಯ ಸಂದರ್ಭಗಳನ್ನು ನೀವೇ ನಿರ್ವಹಿಸಿಕೊಳ್ಳುತ್ತೀರಿ. ಈ ದೃಷ್ಟಿಯಿಂದ ನೀವು ನನಗಿಂತ ಒಂದು ಹೆಜ್ಜೆ ಮುಂದೆ ಇರುವವರು. ನಾನು ಅಂತಹ ಸಂಕಟ ಪರಿಸ್ಥಿತಿಯಲ್ಲಿ ಅಸಹಾಯಕನಾಗಿ ಅನ್ಯಥಾ ಶರಣಂ ನಾಸ್ತಿ ಎಂದು ದೇವರಿಗೆ ಮುಗಿಬೀಳುತ್ತೇನೆ. ಅವನು ನನಗೆ ಮಾರ್ಗದರ್ಶನ ಮಾಡುತ್ತಾನೆ' ರಾಮಚಂದ್ರರಾಯರು ಗಾಂಧಿಯವರ ಆಶ್ರಮದಲ್ಲಿದ್ದುಕೊಂಡು **'An atheist with Gandhi'** ಎಂಬ ಕಿರುಹೊತ್ತಿಗೆ ಬರೆದಿದ್ದಾರೆ. ಅದನ್ನು ಗಾಂಧಿಯವರು ಸ್ಥಾಪಿಸಿದ **'Navajeevan Publication'** ಹೊರತಂದಿದೆ.

ರಾಮಚಂದ್ರರಾಯರಿಗೆ ರಾಜಕೀಯ ಪಕ್ಷಗಳ ಹಾವಳಿ ತುಂಬ ಬೇಸರ ತಂದಿತು. ಅವರಿಗೆ ನನ್ನಂತಹ ಗಾಂಧಿ ಮಾರ್ಗಿಗಳನ್ನು ಕಟ್ಟಿಕೊಂಡು ದೆಹಲಿಗೆ ಕಾಲ್ನಡಿಗೆಯಲ್ಲಿ ಹೋಗಿ ಪಾರ್ಲಿಮೆಂಟ್ ಭವನದ ಮುಂದೆ ಧರಣಿ ಮಾಡಬೇಕೆಂಬ ಆಸೆ ಇತ್ತು. ಇದಕ್ಕಾಗಿ ಸಕಲ ಸಿದ್ಧತೆಯನ್ನೂ ಅವರು ಮಾಡಿಕೊಂಡಿದ್ದರು. ಎಲ್ಲ ರಾಜಕೀಯ ಪಕ್ಷಗಳ ಬಾವುಟಗಳನ್ನೂ ಒಟ್ಟುಗೂಡಿಸಿ ಅವುಗಳನ್ನು ಒಂದು ದಂಡಕ್ಕೆ ಬಿಗಿದು ಕಟ್ಟಿ ಕೊಂಡೊಯ್ಯಬೇಕೆಂದು ಯೋಚಿಸಿದ್ದರು. ಪಕ್ಷ ರಾಜಕೀಯ ತೊಲಗಲಿ. ನಿಜವಾದ ಪ್ರಜಾರಾಜ್ಯ ಸ್ಥಾಪನೆಯಾಗಲಿ ಎಂಬ ಘೋಷಣೆಯೊಂದಿಗೆ ಪಾದಯಾತ್ರೆ ಆರಂಭಗೊಳಿಸುವುದೆಂದು ತೀರ್ಮಾನ ತೆಗೆದುಕೊಂಡಿದ್ದರು. ಆದರೆ ಆಕಸ್ಮಿಕವಾಗಿ ಅವರಿಗೆ ಹೃದಯಾಘಾತವಾಗಿ ಸಾವನ್ನಪ್ಪಿದರು. ಅವರ ಕನಸು ನನಸಾಗದೆ ಉಳಿಯಿತು.

ಗೋರಾ ಮೊದಲನೆಯ ಅಂತರರಾಷ್ಟ್ರೀಯ ನಾಸ್ತಿಕ ಸಮ್ಮೇಳನವನ್ನು ಬೆಜವಾಡದಲ್ಲಿ ನೆರವೇರಿಸಿದರು. ದೇಶ–ವಿದೇಶಗಳಿಂದ ನಾಸ್ತಿಕ ಪ್ರತಿನಿಧಿಗಳು ಈ ಸಮ್ಮೇಳನಕ್ಕೆ ಬಂದಿದ್ದರು. ಅವರು ಜೀವಂತ ಇದ್ದಾಗಲೇ ಎರಡು ಅಂತರರಾಷ್ಟ್ರೀಯ ನಾಸ್ತಿಕ ಸಮ್ಮೇಳನಗಳು ಯುರೋಪಿಯನ್ ರಾಷ್ಟ್ರಗಳಲ್ಲಿ ನಡೆದವು. ಈಗ ಅವರ ಮಗ ಡಾ. ಲವಣಂ ಈ ಜವಾಬ್ದಾರಿಯನ್ನು ಹೊತ್ತು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ.

ಮುಂದುವರಿಯುವುದು...

ನವ ಭಾರತ ನಿರ್ಮಾಪಕರು : ಲೋಕ ಮಾನ್ಯರು : ಶತದಿನ ಸಂಸ್ಮರಣೆ

– ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)


ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಲಕ್ಷಾಂತರ ಜನರು ಹೋರಾಡಿದ್ದಾರೆ. ತಮ್ಮ ಸ್ವಂತ ಹಿತಾಸಕ್ತಿಗಳನ್ನು ಬದಿಗಿಟ್ಟು ದೇಶವನ್ನು ವಿದೇಶಿಯರಿಂದ ಮುಕ್ತಗೊಳಿಸಲು ಜೀವನವನ್ನೇ ಪಣಕ್ಕಿಟ್ಟು ಶ್ರಮಿಸಿದ್ದಾರೆ. ಅಂತಹ ತ್ಯಾಗ, ನಿಸ್ವಾರ್ಥ ದೇಶಪ್ರೇಮಿಗಳ ಜೀವನವನ್ನು ಪರಿಚಯಿಸಲು ಈ ಅಂಕಣ.

ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರಿಗಾಗುತ್ತಿರುವ ಶೋಷಣೆ, ಅನ್ಯಾಯ, ಅಸಮಾನತೆ, ಅವಕಾಶಗಳ ನಿರಾಕರಣೆ ವಿಚಾರಗಳನ್ನು ಭಾರತೀಯರಲ್ಲಿ ಹಂಚಿಕೊಳ್ಳಲು ಆಶಿಸಿದ್ದರು. ಗಾಂಧೀಜಿ ಅವರು ತಿಲಕರ ಭೇಟಿಯ ಅನುಭವವನ್ನು ಗಾಂಧಿ ಅವರು 'ನನ್ನ ಸತ್ಯಾನ್ವೇಷಣೆ' ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. 'ನಾನು ಲೋಕಮಾನ್ಯರನ್ನು ಪ್ರಥಮ ಬಾರಿಗೆ ಭೇಟಿಯಾದ ನೆನಪುಗಳಿವೆ. ಇದು 1896ರಲ್ಲಿ. ಭಾರತಕ್ಕೆ ಆಗ ನನ್ನ ಪರಿಚಯವೇ ಇರಲಿಲ್ಲ. ದಕ್ಷಿಣ ಆಫ್ರಿಕದಲ್ಲಿರುವ ಭಾರತೀಯರ ಸ್ಥಿತಿಗತಿ ಕುರಿತಂತೆ ವಿವರಿಸಲು ಪುಣೆಯಲ್ಲಿ ಸಾರ್ವಜನಿಕ ಸಭೆಯೊಂದನ್ನು ಏರ್ಪಡಿಸಬೇಕಾಗಿತ್ತು. ನಾನು ಟಿಳಕರನ್ನು ಭೇಟಿಯಾಗಿದ್ದು ಈ ಸಂಬಂಧದಲ್ಲೇ. ಸಾರ್ವಜನಿಕ ಕ್ಷೇತ್ರದ ಈ ವ್ಯಕ್ತಿಯನ್ನು ನಾನು ಹೆಸರಿನಿಂದ ಮಾತ್ರ ಬಲ್ಲೆ. ನನ್ನ ಸಹೋದರರ ಸ್ನೇಹಿ ಸೋಹಾನಿ ನನ್ನನ್ನು ಲೋಕಮಾನ್ಯರಲ್ಲಿಗೆ ಕರೆದೊಯ್ದು ನಾನು ಬಂದ ಉದ್ದೇಶವೇನೆಂದು ಅವರು ಹೇಳಿದರು. ನನ್ನ ರಾಯಬಾರದ ಉದ್ದೇಶವನ್ನು ಕೂಡಲೇ ವಿವರಿಸಿದೆ. ಲೋಕಮಾನ್ಯರು ನುಡಿದರು. “ಹಿಗೋ, ನೀವು ಪುಣೆಗೆ ಆಗಂತಕರು, ನಿಮಗೆ ಸಾರ್ವಜನಿಕ ವ್ಯಕ್ತಿಗಳ ಪರಿಚಯವಿಲ್ಲ. ಅಥವಾ ಸ್ಥಳೀಯ ಭಿನ್ನಾಭಿಪ್ರಾಯಗಳ ಬಗ್ಗೆಯೂ ನಿಮಗೇನೂ ತಿಳಿದಿಲ್ಲ. ಇಲ್ಲಿ ಎರಡು ರಾಜಕೀಯ ಸಂಘಟನೆಗಳಿವೆ. ಒಂದು ದಖ್ಖನ್ ಸಭಾ, ಇನ್ನೊಂದು ಸಾರ್ವಜನಿಕ ಸಭಾ. ದುರ್ದೈವದಿಂದ ಇವೆರಡೂ ಒಂದೇ ವೇದಿಕೆಯ ಮೇಲೆ ಸೇರುವುದಿಲ್ಲ. ಒಂದು ಸಂಘ ಸಭೆ ಏರ್ಪಡಿಸಿದರೆ ಇನ್ನೊಂದು ಅದರಲ್ಲಿ ಭಾಗವಹಿಸುವುದಿಲ್ಲ. ನಿಮ್ಮ ಉದ್ದೇಶದ ಬಗ್ಗೆ ಅನುಕಂಪ ತಾಳುವುದು ಅಗತ್ಯ. ಆದ್ದರಿಂದ ಯಾವುದೇ ರಾಜಕೀಯ ಸಂಸ್ಥೆಯೊಂದಿಗೆ ಸಂಬಂಧ ಕಲ್ಪಿಸಬಾರದು. ನೀವು ನನ್ನನ್ನು ನೋಡಿ ಒಳ್ಳೆಯದು ಮಾಡಿದಿರಿ. ದಖ್ಖನ್ ಸಭಾದ ಗೋಖಲೆಯವರನ್ನು ನೀವು ಭೇಟಿಯಾಗಬೇಕು. ನೀವು ಏರ್ಪಡಿಸುವ ಸಾರ್ವಜನಿಕ ಸಭೆಯಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು. ನೀವು ಗೋಖಲೆಯವರಿಗೆ ತಿಳಿಸಿರಿ. ನನ್ನಿಂದ ಏನೂ ತೊಂದರೆ ಇಲ್ಲ ಎಂದು. ಇಂತಹ ಸಭೆಗಳ ಅಧ್ಯಕ್ಷತೆಯನ್ನು ವಹಿಸಬೇಕಾದವರು ಪಕ್ಷಾತೀತರೂ, ಪ್ರಭಾವಶಾಲಿಗಳೂ, ಚಿರಪರಿಚಿತರೂ ಆಗಿರಬೇಕು. ಪುಣೆಯಲ್ಲಿ ಇಂಥಹ ವ್ಯಕ್ತಿ ಡಾ. ಭಂಡಾರ್ಕರ್.



“ನೀವು ಅವರನ್ನು ಭೇಟಿಯಾಗಿ ನಾನು ಮತ್ತು ಗೋಖಲೆ ಇಬ್ಬರೂ ಹೇಳಿದ್ದೇವೆಂದು ಆಹ್ವಾನಿಸಿದರೆ ಖಂಡಿತ ಒಪ್ಪಿಕೊಳ್ಳುತ್ತಾರೆ. ಅವರು ಹಿಂದೇಟು ಹಾಕಿದರೂ ನೀವು ಬಲವಂತಪಡಿಸಬೇಕು. ಅಧ್ಯಕ್ಷತೆಗೆ ಅವರನ್ನು ಒಪ್ಪಿಸಿರಿ. ಉಳಿದದ್ದೆಲ್ಲ ಸುಲಭವಾಗಿ ನಡೆಯುವುದು. ಏನಾಯಿತೆಂಬುದನ್ನು ದಯವಿಟ್ಟು ನನಗೆ ತಿಳಿಸಿರಿ.” ಇದು ಲೋಕಮಾನ್ಯರೊಂದಿಗಿನ ನನ್ನ ಪ್ರಥಮ ಭೇಟಿ. ಅವರ ಜನಪ್ರಿಯತೆಯ ನಿದರ್ಶನವನ್ನು ಇದು ನನಗೆ ಒದಗಿಸಿತು. ತಾವೆಂದೂ ಭೇಟಿಯಾಗದ ತರುಣನಿಗೆ ಲೋಕಮಾನ್ಯರು ಇಷ್ಟು ಮಾರ್ಗದರ್ಶನ ನೀಡಬಲ್ಲರೆಂದು ನಾನು ಭಾವಿಸಿರಲಿಲ್ಲ. ನನ್ನ ಜೀವನದಲ್ಲಿಯೇ ಇದೊಂದು ಅವಿಸ್ಮರಣೀಯ ಭೇಟಿ”. ಅನಂತರ ಫರ್ಗ್ಯೂಸನ್ ಕಾಲೇಜಿನಲ್ಲಿ ಗೋಖಲೆಯವರನ್ನು ಗಾಂಧೀಜಿ ಭೇಟಿಯಾದರು. ಗಾಂಧೀಜಿ ಅವರನ್ನು ಗೋಖಲೆ ಪ್ರೀತಿಯಿಂದ ಸ್ವಾಗತಿಸಿದರು. ಡಾ. ಭಂಡಾರ್ಕರ್ ತಂದೆಯ ವಾತ್ಸಲ್ಯದಿಂದ ಗಾಂಧೀಜಿ ಅವರನ್ನು ಬರಮಾಡಿಕೊಂಡರಲ್ಲದೆ ಅಧ್ಯಕ್ಷತೆ ವಹಿಸಲು ಒಪ್ಪಿಕೊಂಡರು. ಅವರಿಗೆ ಪುಣೆ ಮತ್ತು ಮುಂಬೈಗಳೆರಡರಲ್ಲೂ ಪ್ರೋತ್ಸಾಹ ದೊರೆಯಿತು. ಗಾಂಧೀಜಿ ಹೀಗೆ ಬರೆದಿದ್ದಾರೆ. “ಸರ್ ಫಿರೋಜ್‌ಷಾ ನನಗೆ ಹಿಮಾಲಯದಂತೆ, ಲೋಕಮಾನ್ಯರು ಸಾಗರದಂತೆ, ಗೋಖಲೆ ಅವರು ಗಂಗೆಯಂತೆ ಗೋಚರಿಸಿದರು. ಹಿಮಾಲಯ ಕೈಗೆಟುಕದ್ದು, ಸಾಗರಕ್ಕೆ ಸುಲಭವಾಗಿ ಹೋಗಲಾರದು. ಆದರೆ ಗಂಗೆ ಎಲ್ಲರನ್ನೂ ಆಹ್ವಾನಿಸುವವಳು”. ಎಂದು ತಿಲಕರ “ಒಳಗೊಳ್ಳುವ' ದೃಷ್ಟಿಕೋನವನ್ನು ಪ್ರೀತಿಯಿಂದ ಪ್ರಶಂಸಿಸಿದ್ದಾರೆ. ಇದೊಂದು ಐತಿಹಾಸಿಕ ಭೇಟಿಯಾಗಿತ್ತು. ಗೋಖಲೆ ಅವರನ್ನು ಗಾಂಧಿ ಅವರು ರಾಜಕೀಯ ಗುರುವಾಗಿ ಸ್ವೀಕರಿಸಿದರು. ಟಿಳಕರ ಅಭಿಮಾನಿಯಾಗಿ ಬೆಳೆದರು.

ಮುಂದುವರಿಯುವುದು....



ಸಂಸತಿನಲ್ಲಿ ಬಾಲ ಗಂಗಾಧರ ತಿಲಕ್



ಮಹಾರಾಷ್ಟ್ರದಲ್ಲಿ ಗಣೇಶೋತ್ಸವ ಪ್ರಾರಂಭದ ಸಂದರ್ಭ

ಅಕ್ಷರದವ್ವ : ಸಾವಿತ್ರಿಬಾ ಪುಲೆ

ಎಸ್.ಎಂ. ಶ್ಯಾಮಲ, ಅಧ್ಯಾಪಕರು (ನಿ)

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಜ್ಯೋತಿ ರಾವ್ 'ಮಂಗಲಷ್ಟಕ' ಅಥವಾ ಮದುವೆಯ ಹಾಡು ಬರೆಯಲು ಸಾವಿತ್ರಿಯಿಂದ ಸ್ಫೂರ್ತಿ ಪಡೆದಿರಬೇಕು:

ವಿವಾಹದಲ್ಲಿ ಮದುಮಗ – ಮದುಮಗಳು ತೆಗೆದುಕೊಳ್ಳುವ ಅವರು ರೂಪಿಸಿದ ನೀತಿ ಈ ಕೆಳಕಂಡಂತಿತ್ತು. ಮತ್ತು ವಿವಾಹ ಸಂದರ್ಭದಲ್ಲಿ ಅದರಂತೆ ಪ್ರತಿಜ್ಞೆ ಮಾಡಬೇಕಾಗಿತ್ತು.

ಮದುಮಗ: ದೈವನಿಯಮದಂತೆ ನಿನ್ನ ಮನೆಯ ಪದ್ಧತಿ ನಡೆಸು, ಸತ್ಯವೆಲ್ಲಕ್ಕಿಂತ ದೊಡ್ಡದು, ಗೌರವಿಸು, ಆಜ್ಞಾನಿಗಳಿಗೆಲ್ಲಾ ಸಮನಾಗಿ ಕಲಿಸು, ಜ್ಞಾನವನ್ನು ಅವರಿಗೆ ತಿಳಿಸು: ಮದುವೆಯಲಿ ನಿನ್ನ ವರಿಸುವೆ ಪ್ರೀತಿಯಿಂದ, ನಿನ್ನ ಕೆಲಸ ಕಾರ್ಯಗಳಿಗೆ ಶುಭ ಮಂಗಳ ಸಾವಧಾನ

ಮದುಮಗಳು: ದಿನವೂ ನನ್ನ ಗೌರವಿಸಿದರೂ ನೀ, ಮತ್ತು ನಿನ್ನ ನಡತೆಯು ತೃಪ್ತಿದಾಯಕವಾಗಿದ್ದರೂ ಸಹ, ಮಹಿಳೆಯರು ನಾವೆಲ್ಲಾ ಶೋಷಿತರು, ಸ್ವೀಕರಿಸುವ ಹೇಗೆ ನನ್ನ ನೀ? ಸ್ವತಂತ್ರತೆಯನ್ನು ಅನುಭವಿಸಿ ತಿಳಿದಿದೆ ಮತ್ತು ನಾವು ಆತ್ಮ ಗೌರವ ಕಂಡೆವು, ನಮಗೆ ಆಸರೆಯಾಗಿರುತ್ತೇನೆಂದು ಪ್ರತಿಜ್ಞೆ ಈಗ ಮಾಡುವೆಯಾ ನೀ? ಶುಭ ಮಂಗಳ ಸಾವಧಾನ

ಮದುಮಗ: ಮಹಿಳೆಯರೆಲ್ಲರ ಹಕ್ಕುಗಳಿಗೆ ಹೋರಾಡುವೆ. ನಾ ಖರ್ಚಿನ ಲೆಕ್ಕವನ್ನಿಡದೆ ಎಲ್ಲಾ ಮಹಿಳೆಯರ ನಾ ಸಹೋದರಿಯರಂತೆ ಗೌರವಿಸುವೆ ಮತ್ತು ನಿನ್ನ ಮಾತ್ರ ಪ್ರೀತಿಯಿಂದ ಕಾಣುವೆ. ನನ್ನ ಕರ್ತವ್ಯದ ಭಯದಿಂ ನಿನ್ನ ಆರೈಕೆ ಮಾಡುವೆ ಶುಭ ಮಂಗಳಾ ಸಾವಧಾನ

ಮದುಮಗಳು: ಸುತ್ತಲೂ ಇರುವ ಸೋದರತೆಯ ನಡುವೆ, ನಿನ್ನ ಗಂಡನಾಗಿ ಸ್ವೀಕರಿಸುವೆ, ನಿನಗೆ ನೀಡಿದ ಈ ವಚನವನ್ನು ಮುರಿಯದೆ ಎಂದಿಗು ನಾ ಮಾಡುವೆ ನನ್ನ ಕರ್ತವ್ಯ, ನಮ್ಮೆಲ್ಲಾ ಹೊರೆಯನ್ನು ಬದಿಗೆ ಸರಿಸಿ ಜನ ಕಲ್ಯಾಣಕ್ಕಾಗಿ ಹೋರಾಡುವ ನಾವು, ಪ್ರತಿಜ್ಞೆಮಾಡುವೆ ನಿನ್ನ ಕೈಹಿಡಿದು ಎಲ್ಲರ ಮುಂದೆ ಶುಭ ಮಂಗಳಾ ಸಾವಧಾನ



ತೋರಿಸಿ, ವೃದ್ಧ, ಅಂಗವಿಕಲ ಮತ್ತು ಮಕ್ಕಳಿಗೆ ನೆರವು ನೀಡಿ, ಅವರಿಗೆ ಜ್ಞಾನ ಕಲಿಸಿ, ಹರುಷದಿಂದ ಹೂಗಳ ಚೆಲ್ಲಿರಿ ಎಲ್ಲೆಲ್ಲಿಯೂ ಹಾಗೂ ತಟ್ಟಿರಿ ಚಪ್ಪಾಳೆಯನ್ನು ನಿಮ್ಮ ಕೈಗಳಿಂದ ಶುಭ ಮಂಗಳಾ ಸಾವಧಾನ

ಅಂದಿನ ಸಾಹಿತಿಗಳಾಗಿದ್ದ, ವಾಳವೇಕರರು ರಚಿಸಿದ ಕೊಲ್ಹಾಪುರದ ಮಹಾರಾಣಿ, ಛತ್ರಪತಿ ತಾರಾರಾಣಿ ಅವರ ಜೀವನ ಚರಿತ್ರೆ, ಲೋಕಾರ್ಪಣೆ ಸಮಾರಂಭದ ಅಧ್ಯಕ್ಷತೆಯನ್ನು ಸಾವಿತ್ರಿ ಪುಲೆ ಅವರು ವಹಿಸಿದ್ದರು. ಅಂದಿನ ಮಹಿಳಾ ಹೋರಾಟಗಾರ್ತಿಯರು, ಮಹಿಳಾ ಚಿಂತಕರಾದ ಪಂಡಿತ ರಮಾಬಾಯಿ ಮತ್ತು ಆನಂದಿಬಾಯಿ ಅವರ ಸಂಪರ್ಕವೂ ಇವರಿಗಿತ್ತು. ಅಂದಿನ ರಾಜಕೀಯ ಋಷಿಯೆಂದೇ ಪ್ರಸಿದ್ಧರಾಗಿದ್ದ ಮಾಮಾ ಪರಮಾನಂದರು, ಸತ್ಯಶೋಧಕ ಸಮಾಜದ ಕಾರ್ಯದಲ್ಲಿ ಪುಲೆ ದಂಪತಿಗಳೊಂದಿಗೆ ಕೈ ಜೋಡಿಸಿದ್ದರು. ಅವರು ವೈದಿಕಶಾಹಿಯ ಅಂಧಶ್ರದ್ಧೆ, ಅಸ್ಪೃಶ್ಯತೆ, ಅನ್ಯಾಯಗಳ ಪ್ರಬಲ ಟೀಕಾಕಾರರಾಗಿದ್ದರು. ಅವರು 1892ರಲ್ಲಿ ನಿಧನರಾದ ಸಂದರ್ಭದಲ್ಲಿ ಅವರ ಶ್ರದ್ಧಾಂಜಲಿ ಕಾರ್ಯದಲ್ಲಿ ಸಾವಿತ್ರಿಬಾ ಪುಲೆ ಅವರು ಅಧ್ಯಕ್ಷತೆ ವಹಿಸಿದ್ದರು. ಸಾವಿತ್ರಿ ಅವರು "ಲೋಕವಾದಿಯಾಗಿದ್ದ ಇವರು ತಮ್ಮ ಜಾತಿಯ ದೋಷಗಳನ್ನು ನಿವಾರಿಸಲು ಸದುಪದೇಶವನ್ನು ನೀಡಿದರು. ಆದರೆ ಬ್ರಾಹ್ಮಣರಿಗೆ, ಜ್ಯೋತಿರಾವ್ ಅವರ ಕ್ರಾಂತಿಯನ್ನು ಅರ್ಥಮಾಡಿಕೊಳ್ಳುವ ಶಕ್ತಿ ಹೇಗೆ ಇರಲಿಲ್ಲವೋ ಹಾಗೆಯೇ ದೇಶಮುಖರ ಭಾಷಣ ಕೇಳಿ ತಿಳಿದುಕೊಳ್ಳುವ ಬುದ್ಧಿ ಇರಲಿಲ್ಲ" ಎಂದು ಶುದ್ಧ ಮನಸ್ಸಿನಿಂದ ಕಟುವಾಗಿಯೇ ಟೀಕಿಸಿದ್ದರು.

ಮುಂದುವರಿಯುವುದು...



ಪುಣೆಯ ಬುಧವಾರ ಪೇಟೆಯಲ್ಲಿ ತಾತ್ಯಾಸಾಹೇಬ್ ಭಿಡೆ ಮನೆ. ಇದರಲ್ಲಿ ಬಾಲಕಿಯರ ಮೊದಲ ಪಾಠಶಾಲೆಯನ್ನು 1848ರಲ್ಲಿ ಪುಲೆ ದಂಪತಿಗಳು ಆರಂಭಿಸಿದ್ದರು.



ಸಾವಿತ್ರಿಬಾ ಪುಲೆ ಹುಟ್ಟಿದ ಮನೆ

ಗಾಂಧಿ ಹೆಜ್ಜೆ ಜಾಡಿನಲ್ಲಿ ಸಾಗಿದವರು : ಗರುಡ ಶರ್ಮ

ಡಾ. ಗಣನಾಥಶೆಟ್ಟಿ ಎಕ್ಕಾರು

ಗಾಂಧೀಜಿ ಅವರ ತತ್ವ, ಸಿದ್ಧಾಂತ, ಆದರ್ಶಗಳನ್ನು ಅಳವಡಿಸಿಕೊಂಡು, ಅವರ ಹಾದಿಯಲ್ಲೇ ಸಾಗಿದವರ ಕುರಿತಾದ ಲೇಖನಮಾಲೆ ಇದಾಗಿದೆ. ಜನಪ್ರಿಯತೆಗಾಗಿ, ಗೌರವಕ್ಕಾಗಿಯೋ ಮತ್ತು ಪ್ರಭಾವಕ್ಕಾಗಿಯೋ ಕಾತರಿಸದವರು, ತಲೆಮಾರಿನ ಹಿಂದಿನ ಅವರ ಬದುಕು ಸರ್ವರಿಗೂ ಆದರ್ಶವಾಗಿದೆ.

"ನಾವು ಬಯಸಿ ಹೋರಾಡಿದ್ದು ಗ್ರಾಮ ಸ್ವರಾಜ್ಯಕ್ಕೆ, ಪಾರ್ಟಿ ಸ್ವರಾಜ್ಯಕ್ಕಲ್ಲ, ಆರ್ಥಿಕ ಸ್ವರಾಜ್ಯ ಗ್ರಾಮದಿಂದಲೇ, ದಿಲ್ಲಿಯಿಂದಲ್ಲ. ಮತ ನೀಡುವ ಹಕ್ಕಿರುವ ಪ್ರತಿಯೊಬ್ಬನಿಗೂ ತಾನು ಚುನಾಯಿಸಿದವನನ್ನು ಆತ ತಪ್ಪುನಡೆ ಹಾಕಿದಾಗ ಹಿಂದೆ ಕರೆಸಿಕೊಳ್ಳಲೂ ಹಕ್ಕಿರಬೇಕು" ಎಂದು ಪ್ರಬಲವಾಗಿ ಪ್ರತಿಪಾದಿಸಿದವರೇ . ಗರುಡಶರ್ಮರಾಗಿದ್ದಾರೆ. ಅವರು ಹೋರಾಟಗಾರರಾಗಿ, ವಿನೋಬಾ ಶಿಷ್ಯರಾಗಿ ಅವರ ಚಟುವಟಿಕೆಗಳಲ್ಲಿ ಪಾಲ್ಗೊಂಡು, ಗಾಂಧೀ ಸಿದ್ಧಾಂತಗಳಲ್ಲಿ ನಂಬಿಕೆಯಿಟ್ಟು ದುಡಿದ ನಿಷ್ಠಾವಂತ, ನಿಸ್ವಾರ್ಥ ದೇಶಪ್ರೇಮಿಯಾಗಿದ್ದರು. ಗರುಡ ಎಂದರೆ ಕಾವಲುಗಾರ ಎಂಬ ಅರ್ಥಕ್ಕೆ ಹೊಂದುವಂತೆ ಅವರು ದೇಶದಲ್ಲಿ ಸರ್ವೋದಯದ ಚಿಂತನೆಯನ್ನು ತಮ್ಮ ಕೊನೆ ಘಳಿಗೆಯವರೆಗೂ ಕಾಪಿಟ್ಟವರಾಗಿದ್ದಾರೆ.

ಇವರು ಹಾಸನ ಜಿಲ್ಲೆಯ ಬೇಲೂರಿನಲ್ಲಿ 1914ರಲ್ಲಿ ಜನಿಸಿದರು. ತಂದೆ ವಕೀಲ ಅಳಸಿಂಗಾಚಾರ್ಯರು. ಈತನಿಗೆ ಶಾಲಾ ಶಿಕ್ಷಣದಲ್ಲಿ ನಿರಾಸಕ್ತಿ. ಅಕ್ಷರಾಭ್ಯಾಸಕ್ಕೂ ಶಾಲೆಯ ಮೆಟ್ಟಿಲೇರಲಿಲ್ಲ. 20ನೇ ವಯಸ್ಸಿನಲ್ಲಿ ದೇಶ ಸುತ್ತುವ ಬಯಕೆ, ಸಾವಿರಾರು ಮೈಲಿ ಕಾಲುನಡಿಗೆಯ ಸುತ್ತಾಟ ಕಾಶ್ಮೀರದವರೆಗೂ ನಡೆದಿತ್ತು. ಅಲ್ಲಿಂದ ನೇಪಾಳದ ದರ್ಶನ, ಕಲ್ಕತ್ತಾದಿಂದ ಕರ್ನಾಟಕಕ್ಕೆ ಹಿಂತಿರುಗುವ ವೇಳೆಗೆ ಚಳುವಳಿ ಪ್ರಾರಂಭವಾಗಿತ್ತು. ದೀರ್ಘ ಸುತ್ತಾಟದಲ್ಲಿ ಗಳಿಸಿದ ಲೋಕಜ್ಞಾನ, ಅನುಭವ ಅಪಾರ. ಹಾಸನಕ್ಕೆ ಭೇಟಿ ಇತ್ತಾಗ ಗಾಂಧೀಜಿ ಮಾಡಿದ್ದ ಭಾಷಣ ಕೇಳಿದಾಗಿನಿಂದ ಅಹಿಂಸಾ ತತ್ವದಲ್ಲಿ ವಿಶ್ವಾಸ, ಅದೇ ಚಳುವಳಿಗೆ ಧುಮುಕಲು ಪ್ರೇರಣೆ. ಹಾಗೆ ಗ್ರಾಮ ಸ್ವರಾಜ್ಯ ಸ್ಥಾಪನೆಗಾಗಿ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಗರುಡಶರ್ಮ. ಉತ್ತರ ಪ್ರದೇಶದ ಫೈಸ್‌ಪುರ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿ, ವಿನೋಬಾ ಭಾವೆ ಪರಿಚಯ, ಬೆಳಗಾಂ ಜಿಲ್ಲೆಯ ಹಳ್ಳಿಗೆ ಚರಕಾ ಕಲಿಯಲು ಪ್ರಯಾಣ. ದೇಶದಾದ್ಯಂತ ಗ್ರಾಮಗಳಲ್ಲಿ ಪ್ರಚಾರ ಮಾಡುವ ಚಟುವಟಿಕೆಯಲ್ಲಿ ಧಾರವಾಡಕ್ಕೆ ಹಿಂತಿರುಗಿದಾಗ ಚಳುವಳಿ ಬಿರುಸಾಗಿತ್ತು. ಧಾರವಾಡಕ್ಕೆ ಸುಮಾರು ಹದಿನೈದು ಮೈಲಿ ದೂರದ ಗರ್ಗದಲ್ಲಿ 1000 ಜನರನ್ನು ಸಂಘಟಿಸಿ ಸ್ವರಾಜ್ಯ ಪ್ರಚಾರ ಮಾಡಿದ್ದಕ್ಕೆ ಜೈಲುವಾಸ. ದೇಶದ್ರೋಹದ ಕೆಲಸಕ್ಕಾಗಿ ಸಂಘಟನೆ ಎಂಬ ಆಪಾದನೆ, ಲಾಕಪ್‌ನಲ್ಲಿ ಏಕಾಂಗಿಯಾಗಿರುವ ಶಿಕ್ಷೆ, ಕಠಿಣ ಸಜಾ ಬೆದರಿಕೆ ಕೂಡ. 18 ತಿಂಗಳ ಸೆರೆವಾಸವೆಂದರೂ ಅಳುಕದ ದಿಟ್ಟತನ ಕಂಡು ಎರವಾಡಾ ಸೆಂಟ್ರಲ್ ಜೈಲಿಗೆ ವರ್ಗಾವಣೆ, ಅಲ್ಲಿ ಮೊರಾರ್ಜಿ ದೇಸಾಯಿಯಂತಹ ಹಿರಿಯ ರಾಜಕೀಯ ಖೈದಿಗಳ ಸಹಯೋಗ, ಅಲ್ಲಿ ನಡೆದ ಒಂದು ಘಟನೆ ಗರುಡಶರ್ಮರ ಕೆಚ್ಚಿನ ವ್ಯಕ್ತಿತ್ವಕ್ಕೆ ನಿದರ್ಶನವಾಗಿದೆ.

ಯುರೋಪಿಯನ್ ಮೇಲಾಧಿಕಾರಿ ಸೆರೆಮನೆ ವೀಕ್ಷಣೆಗೆ ಬಂದರೆ ಖೈದಿಗಳೆಲ್ಲಾ ತಲೆತಗ್ಗಿಸಿ ನಿಲ್ಲಬೇಕಿತ್ತು. ಆದರೆ ಶರ್ಮರು ತಲೆ ಎತ್ತಿ ಎದೆ ಸೆಟೆಸಿ ನಿಂತಿದ್ದರು. 'ತಲೆ ತಗ್ಗಿಸಿ' ಎಂದಾಗ ನೀಡಿದ್ದ ಉತ್ತರ 'ನಾವು ಇಲ್ಲಿ ಬಗ್ಗಲು ಬಂದಿಲ್ಲ. ತಲೆ ಎತ್ತಿಯೇ ನಿಲ್ಲುತ್ತೇವೆ' ಎಂದದ್ದು ಉದ್ಧಟತನದ ವರ್ತನೆ ಎಂದು ದರೋಡೆಕೋರರ ಜೊತೆ ಬೇರೆ ಲಾಕಪ್‌ಗೆ ವರ್ಗಾವಣೆಯಾಗಿತ್ತು. ಹೀಗೆ 10–12 ತಿಂಗಳ ವಾಸ. ಕಠಿಣ ಶಿಕ್ಷೆ ಅನುಭವಿಸಿ ಬಂದರೂ ಶರ್ಮರ ಸಾಹಸಿ ಮನೋಭಾವ ಬದಲಾಗಲಿಲ್ಲ. ಧಾರವಾಡದಲ್ಲಿ ಅಸ್ಪೃಶ್ಯತಾ ವಿರೋಧೀ ಪ್ರಚಾರ ಪ್ರಾರಂಭಿಸಿದ್ದರು. 1945–48 ರಲ್ಲಿ ಬರಗಾಲ ಬಂದಿದ್ದಾಗ ದಲಿತರ ಬೀದಿಯಲ್ಲಿ ಗುಡಿಸಲು ವಾಸ, ಸೇವಾಕಾರ್ಯ. ದಲಿತರ ಅಗತ್ಯಕ್ಕಾಗಿ ಮೂರು ದಿವಸಗಳಲ್ಲಿ ಒಬ್ಬರೇ 60 ಅಡಿ ಬಾವಿ ತೋಡಿದ ಸಾಹಸ ಶರ್ಮರದು. ಛಲಗಾರ ಶರ್ಮರ ಸಾಹಸ ಕಂಡ ಸ್ಥಳೀಯ ಕಲೆಕ್ಟರ್ ತಕ್ಷಣ 10,000 ರೂ. ಮಂಜೂರು ಮಾಡಿದ್ದರು. ಅದು ದಲಿತರ ಅಭಿವೃದ್ಧಿಗಾಗಿ ಬಳಸಿದ್ದರು. ಜಮೀನ್ದಾರಿ ಪದ್ಧತಿ, ನಿರ್ಮೂಲನೆಗಾಗಿ ಜಾಗೃತಿ ಮೂಡಿಸಲಾರಂಭಿಸಿದ್ದರು, ಮೈಸೂರು ಇನ್ನೂ ಸ್ವತಂತ್ರವಾಗಿಲ್ಲದಿದ್ದ ಕಾಲವದು. ಜಮೀನುದಾರರು ಪ್ರತಿಯೊಬ್ಬರಿಂದಲೂ ಎರಡು–ಮೂರು ಚೀಲ ಧಾನ್ಯಗಳನ್ನು ವಶಪಡಿಸಿಕೊಳ್ಳುತ್ತಿದ್ದರು. ಶರ್ಮರು ಧಾನ್ಯಗಳನ್ನು ಕೊಡಬೇಡಿರೆಂದು ರೈತರಿಗೆ ಉಪದೇಶ. ಸರ್ಕಾರ ಕಾನೂನು ತರುವ ಮೊದಲೇ ಜನರಲ್ಲಿ ಆ ಬಗ್ಗೆ ಜಾಗೃತಿ ಮೂಡಿಸುವ ಯತ್ನ ಮಾಡಿದ್ದಕ್ಕೆ ಮಹಾರಾಷ್ಟ್ರ ಸರ್ಕಾರ ರಾಜ್ಯದಿಂದ ಶರ್ಮರನ್ನು ಹೊರಗೆ ಹಾಕಿತ್ತು.



ಶಿವಮೊಗ್ಗ, ಹಾಸನದಲ್ಲಿ ಕೂಡ ಇದೇ ಹೋರಾಟ, ಸಾಗರ ಸಮೀಪ ಕಾಗೋಡು ಸತ್ಯಾಗ್ರಹದಲ್ಲಿ ಸೇರಲು ಗೋಪಾಲಗೌಡರಿಂದ ಪತ್ರ, ಕಾಡು ಜನರಿಂದ ಜಮೀನುದಾರರು ಭೂಮಿ ಬರೆಸಿಕೊಂಡಿದ್ದರು. ಆ ಹಕ್ಕಿ ಪಿಕ್ಕಿ ಜನ ಬೇಯಿಸಿಕೊಟ್ಟ ಊಟ ಮಾಡುತ್ತಾ, ಕೆಲವು ಸಲ ಭೂಗತರಾಗಿಯೂ ಮತ್ತೆ ಕೆಲವು ಸಮಯ ಬಹಿರಂಗವಾಗಿಯೂ ಉಪವಾಸ ಕುಳಿತು ಹೋರಾಟ ನಡೆಸಿದ್ದರು. ಗೋಪಾಲಗೌಡ, ಖಾದ್ರಿಶಾಮಣ್ಣ ಜಿ.ಹೆಚ್. ಪಟೇಲ್ ಮುಂತಾದವರು ಬಂಧನಕ್ಕೆ ಒಳಗಾದಾಗ ಶರ್ಮರ ಹೋರಾಟ ಮುಂದುವರೆದಿತ್ತು. ಹಾಗೆ ಮುಂದುವರೆಸುವ ಹೊಣೆಗಾರಿಕೆ ಅವರಿಗೆ ನೀಡಲಾಗಿತ್ತು. ಫಲಿತಾಂಶ, ಜಮೀನುದಾರರು ಭೂಮಿಯನ್ನು ಬಿಟ್ಟುಕೊಟ್ಟಿದ್ದರು. ಹೋರಾಟಕ್ಕೆ ಜಯ ದೊರಕಿತ್ತು. ವಿನೋಬಾ ಜೊತೆ 15–20 ವರ್ಷಗಳು ಆಶ್ರಮವಾಸ ಮಾಡಿರುವ ಶರ್ಮ, ಭಾವೆಯವರ ಕರ್ನಾಟಕ ಪಾದಯಾತ್ರೆಯಲ್ಲಿ ಸಹಚರ, ಅವರ ಪ್ರೇರಣೆ, ಪ್ರಭಾವವೇ ತಮ್ಮಲ್ಲಿನ ವಿಚಾರಶಕ್ತಿಯ ಬೆಳವಣಿಗೆಗೆ ಸಹಕಾರಿ ಎಂದು ಕೃತಜ್ಞತೆಯ ನುಡಿಗಳಾಡುತ್ತಿದ್ದರು ಶರ್ಮ. ತಮ್ಮ ಇಡೀ ಜೀವನ ದೇಶ ಸೇವೆಗೆ ಮೀಸಲಿಟ್ಟು ವೈಯಕ್ತಿಕ ಬದುಕಿನ ಸುಖ ತ್ಯಾಗ ಮಾಡಿದ ದೇಶಭಕ್ತ. ಪ್ರಚಾರದ, ಸನ್ಮಾನದ ಅಪೇಕ್ಷೆಯಿರಲಿಲ್ಲ, ಯಾರ ಗಮನಕ್ಕೂ ಬಾರದಿದ್ದರೂ ಚಿಂತಿಸುತ್ತಿರಲಿಲ್ಲ. ಸ್ವಾತಂತ್ರ್ಯ ಹೋರಾಟಗಾರರ ಸಹಾಯಧನ ನಿರಾಕರಿಸಿದ್ದ ಸ್ವಾಭಿಮಾನಿ, ದೇಶದ ಇಂದಿನ ಪರಿಸ್ಥಿತಿ ಬದಲಾಗಿ ತಮ್ಮೆಲ್ಲರ ಕನಸಾದ ಪ್ರಜಾರಾಜ್ಯ, ಗ್ರಾಮ ಸ್ವರಾಜ್ಯ ಬರುವುದೆಂಬ ಭರವಸೆ ಹೊತ್ತಿದ್ದರು, ಆಶಾವಾದಿ ಗರುಡಶರ್ಮ, ಇಳಿವಯಸ್ಸಿನಲ್ಲಿ ಕೂಡ ನೂಲುವುದನ್ನು ತಪ್ಪದೇ ನಡೆಸಿದ್ದ ಈ ಕರ್ಮಯೋಗಿ ತಮ್ಮ ಮರಣದ ನಂತರ ದೇಹ ವೈದ್ಯಕೀಯ ವಿದ್ಯಾರ್ಥಿಗಳ ಬಳಕೆಗೆ ವಿನಿಯೋಗವಾಗಲೆಂದು ಬಯಸಿದ್ದು ಅವರ ನಿಸ್ವಾರ್ಥ ವ್ಯಕ್ತಿತ್ವಕ್ಕೆ ನಿದರ್ಶನವಾಗಿದೆ.

ವರ್ತಮಾನದ ತಲ್ಲಣಗಳಿಗೆ ಬಾಪುವಿನಲ್ಲಿ ಉತ್ತರ

– ಪ್ರಸನ್ನಕುಮಾರ್ ಕೆರಗೋಡು

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಬಾಪುವಿನ ಸತ್ಯಾಗ್ರಹ : ಅಹಿಂಸಾ ಮಾರ್ಗದ ಪರಮೋಚ್ಚ ಅಸ್ತ್ರ

ಜಗತ್ತಿನ ಹಲವು ರಾಷ್ಟಗಳಲ್ಲಿ ತನ್ನ ಅಧಿಪತ್ಯ ಸ್ಥಾಪಿಸಲು ತನ್ನ ಬಂದೂಕಿನ ನಳಿಕೆಯಿಂದಲೆ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದ ಒಂದು ಬಲಾಢ್ಯ ಸಾಮ್ರಾಜ್ಯವನ್ನು ಬಾಪು ಕೇವಲ ಸತ್ಯಾಗ್ರಹವೆಂಬ ಚಳವಳಿಯ ಅಸ್ತ್ರವೊಂದರ ಮೂಲಕ ಅಲುಗಾಡಿಸುತ್ತಿದ್ದರೆಂದರೆ ಅದರ ಶಕ್ತಿಯನ್ನು ಊಹೆ ಮಾಡಿಕೊಳ್ಳಬಹುದಾಗಿದೆ. ಜನವಿರೋಧಿಯಾದ ಶಾಸನಗಳನ್ನು ಪ್ರಭುತ್ವವು ಹೊರಡಿಸಿದಾಗ ಅದನ್ನು ಪಾಲಿಸಲು, ಸಹಿಸಲು ಅಥವಾ ಅದರ ಪರಿಣಾಮಗಳನ್ನು ಅನುಭವಿಸಲು ಜನರಿಗೆ ಹಾಗೆ ಸಾಧ್ಯವಾಗದು. ಹಾಗೆಂದು ಹೇಳಿ ಅದನ್ನು ಧಿಕ್ಕರಿಸಿ ಬದುಕು ನಡೆಸುವುದೂ ಕಷ್ಟಸಾಧ್ಯವು ಆಗಿರುತ್ತದೆ. ಇಲ್ಲವೆ ಅದರ ವಿರುದ್ಧ ಬಂಡೆದ್ದು ಪ್ರತಿರೋಧಿಸಿದರೆ ಹಿಂಸಾತ್ಮಕ ಘಟನೆಗಳು ಜರುಗಿ ಆಸ್ತಿಪಾಸ್ತಿ, ಪ್ರಾಣ ಹಾನಿಗಳಾಗಬಹುದು. ಪ್ರಾಯಶಃ ಅಂತಹುದ್ದನ್ನು ಮನಗಂಡು ಬಾಪು "ಸತ್ಯಾಗ್ರಹ" ಚಳುವಳಿಯ ಅಸ್ತ್ರ ಹೂಡಿದರು. 'ಸತ್ಯಾಗ್ರಹ"ವು ಬಾಪು ದಕ್ಷಿಣಆಫ್ರಿಕಾದಲ್ಲಿದ್ದಾಗ ಕಂಡುಕೊಂಡ ಪ್ರತಿಭಟನೆಯ ಮಾದರಿಯಾಗಿದೆ. ಟ್ರಾನ್ಸ್‌ವಾಲ್ ಆಡಳಿತ ಭಾರತೀಯರು ಮತ್ತು ಆ ಪ್ರಾಂತ್ಯದಲ್ಲಿ ಇದ್ದ ಇತರೆ ಏಷ್ಯಾದವರನ್ನು ಅಲ್ಲಿನ ಬಿಳಿಯರಿಂದ ಬೇರ್ಪಡಿಸಿ ಅವರಿಗೆ ಹಲವು ಹಕ್ಕುಗಳನ್ನು ಮೊಟಕುಗೊಳಿಸುವ "ಏಷಿಯಾಟಿಕ್ ಶಾಸನ"ವೆಂಬ ದುರುಳ ಕಾನೂನು ರೂಪಿಸಿತ್ತು. ಈ ಕಾನೂನು ಅದೆಷ್ಟು ಏಷ್ಯನ್ನರ ವಿರೋಧಿಯಾಗಿತ್ತೆಂದರೆ ಯಾವ ಬಿಳಿಯೇತರರೂ ಅನುಮತಿಯಿಲ್ಲದೆ ಟ್ರಾನ್ಸ್‌ವಾಲ್ ಪ್ರಾಂತ್ಯವನ್ನು ಪ್ರವೇಶಿಸುವ ಹಕ್ಕನ್ನು ನಿರ್ಬಂಧಿಸಿತ್ತು. ಅದರನ್ವಯ ಆ ಪ್ರಾಂತ್ಯದಲ್ಲಿ ವಾಸಿಸುವ ಎಂಟು ವರ್ಷ ಮೀರಿದ ಎಲ್ಲರೂ ಏಷಿಯಾಟಿಕ್ ನೋಂದಣಿ ವಹಿಯಲ್ಲಿ ತಮ್ಮೆಲ್ಲಾ ವೈಯಕ್ತಿಕ ವಿವರಗಳು, ಬೆರಳಚ್ಚು, ಮೈಮೇಲಿನ ಗುರುತುಗಳ ವಿವರಗಳನ್ನು ನೀಡಿ ನೋಂದಾಯಿಸಿಕೊಳ್ಳುವುದು, ಅಗತ್ಯವಿದ್ದೆಡೆಯೆಲ್ಲಾ ಅದನ್ನು ತೋರಿಸುವ ಪದ್ಧತಿಯನ್ನು ಜಾರಿಗೆ ತಂದರು. ಇದು ಏಷ್ಯಾದವರ ಅದರಲ್ಲೂ ಭಾರತೀಯರ ಪಾಲಿಗೆ ಕರಾಳವೆಂದೇ ಬಿಂಬಿತವಾಯಿತು. ಇದರ ವಿರುದ್ಧ ಪರಿಣಾಮಕಾರಿ ಹೋರಾಟ ರೂಪಿಸುವ ನಿಟ್ಟಿನಲ್ಲಿ ಸೆಪ್ಟೆಂಬರ್ 11, 1906ರಲ್ಲಿ ಜೊಹಾನ್ಸ್ ಬರ್ಗ್‌ನ 'ಎಂಪೈರ್' ಎಂಬ ಯಹೂದ್ಯರ ಕಟ್ಟಡದಲ್ಲಿ ನಡೆದ ಸಭೆಯಲ್ಲಿ ಆವರೆಗಿನ ಚರಿತ್ರೆಯ ದಾಖಲಾರ್ಹ "ಸತ್ಯಾಗ್ರಹ"ವೆಂಬ ಚಳುವಳಿಯ ನೂತನ ಪರಿಕಲ್ಪನೆ ಒಡಮೂಡಿತು. ಮೇಲುನೋಟಕ್ಕೆ ಸತ್ಯಕ್ಕಾಗಿ ಆಗ್ರಹಪಡಿಸುವುದು, ಸತ್ಯದಿಂದಲೆ ಆಗ್ರಹ ಮಾಡುವುದು ಎಂದು ಅನ್ನಿಸಿದರೂ ನಿಜವಾಗಿ ಸತ್ಯಾಗ್ರಹ ಎಂದರೇನೆಂದರೆ ಅದರ ಆಳ-ವಿಸ್ತಾರ ಸಾಮಾನ್ಯರಿಗೆ ನಿಲುಕಲೂ ಅಸಾಧ್ಯವಾಗಿತ್ತು.

ಸತ್ಯಾಗ್ರಹ ಎಂದರೆ ಸತ್ಯಕ್ಕೆ ಬದ್ಧವಾಗಿ, ಸತ್ಯದ ಮಾರ್ಗದಲ್ಲೆ ಹಕ್ಕೊತ್ತಾಯ, ಅಥವಾ ಸತ್ಯದ ದೃಢವಾದ ಅನುಸರಣೆ ಎಂದು ವ್ಯಾಖ್ಯಾನಿಸಬಹುದು. ಹಕ್ಕುಗಳಿಗಾಗಿ ಪ್ರಭುತ್ವವನ್ನು ಆಗ್ರಹಪಡಿಸುವಾಗ ಅಸತ್ಯ ಹಾಗೂ ಹಿಂಸೆಯ ಮಾರ್ಗ ಹಿಡಿಯದೆ ನ್ಯಾಯಯುತವಾದ ಮಾರ್ಗದಲ್ಲೆ ಚಳುವಳಿ ರೂಪಿಸಿಬೇಕೆಂಬುದು ಬಾಪುವಿನ ನಿಲುವಾಗಿತ್ತು. ಬಾಪು ಈ ಬಗ್ಗೆ ಹೀಗೆ ಬರೆಯುತ್ತಾರೆ. "ಸತ್ಯವು ಪ್ರೀತಿಯನ್ನು ದ್ಯೋತಕವಾಗಿಸುತ್ತದೆ, ಮತ್ತು ಆಗ್ರಹವನ್ನು ಹುಟ್ಟುಹಾಕುತ್ತದೆ. ಆದ್ದರಿಂದ ಇದು ಶಕ್ತಿಗೆ ಸಮಾನಾರ್ಥಕವಾಗಿ ಕಾರ್ಯನಿರ್ವಹಿಸುತ್ತದೆ. ಹಾಗಾಗಿ ನಾನು ಭಾರತೀಯ ಚಳುವಳಿಯನ್ನು ಸತ್ಯಾಗ್ರಹ ಎಂದು ಕರೆಯಲು ಪ್ರಾರಂಭಿಸಿದೆ, ಅಂದರೆ, ಸತ್ಯ, ಪ್ರೀತಿ ಅಥವಾ ಅಹಿಂಸೆಯಿಂದ ಹುಟ್ಟಿದ ಶಕ್ತಿ. ಮತ್ತು ಅದಕ್ಕೆ ಸಂಬಂಧಿಸಿದಂತೆ "ನಿಷ್ಕ್ರಿಯ ಪ್ರತಿರೋಧ" ಎಂಬ ಪದಗುಚ್ಛದ ಬಳಕೆಯನ್ನು ತ್ಯಜಿಸಿದೆ. ಆಂಗ್ಲ ಭಾಷೆಯಲ್ಲಿಯೂ ಸಹ ನಾವು ಅದನ್ನು ತಪ್ಪಿಸುತ್ತೇವೆ ಮತ್ತು ಅದರ ಬದಲಿಗೆ "ಸತ್ಯಾಗ್ರಹ" ಎಂಬ ಪದವನ್ನು ಬಳಸುತ್ತೇವೆ"

ಮುಂದುವರಿಯುವುದು..

ಕನಸು

– ಬೆಳಗೆರೆ ಜಾನಕಮ್ಮ

ಶಾಂತಿಯೊಳು ಸಹನೆಯೊಳು
ಗಣ್ಯನೆನಿಸಿ ಕರುಣಾಳುದಾತನೆನಿಸಿ
ಸದ್ಗುಣದ ಕಣಿಯು ಬಹು ಪೂಜ್ಯನೆನಿಸಿ
ನೀನಿಲ್ಲದಾದೆ ಮಾನ್ಯ

ಕನ್ನಡದ ಹೊಸಹುಟ್ಟು ಮಂಟಪಕ್ಕೆ
ನಿನ್ನದೈ ಕೀರ್ತಿ ಶಿಖರ
ಥಳಥಳನೆ ಬೆಳಗಿ ಈ ತುಳುಕಿನೊಳನೆ
ನೀನಿಲ್ಲದಾದೆ ಮಾನ್ಯ

ಕನ್ನಡದ ತೋಟದುನ್ನಿತಯು
ಸಡಿಲೆ ನೀನುದಿಸಿ ಬಂದೆ ಧೀರ
ಸೊರಗಿರ್ದ ಸಸಿಗಳನು ಎರೆದು ಬೆಳೆಸಿ
ನೀನಿಲ್ಲದಾದೆ ಮಾನ್ಯ

ಕನ್ನಡದ ಸಸಿಗಳಿಗೆ ಕಸಿಯ ಕಟ್ಟಿ
ತೋಟವನು ಬೆಳಸಿ ನಿಲಿಸಿ
ಜಡಮನದ ಜನಕೆ ಚೇತನವ ತರಿಸಿ
ನೀನಿಲ್ಲದಾದೆ ಮಾನ್ಯ

ಹಗಲಿರುಳು ನೀ ಗೈದ ಗೈಮೆ ತಪಸು
ಫಲಗಳನು ಬಿಡುತಲಿಹವು
ನೋಡಿ ನಲಿಯುವ ಧನ್ಯ ತೋಟಗಾರ
ನೀನಿಲ್ಲದಾದೆ ಮಾನ್ಯ

ಪಚ್ಚೆಪಯಿರೆಲೆ ತೋಟದೊಳಗೆ
ಇಂದು ಫಲವೆದ್ದು ಕಾಣುತಿಹುದು
ಇಚ್ಛೆ ಫಲಿಸುವಾ ಸಮಯದೊಳಗೆ
ನೀನಿಲ್ಲದಾದೆ ಮಾನ್ಯ

ಲತೆಯೊಡೆದು ಹೂವರಳಿ ತೂಗಿ
ಬಾಗಿ ಸುಮಗಂಧ ಬೀರುತಿಹುದು
ಸುಳಿಸುಳಿದು ಮಧುರಸವ ಸವಿವ ಭೃಂಗ
ನೀನಿಲ್ಲದಾದೆ ಮಾನ್ಯ

ಕಳಿತ ಫಲಗಳ ಭುಜಿಪ ಭಾಗ್ಯವನ್ನು
ನಮಗುಳಿಸಿ ಪೊದೆಯತ್ತ
ನುಡಿತಾಯಿ ನೀನಿಲ್ಲವೆಂದು ಕುಂದಿ
ಕಂಬನಿಯ ಕರೆವಳಿತ್ತ

ನಿನ್ನ ನೆನಪಿನ ಸೊಡರನಿರಿಸಿ ನಾವು
ಬಡಬಕುತಿ ತೈಲವೆರೆದು
ನಿನ್ನ ಈ ತೋಟ ಚಿರವಾಗಲೆಂದು
ಹಾರೈಸುತಿರುವೆವಿಂದು

ಧನ್ಯ ನೀ ಧನ್ಯ ನೀ ಧನ್ಯನಾದೆ
ಓ ಕನ್ನಡಿಗರ ಬಂಧು
ಸಣ್ಣ ಕೃತಿಯರ್ಪಿಸುವೆ ಜನಕಜೆಯು
ತುಂಬು ಕಂಬನಿಯ ಮಿಡಿದು

ಸೌಜನ್ಯ : 'ಕವನಗಳಲ್ಲಿ ಮೂಡಿದ ಗಾಂಧಿ'

ಮಹಾತ್ಮಾ ಗಾಂಧಿಯವರನ್ನು ದಾವಣಗೆರೆಗೆ ಕರೆತಂದ ಇಬ್ಬರು ಸ್ವಾತಂತ್ರ್ಯ ಹೋರಾಟಗಾರರ ಪಾತ್ರ

ಸಂಗ್ರಹ : ಡಾ. ವಿ. ಪ್ರಶಾಂತ

1934ರಲ್ಲಿ ಭಾರತ ಪ್ರವಾಸ ಸಂದರ್ಭದಲ್ಲಿ ಮಹಾತ್ಮಾ ಗಾಂಧಿಯವರಿಗೆ ದಾವಣಗೆರೆಗೆ ಭೇಟಿ ಮಾಡುವ ಯಾವುದೇ ಯೋಜನೆಯಿರಲಿಲ್ಲ. ಆದರೆ ಇಬ್ಬರು ಸ್ವಾತಂತ್ರ್ಯ ಹೋರಾಟಗಾರರ ದೃಢ ಸಂಕಲ್ಪದಿಂದ ಗಾಂಧೀಜಿ ಅವರ ಪ್ರಶ್ನೆಗಳಿಗೆ ಉತ್ತರಿಸಿ ಅವರ ಷರತ್ತುಗಳನ್ನು ಈಡೇರಿಸಿ ದಾವಣಗೆರೆಗೆ ಕರೆದುಕೊಂಡು ಬರುವಲ್ಲಿ ಯಶಸ್ವಿಯಾದರು. ಇಂದು 87 ವರ್ಷಗಳ ಬಳಿಕ ಕರ್ನಾಟಕದ ಕೇಂದ್ರ ನಗರ ದಾವಣಗೆರೆ ಖುಷಿಯಿಂದ ಸಂಭ್ರಮಿಸಲು ಕಾರಣ ಇಲ್ಲಿ ದೇಶದ ಪಿತಾಮಹ ಬಾಪೂಜಿಯವರು ಇಲ್ಲಿನ ದಲಿತರ ಕಾಲೋನಿಯಲ್ಲಿ ದಲಿತರೊಂದಿಗೆ ಸಂವಾದ ನಡೆಸಿದ್ದರು. ಅದನ್ನೀಗ ಗಾಂಧಿನಗರ ಎಂದು ಕರೆಯಲಾಗುತ್ತಿದೆ. ಗಾಂಧೀಜಿಯವರು ಇಲ್ಲಿಗೆ ಬಂದಿದ್ದ ಸಂದರ್ಭದಲ್ಲಿ ಆದಿ ಕರ್ನಾಟಕ ಮತ್ತು ಆದಿ ದ್ರಾವಿಡ ಹಾಸ್ಟೆಲ್‌ಗಳಿಗೆ ಶಂಕುಸ್ಥಾಪನೆ ನೆರವೇರಿಸಿದ್ದರು.

ಮಹಾತ್ಮಾ ಗಾಂಧಿ ಅವರ 153ನೇ ಜಯಂತಿಯ ಈ ಸಂದರ್ಭದಲ್ಲಿ ದಾವಣಗೆರೆಗೆ ಗಾಂಧೀಜಿಯವರನ್ನು ಕರೆತಂದಿದ್ದ ಇಬ್ಬರು ಸ್ವಾತಂತ್ರ್ಯ ಹೋರಾಟಗಾರ ಹಿರಿಯ ಛಾಯಾಗ್ರಾಹಕ ಮತ್ತು ಇತಿಹಾಸ ತಜ್ಞ ಹೆಚ್.ಬಿ.ಮಂಜುನಾಥ್ ಸ್ಮರಿಸಿಕೊಳ್ಳುತ್ತಾರೆ. 1934ರಲ್ಲಿ ಕಸಾಲ ಶ್ರೀನಿವಾಸ್ ಶೆಟ್ಟಿ ಮತ್ತು ಪಾಂಡುರಂಗ ಶಿರೂರು ಮಹಾತ್ಮಾ ಗಾಂಧಿ ಅವರನ್ನು ಆಹ್ವಾನಿಸಲು ಯೋಜನೆ ಹಾಕಿಕೊಂಡಿದ್ದರು. ಭಾರತ ಪ್ರವಾಸದಲ್ಲಿದ್ದ ಗಾಂಧೀಜಿ ಅವರಿಗೆ ಪತ್ರ ಬರೆದು ದಾವಣಗೆರೆಗೆ ಭೇಟಿ ಮಾಡುವಂತೆ ಮನವಿ ಮಾಡಿಕೊಂಡಿದ್ದರು.

ಗಾಂಧೀಜಿ ಹೇಳಿದ್ದೇನು?: ಪತ್ರಕ್ಕೆ ಪ್ರತಿಕ್ರಿಯೆ ನೀಡಿದ ಗಾಂಧೀಜಿ, ಇಬ್ಬರಿಗೂ ಮೂರು ಪ್ರಶ್ನೆಗಳನ್ನು ಮುಂದಿಟ್ಟಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾಗುತ್ತೀರಾ, ಸ್ವದೇಶಿ ಬಟ್ಟೆಗಳನ್ನು ಧರಿಸುತ್ತೀರಾ ಮತ್ತು ದಲಿತರೊಂದಿಗೆ ಒಡನಾಟ ಹೊಂದಿದ್ದೀರಾ ಎಂದು. ಆಗ ದೃಢವಾಗಿ "ಹೌದು" ಎಂದು ಇಬ್ಬರೂ ಪ್ರತಿಕ್ರಿಯಿಸಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾಗಿ ಇನ್ನೊಬ್ಬರನ್ನು ಸಂಗ್ರಾಮದಲ್ಲಿ ಭಾಗಿಯಾಗುವಂತೆ ಪ್ರೋತ್ಸಾಹಿಸುತ್ತಿದ್ದೇವೆ ಎಂದು ಹೇಳಿದರು. ಸ್ವದೇಶಿ ಉಡುಪುಗಳನ್ನು ಧರಿಸುತ್ತಿರುವುದಾಗಿಯೂ




ಹೇಳಿದರು. ಬೆಳಗ್ಗೆ ಮೆರವಣಿಗೆ ಮುಗಿಸಿ ನಿಯಮಿತವಾಗಿ ದಲಿತರೊಂದಿಗೆ ಉಪಾಹಾರ ಸೇವಿಸುತ್ತಿರುವುದಾಗಿ ತಿಳಿಸಿದರು. ಇಬ್ಬರ ಉತ್ತರದಿಂದ ಸಂತುಷ್ಟರಾದ ಗಾಂಧೀಜಿ ಅವರು ಮತ್ತೊಂದು ಷರತ್ತು ಹಾಕಿದ್ದರು. ಅದೇನೆಂದರೆ ದಲಿತರಿಗೆ ಶಾಶ್ವತ ಶಾಲೆ ಮತ್ತು ಹಾಸ್ಟೆಲ್ ಸ್ಥಾಪಿಸಬೇಕೆಂದು, ನಿಯಮಿತವಾಗಿ ದಲಿತ ಕಾಲೋನಿಗೆ ಭೇಟಿ ನೀಡಬೇಕೆಂದು ಮತ್ತು ತಾವು ದಾವಣಗೆರೆಗೆ ಬಂದರೆ ದಲಿತರೊಂದಿಗೆ ಉಳಿದುಕೊಳ್ಳುತ್ತೇನೆಂದು ಮಾತು ಕೊಡಬೇಕೆಂದು ಹೇಳಿದರು. ಅದಕ್ಕೆಲ್ಲಾ ಕಸಾಳ ಶ್ರೀನಿವಾಸ ಶೆಟ್ಟಿ ಸಿದ್ಧತೆ ಮಾಡಿಕೊಂಡರು. ಮಾರ್ಚ್ 2, 1934ರಲ್ಲಿ ಗಾಂಧೀಜಿಯವರು ದಾವಣಗೆರೆಗೆ ಬಂದರು. ಮಾಜಿ ಸಚಿವೆ ನಾಗಮ್ಮ ಕೇಶವಮೂರ್ತಿ ಅವರ ಮಾವ ಚನ್ನಗಿರಿ ರಂಗಪ್ಪ, ರೈಲ್ವೆ ನಿಲ್ದಾಣದಿಂದ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಕರೆದುಕೊಂಡು ಹೋದರು. ನಂತರ ಗಾಂಧಿ ನಗರಕ್ಕೂ ಕರೆದುಕೊಂಡು ಹೋದರು. ಅದನ್ನು ಹಿಂದೆ ದಲಿತ ಕಾಲೋನಿ ಎಂದು ಕರೆಯಲಾಗುತ್ತಿತ್ತು. ಇಲ್ಲಿ ದಲಿತರ ಹಾಸ್ಟೆಲ್‌ಗೆ ಗಾಂಧೀಜಿ ಅವರು ಶಂಕುಸ್ಥಾಪನೆ ನೆರವೇರಿಸಿದರು. ಅದನ್ನು ಇಂದು ಗಾಂಧಿ ಸ್ಮಾರಕ ಮಂದಿರ ಎಂದು ಕರೆಯಲಾಗುತ್ತದೆ.

ದಾವಣಗೆರೆ ಪಟ್ಟಣ ಪಂಚಾಯತ್‌ನ ಉಪಾಧ್ಯಕ್ಷ ರಂಗಪ್ಪ ದಲಿತರ ಹಾಸ್ಟೆಲ್ ನಿರ್ಮಾಣಕ್ಕೆ ಭೂಮಿ ಮಂಜೂರು ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದು ನೆನಪು ಮಾಡಿಕೊಳ್ಳುತ್ತಾರೆ.

ಸೌಜನ್ಯ : ಕನ್ನಡಪ್ರಭ ಪತ್ರಿಕೆ : 21.10.2021

ಮಹಾತ್ಮಾ ಗಾಂಧಿ, ಮಾರ್ಟಿನ್ ಲೂಥರ್ ಪರಂಪರೆ ಅಧ್ಯಯನಕ್ಕಾಗಿ ಮಸೂದೆ



ಮಹಾತ್ಮ ಗಾಂಧಿ ಮತ್ತು ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಅವರ ಸಾಧನೆ ಮತ್ತು ಪರಂಪರೆಗಳ ಬಗ್ಗೆ ಅಧ್ಯಯನ ಮಾಡುವುದಕ್ಕಾಗಿ ಭಾರತ ಮತ್ತು ಅಮೆರಿಕದ ನಡುವೆ ವಿನಿಮಯ ಕಾರ್ಯಕ್ರಮವೊಂದಕ್ಕೆ ಅವಕಾಶ ಮಾಡಿಕೊಡುವ ಮಸೂದೆಯನ್ನು ಅಮೆರಿಕಾ ಹೌಸ್ ಆಫ್ ರೆಪ್ರಸೆಂಟೇಟಿವ್ಸ್ ಅಂಗೀಕರಿಸಿದೆ. 'ಗಾಂಧಿ-ಕಿಂಗ್ ಸ್ಕಾಲರ್‌ಲಿ ಎಕ್ಸ್‌ಚೇಂಜ್ ಇನಿಶಿಯೇಟಿವ್ ಆಕ್ಟ್' ಎಂಬ ಹೆಸರಿನ ಮಸೂದೆಯ ಕರಡು ಪ್ರತಿಯನ್ನು 2020ರ ನಾಗರಿಕ ಹಕ್ಕುಗಳ ಮುಂದಾಳು ಜಾನ್ ಲೂಯಿಸ್ ಬರೆದಿದ್ದಾರೆ ಹಾಗೂ ಭಾರತೀಯ ಅಮೆರಿಕನ್ ಸಂಸದ ಆಮಿ ಬೇರಾ ಅದರ ಸಹ ಪ್ರಾಯೋಜಕರಾಗಿದ್ದಾರೆ. ಮಹಾತ್ಮಾ ಗಾಂಧಿ ಮತ್ತು ಮಾರ್ಟಿನ್ ಲೂಥರ್ ಕಿಂಗ್‌ರ ಪರಂಪರೆಗಳ ಬಗ್ಗೆ ಅಧ್ಯಯನ ಮಾಡುವುದಕ್ಕಾಗಿ ಉಭಯ ದೇಶಗಳ ವಿದ್ವಾಂಸರನ್ನೊಳಗೊಂಡ ವಾರ್ಷಿಕ ಶೈಕ್ಷಣಿಕ ವೇದಿಕೆಯೊಂದನ್ನು ಭಾರತ ಸರಕಾರದ ಸಹಕಾರದೊಂದಿಗೆ ರಚಿಸಲು ಈ ಮಸೂದೆಯು ಅಮೆರಿಕದ ವಿದೇಶಾಂಗ ಇಲಾಖೆಗೆ ಅಧಿಕಾರ ನೀಡುತ್ತದೆ.

ಸೌಜನ್ಯ : ವಾರ್ತಾಭಾರತಿ ಪತ್ರಿಕೆ

1938ರಲ್ಲಿ ಹರಿಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ

– ವೇಮಗಲ್ ಸೋಮಶೇಖರ್.

1938ರ ಫೆಬ್ರವರಿ 19ರಿಂದ 22ರವರೆಗೆ ಅಖಿಲ ಭಾರತ ಕಾಂಗ್ರೆಸ್‌ನ 55ನೇ (ವಾರ್ಷಿಕ) ಮಹಾಧಿವೇಶನ ಗುಜರಾತ್‌ನ ಬಾರ್ಡೋಲಿ ತಾಲ್ಲೂಕಿನ ತಪತಿ ನದಿಯ ದಂಡೆಯಲ್ಲಿನ ಹರಿಪುರದಲ್ಲಿ ಸುಭಾಸ್‌ಚಂದ್ರ ಬೋಸ್‌ರ ಅಧ್ಯಕ್ಷತೆಯಯಲ್ಲಿ ನಡೆಯಿತು. ನಾಲ್ಕು ದಿನ ನಡೆದ ಈ ಅಧಿವೇಶನಕ್ಕಾಗಿ ಸಕಲ ನಾಗರಿಕ ಸೌಲಭ್ಯಗಳನ್ನೊಳಗೊಂಡ ಒಂದು ಪರ್ಯಾಯ ನಗರವನ್ನೇ ನಿರ್ಮಿಸಲಾಗಿತ್ತು. ನೀರು ಪೂರೈಕೆ, ಮುದ್ರಣಾಲಯ, ಆಸ್ಪತ್ರೆ, ಅಂಚೆ ಕಚೇರಿ, ಬ್ಯಾಂಕ್, ಉದ್ಯಾನವನ, ಟೆಲಿಫೋನ್ ಎಕ್ಸ್‌ಚೇಂಜ್, ಅಗ್ನಿಶಾಮಕದಳ ಹೀಗೆ ಎಲ್ಲವನ್ನೂ ಹೊಸದಾಗಿ ವ್ಯವಸ್ಥೆ ಮಾಡಲಾಗಿತ್ತು. ಎರಡು ಸಾವಿರ ಮಂದಿ ಬಾಣಸಿಗರು ಊಟ ತಿಂಡಿ ತಯಾರಿಕೆಯಲ್ಲಿ ತೊಡಗಿದ್ದರು.. ಊಟಕ್ಕೆ ಗಾಂಧಿಯವರ ಸೂಚನೆಯ ಮೇರೆಗೆ ಕೆಂಪಕ್ಕಿ ಅನ್ನ ಮತ್ತು ಕೈಯಲ್ಲಿ ಕುಟ್ಟಿದ ಹಿಟ್ಟಿನ ರೋಟಿಗಳನ್ನೂ, ಹಸುವಿನ ಹಾಲು ಮತ್ತು ತುಪ್ಪವನ್ನು ನೀಡಲಾಗಿತ್ತು. ಸ್ವಚ್ಛತೆಯ ಬಗ್ಗೆ ಅಲ್ಲಿ ಸ್ವಯಂ ಸೇವಕರು ಬಹು ನಿಗಾ ವಹಿಸಿದ್ದರು. ಪಾಕಶಾಲೆಯಲ್ಲಿ ಬಾಣಸಿಗರು ತಯಾರಿಸಿದ ಭಕ್ಷ್ಯ ಭೋಜ್ಯಗಳನ್ನು 25 ಸಾವಿರಕ್ಕೂ ಹೆಚ್ಚಿನ ಜನರು ಊಟ ಮಾಡಿದರು ಶಾಂತಿನಿಕೇತನದಿಂದ ಆಗಮಿಸಿದ್ದ ಪ್ರಸಿದ್ಧ ಕಲಾವಿದರಾದ ನಂದಲಾಲ್ ಬೋಸರು ಇನ್ನೂರು ಚಿತ್ರಗಳನ್ನು ಬಿಡಿಸಿದ್ದರು. ಗುಜರಾತಿನ ಕಲಾವಿದರಾದ ರವಿಶಂಕರ ರಾವಲ್, ಕನೂ ದೇಸಾಯಿ ಮತ್ತು ವಾಸ್ತುಶಿಲ್ಪಿಗಳೂ ಸೇರಿ ಇಡೀ ನಗರವನ್ನೆಲ್ಲಾ ಅಲಂಕರಿಸಿದ್ದರು. ಗಾಂಧೀಜಿ ನಿರ್ದೇಶನದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ವಸ್ತು ಪ್ರದರ್ಶನ ನಡೆಯಿತು.

ಈ ಅಧೀವೇಶನಕ್ಕೆ ಪಂಜಾಬಿನಿಂದ ಬಂದಿದ್ದ ವೃದ್ಧರೊಬ್ಬರು ಗಾಂಧಿಯವರ ದರ್ಶನ ಪಡೆಯಲು ಅವಸರವಸರವಾಗಿ ಬಂದು ಒಂದು ಲಕೋಟೆ ನೀಡಿ, ಅದರಲ್ಲಿ ನೂರು ರೂಪಾಯಿಗಳಿವೆ ಎಂದಾಗ ಗಾಂಧೀಜಿ ಇದನ್ನು ಕೊಡಲು ಇಷ್ಟೇಕೆ ಅವಸರವೆಂದು ಕೇಳಿದರು. ಆಗ ಆ ವೃದ್ಧ ಕೊಟ್ಟ ಉತ್ತರ "ಈ ಅಧಿವೇಶನದಲ್ಲಿ ತುಂಬ ಜನ ಜೇಬುಗಳ್ಳರಿದ್ದಾರೆ ಎಂದು ಯಾರೋ ಹೇಳಿದರು. ಅದಕ್ಕೆ ಅದಷ್ಟೂ ಮುಂಚೆಯೇ ನಿಮಗೆ ಒಪ್ಪಿಸಲು ಬಂದೆ ಗಾಂಧೀಜಿ!'

ಒರಿಸ್ಸಾದ ಒಬ್ಬ ರೈತ ತನ್ನ ಜಮೀನಿನಲ್ಲಿ ಬೆಳೆದ ಹಣ್ಣಿನ ಮೂಟೆಯೊಂದನ್ನು ಸಾಗಿಸಿಕೊಂಡು ಗಾಂಧಿಯವರ ಕುಟೀರದ ಮುಂದೆ ಇಟ್ಟಾಗ ಗಾಂಧಿ, ಇದನ್ನು ತರಲು ತುಂಬ ಶ್ರಮ ಮತ್ತು ಹಣ ಖರ್ಚಾಗಿರಬೇಕು ಎಂದು ವಿಚಾರಿಸಿದರು. ಆತ "ನಿಮ್ಮ ದರ್ಶನ ಭಾಗ್ಯದ ಮುಂದೆ ಅದೆಲ್ಲ ಹೆಚ್ಚಲ್ಲ" ಎಂದು ಹೇಳಿ ಗಾಂಧಿಯವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದ. ಗಾಂಧಿ ಭಕ್ತರು ಕೆಲವರು ಗಾಂಧಿಗೆ ಅರ್ಪಿಸಲೆಂದು ತಾವೇ ನೂತಿದ್ದ ಒಂದು ಲಕ್ಷ ಇಪ್ಪತ್ತೈದು ಸಾವಿರ ಗಜಗಳಷ್ಟು ಖಾದಿ ನೂಲು ತಂದಿದ್ದರು. ಈ ಅಧಿವೇಶನದಲ್ಲಿ ಬ್ರಿಟಿಷ್ ಸರ್ಕಾರದ ಬಗ್ಗೆ ಕಾಂಗ್ರೆಸ್ಸಿನ ದ್ವಂದ್ವ ನೀತಿಯನ್ನು ದೃಢೀಕರಿಸಲಾಯಿತು. ಪ್ರಜೆಗಳು ಈಗ ಪ್ರಜಾಸತ್ತಾತ್ಮಕ ಹಕ್ಕುಗಳ ಬಗ್ಗೆ ಕಾತುರರಾಗಿದ್ದಾರೆ; ನೀವು ಬಾಳುತ್ತಿರುವ ಕಾಲದ ವಾಸ್ತವಿಕತೆಯನ್ನು ಅರ್ಥಮಾಡಿಕೊಳ್ಳಿ ಎಂದು ರಾಜಮಹಾರಾಜರುಗಳಿಗೆ ಮಹಾಧಿವೇಶನ ಕಿವಿ ಮಾತು ಹೇಳಿತು. ಈ ವಿಷಯದಲ್ಲಿ ಕಾಂಗ್ರೆಸ್ ಸ್ವಯಂ ಸೇವಕರು ನೆರವಾಗುವರೆಂದೂ ಅವರಿಗೆ ಮನವರಿಕೆ ಮಾಡಿಕೊಡಲಾಯಿತು. ರಾಜಮಹಾರಾಜರುಗಳನ್ನು ಬ್ರಿಟಿಷರು ಸಂಪೂರ್ಣವಾಗಿ ತಮ್ಮ ತೆಕ್ಕೆಗೆ ಸೆಳೆದುಕೊಳ್ಳಬಹುದೆಂಬ ಭೀತಿಯಿಂದ ಗಾಂಧೀಜಿ ಜಾಗರೂಕರಾಗಿದ್ದರು. ಮುಸ್ಲಿಮರು ದೂರ ಸರಿಯುತ್ತಿದ್ದುದರಿಂದ ಈಗಾಗಲೇ ಸಾಕಷ್ಟು ಹಾನಿಯಾಗಿತ್ತು.

ಕಾಂಗ್ರೆಸ್ ನಾಯಕರುಗಳಲ್ಲಿ ಒಮ್ಮತ–ಸೌಹಾರ್ದತೆಗಳನ್ನು ಕಾಪಾಡುವುದು ನಿರಂತರವಾದ ಸವಾಲಾಗಿತ್ತು. 'ಸರ್ದಾರ್ ಮತ್ತು ನಾನು ತುಂಬ ನಿಕಟವಾಗಿದ್ದೇವೆ. ನಾವು ಒಂದೇ ರೀತಿ ಕೆಲಸ ಮಾಡುತ್ತೇವೆ. ಒಂದೇ ರೀತಿ ಯೋಚಿಸುತ್ತೇವೆ' ಎಂದು ಗಾಂಧೀಜಿ ಹೇಳಿದರು. 1939ರಲ್ಲಿ ಮಧ್ಯಪ್ರಾಂತ್ಯದ ತ್ರಿಪುರಿಯಲ್ಲಿ ನಡೆಯುವ 56ನೇ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಗೆ ಪೈಪೋಟಿ ನಡೆಯಿತು. ಸುಭಾಷ್‌ಚಂದ್ರ ಬೋಸ್ ಅವರು ತಾವೇ ಇನ್ನೊಂದು ಬಾರಿಗೆ ಅಧ್ಯಕ್ಷರಾಗಲು ಬಯಸಿ ಸ್ಪರ್ಧೆಗೆ ನಿಲ್ಲಲು ನಿರ್ಧರಿಸಿದರು. ಗಾಂಧೀಜಿ ಮತ್ತಿತರ ಪ್ರಮುಖ ನಾಯಕರ ಒಲವು ಡಾ.ಪಟ್ಟಾಭಿ ಸೀತಾರಾಮಯ್ಯನವರ ಕಡೆ ಇದ್ದಿತು. ಇದರಿಂದಾಗಿ ಸುಭಾಷ್‌ಚಂದ್ರ ಬೋಸ್ ಮತ್ತು ಪಟ್ಟಾಭಿ ಸೀತಾರಾಮಯ್ಯನವರ ನಡುವೆ ನೇರ ಸ್ಪರ್ಧೆ ಉಂಟಾಗಿ ಪಟ್ಟಾಭಿ ಸೀತಾರಾಮಯ್ಯನವರು ಸೋತರು. 'ಪಟ್ಟಾಭಿಯವರ ಸೋಲು ನನ್ನ ಸೋಲು' ಎಂದು ಗಾಂಧೀಜಿ ವರ್ಣಿಸಿದರು.

ತ್ರಿಪುರಿಯಲ್ಲಿ ಮಾರ್ಚ್ 10ರಿಂದ 12ರವರೆಗೆ ನಡೆದ ಕಾಂಗ್ರೆಸ್ ಮಹಾಧಿವೇಶನ ಪುನಃ ಸುಭಾಷ್‌ಚಂದ್ರ ಬೋಸ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಆ ಸಂದರ್ಭದಲ್ಲಿ ಗಾಂಧೀಜಿ ರಾಜಕೋಟೆಯಲ್ಲಿ ಪೌರಹಕ್ಕುಗಳ ರಕ್ಷಣೆಗಾಗಿ ಹಾಗೂ ಸಂಸ್ಥಾನದ ಪ್ರಜಾ ಮಂಡಲದ ಬೇಡಿಕೆಗಳನ್ನು ಬೆಂಬಲಿಸಿ ಉಪವಾಸ ಕೈಗೊಂಡಿದ್ದರು. ಆದುದರಿಂದ ತ್ರಿಪುರಿ ಅಧಿವೇಶನಕ್ಕೆ ಮಹಾತ್ಮರು ಹೋಗಲಿಲ್ಲ. ನಂತರ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ರಚಿಸುವಲ್ಲಿ ಸುಭಾಷರಿಗೆ ಸಹಕಾರ ದೊರೆಯಲಿಲ್ಲ. ಹಿರಿಯ ನಾಯಕರುಗಳು ಭಿನ್ನಾಭಿಪ್ರಾಯ ಹೊಂದಿದ್ದರಿಂದ ಬಿಕ್ಕಟ್ಟು ಉಂಟಾಯಿತು. ಕಡೆಗೆ ಸುಭಾಷರು ಕಾಂಗ್ರೆಸ್ ಅಧ್ಯಕ್ಷ ಪದವಿಗೆ ರಾಜೀನಾಮೆ ನೀಡಿದರು. ರಾಜೇಂದ್ರ ಪ್ರಸಾದರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು.



ಹರಿಪುರದ ಕಾಂಗ್ರೆಸ್ ಅಧಿವೇಶನದಲ್ಲಿ ನೇತಾಜಿ ಅವರೊಂದಿಗೆ ನೆಹರು

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು

– ಇಂದಿರಾ ಕೃಷ್ಣಪ್ಪ,

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ನಾಗಮ್ಮ ವೇಣುಗೋಪಾಲ ಪಾಟೀಲ್

ಇವರು 1905ರ ಡಿಸಂಬರ್‌ನಲ್ಲಿ ಜನಿಸಿದ್ದು ಪ್ರಾಥಮಿಕ ಶಿಕ್ಷಣ ಪಡೆದು ಹದಿಹರೆಯದಲ್ಲಿ ವೇಣುಗೋಪಾಲ ಸ್ವಾಮಿ ಪಾಟೀಲ್ ಅವರನ್ನು ಮದುವೆಯಾದರು. ಪತಿ ವೇಣುಗೋಪಾಲ್ ಅವರು "ಕರ್ನಾಟಕ ಶಿಕ್ಷಣ ಸಂಸ್ಥೆ"ಯನ್ನು ಸ್ಥಾಪಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದರು. ಮಹಾತ್ಮಜೀ ಅವರ ಕರ್ನಾಟಕ ಭೇಟಿ ಸಂದರ್ಭದಲ್ಲಿ ಅವರ ಹರಿಜನಾಭಿವೃದ್ಧಿಯ ಮತ್ತು ಅಸ್ಪೃಶ್ಯತೆಯ ವಿರುದ್ಧದ ಹೋರಾಟದ ಕೈಂಕರ್ಯದಲ್ಲಿ ತೊಡಗಿದ್ದ ನಾಗಮ್ಮ ದಂಪತಿಗಳನ್ನು ಪ್ರಶಂಸಿದ್ದರು. ಆ ವೇಳೆಗಾಗಲೇ ಹುಬ್ಬಳಿಯ ದಲಿತ ಹೆಣ್ಣು ಮಕ್ಕಳಿಗಾಗಿ ಬಾಲಿಕಾಶ್ರಮವನ್ನೂ ಸಬರಮತಿ ಆಶ್ರಮದ ರೀತಿಯಲ್ಲಿ ಸ್ಥಾಪಿಸಿದ್ದರು. ಆ ಹೊತ್ತಿಗಾಗಲೇ ವಿಧಾನಸಭಾ ಸದಸ್ಯೆಯಾಗಿದ್ದ ನಾಗಮ್ಮ ಅವರು ಆ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ, ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗಿಯಾದರು. 1938ರ ಕರನಿರಾಕರಣ ಚಳುವಳಿಯಲ್ಲಿ ಭಾಗವಹಿಸಿದ ಇವರನ್ನೂ ಬಂಧಿಸಿ ಹಿಂಡಲಗಾ ಜೈಲಿನಲ್ಲಿ ಮೂರು ತಿಂಗಳ ಕಾಲ ಇರಿಸಲಾಗಿತ್ತು. 1942ರ 'ಚಲೇಜಾವ್' ಚಳುವಳಿಯಲ್ಲಿ ಭಾಗವಹಿಸಿದ ಇವರನ್ನೂ ಪುನಃ ಬಂಧಿಸಿ ಯರವಾಡ ಜೈಲಿನಲ್ಲಿ 13 ತಿಂಗಳ ಕಾಲ ಇರಿಸಲಾಯಿತು. ವಿನೋಬಾ ಬಾವೆ ಅವರ ಭೂದಾನ – ಗ್ರಾಮದಾನ ಚಳುವಳಿಯಲ್ಲಿ ಸೇರ್ಪಡೆಯಾದ ನಾಗಮ್ಮ ಅವರು 1945 – 46ರಲ್ಲಿ ಕಸ್ತೂರ ಬಾ ನಿಧಿಗಾಗಿ ಧನ ಸಂಗ್ರಹಣೆಗೆ ತೊಡಗಿದರು. ಅದರೊಂದಿಗೆ, ಆಭರಣಗಳ ಸಂಗ್ರಹಣೆ ಮಾಡುತ್ತಾ, ತನ್ನಲ್ಲಿದ್ದ ಆಭರಣಗಳನ್ನು ಕಸ್ತೂರಬಾ ನಿಧಿಗೆ ಅರ್ಪಿಸಿದ್ದರು.

ಜಯದೇವಿ ತಾಯಿ ಲಿಗಾಡೆ

ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಸ್ವಾತಂತ್ರ್ಯ ಆಂಧೋಲನ ಸಾರ್ವಜನಿಕ, ಸಾಂಸ್ಕೃತಿಕ, ಸಾಹಿತ್ಯಿಕ, ಧಾರ್ಮಿಕ ಕಾರ್ಯದಲ್ಲಿ ಮುಂಚೂಣಿಯ ಮುಂದಾಳತ್ವವನ್ನು ವಹಿಸಿದ ಜಯದೇವಿ ತಾಯಿ ಅವರು ಮಡಕಿ ಚನ್ನಬಸಪ್ಪ ಅವರ ಮಗಳಾಗಿದ್ದಾರೆ. ಶ್ರೀಮಂತ ಕುಟುಂಬದಲ್ಲಿ ಜನಿಸಿದರೂ, ಸರಳತೆ, ಸ್ವದೇಶೀಯತೆ, ಸೇವಾ ಮನೋಭಾವ ಬೆಳೆಸಿಕೊಂಡ ಮಹಿಳೆ ಇವರಾಗಿದ್ದಾರೆ. ರಾಷ್ಟ್ರೀಯ ಸೇವಾ ದಳದ ಮಹಿಳಾ ಶಾಖೆಯ ಸ್ಥಾಪನೆ, ಲಿಂಗಾಯಿತ ಪರಿಷತ್ತಿನ ಕಾರ್ಯದರ್ಶಿಯಾಗಿ ಸೇವೆ, ಅಕ್ಕನ ಬಳಗದ ಸ್ಥಾಪನೆಯ ಮೂಲಕ ಮಹಿಳೆಯರು ಸಾರ್ವಜನಿಕ ಕಾರ್ಯದಲ್ಲಿ ಸಂಘಟಿತರಾಗಲು ಅಪಾರವಾಗಿ ಶ್ರಮಿಸಿದ್ದಾರೆ. 1934ರಲ್ಲಿ ಸರ್ಕಾರದ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ, ಸೊಲ್ಲಾಪುರದಲ್ಲಿ ಪ್ರಭಾತ್‌ಪೇರಿಯನ್ನು ನಡೆಸಿದ್ದರು. 1947ರಲ್ಲಿ ರಾಷ್ಟ್ರೀಯ ಸೇವಾದಳದಲ್ಲಿ ಮಹಿಳೆಯರ ಸಹಭಾಗಿತ್ವಕ್ಕಾಗಿ 'ಜಯನಿಕೇತನ'ವನ್ನು ಕಟ್ಟಿ ಬೆಳೆಸಿದರು. ಕರ್ನಾಟಕದ ಏಕೀಕರಣ ಚಳುವಳಿಯಲ್ಲಿ, ಹೈದ್ರಾಬಾದ್ ಭಾಗದ ಹಲವು ಭಾಗಗಳು, ಕನ್ನಡ ನಾಡಿಗೆ ಸೇರಲು, ಭಾಷಾವಾರು ಪ್ರಾಂತ್ಯ ರಚನೆಗೆ ಹಲವು ಆಯಾಮಗಳಲ್ಲಿ ಕಾರ್ಯ ನಿರ್ವಹಿಸಿದ್ದರು. ಆದರೆ ಬ್ರಿಟಿಷರು ಪತಿ ಚೆನ್ನಬಸಪ್ಪ ಅವರ ಮೇಲೆ ಒತ್ತಡ ಹೇರಲಾರಂಬಿಸಿದ್ದರು. ಯಾವುದಕ್ಕೂ ಬೆದರದ ಲಿಗಾಡೆ ಅವರು ಖಾದಿಧಾರಿಗಳಾಗಿ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಬೀದರ್, ಬಸವ ಕಲ್ಯಾಣ, ರಾಯಚೂರು, ಗುಲ್ಬರ್ಗಾದಲ್ಲಿ ಸ್ವಾತಂತ್ರ್ಯ ಹೋರಾಟದ ಪ್ರಮುಖ ನಾಯಕರಾದರು.

ಮುಂದುವರಿಯುವುದು....

ಗಾಂಧೀಜಿ ಅವರ ವೈಜ್ಞಾನಿಕ ಚಿಂತನೆಗಳು (ಮುಂದುವರಿದ ಭಾಗ)

– ಡಾ. ಸುಮಂಗಲಾ ಎಸ್. ಮುಮ್ಮಿಗಟ್ಟಿ

ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಗಾಂಧಿ ಸ್ಮಾರಕ ನಿಧಿ ಅವರು ಸಂಯುಕ್ತವಾಗಿ ದಿ.24.12.2020ರಂದು ಆಯೋಜಿಸಿದ ಡಬ್ಲ್ಯೂ.ಹೆಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸದಲ್ಲಿ ಮಂಡಿಸಿದ ಲೇಖನವನ್ನು ಫೆಬ್ರವರಿ ತಿಂಗಳಿಂದ ಪ್ರಕಟಿಸಲಾಗುತ್ತಿದೆ.

ಪರಿಸರವಾದಿ ಗಾಂಧೀಜಿ

ಗಾಂಧೀಜಿಯವರು ಜನ ಸಮೂಹಕ್ಕೆ ಉತ್ಪನ್ನಗಳನ್ನು ಉತ್ಪಾದಿಸುವುದು ಬೇಡ, ಜನ ಸಮೂಹಗಳಿಂದ ಉತ್ಪಾದನೆಯಾಗಬೇಕು ಎನ್ನುತ್ತಿದ್ದರು. ಅವರು ಕೈಗಾರಿಕೀಕರಣವನ್ನು ವಿರೋಧಿಸುತ್ತಿದ್ದರು ಎನ್ನುವ ಒಂದು ಆಪಾದನೆ ಅವರ ಮೇಲಿದೆ. ಅದಕ್ಕೆ ಅವರು ಕೊಡುವ ಉದಾಹರಣೆ, 'ಒಂದು ಪುಟ್ಟ ದ್ವೀಪ ಇಂಗ್ಲೆಂಡ್ ತನ್ನ ಕೈಗಾರೀಕರಣಕ್ಕಾಗಿ ಎಷ್ಟೊಂದು ದೇಶಗಳ ಸಂಪತ್ತನ್ನು ಲೂಟಿ ಹೊಡೆಯುತ್ತಿದೆ .ಹೀಗಿರುವಾಗ 300 ಮಿಲಿಯನ್ ಜನರಿರುವ ಭಾರತ (ಆಗ) ಕೈಗಾರೀಕೀಕರಣವನ್ನು ಪ್ರಾರಂಭಿಸಿದರೆ, ಇದು ಬೇರೆಲ್ಲಿಂದಲೋ ನೈಸರ್ಗಿಕ ಸಂಪನ್ಮೂಲಗಳನ್ನು ತರಲು ಸಾಧ್ಯವಿಲ್ಲ. ನಾವು ನಮ್ಮದೇ ದೇಶದ ಎಲ್ಲ ನೈಸರ್ಗಿಕ ಸಂಪನ್ಮೂಲಗಳನ್ನು ಬರಿದು ಮಾಡಿಕೊಳ್ಳುತ್ತೇವೆ". ಎಂದಿದ್ದರು ಇಂದು ಅಂತಹದೇ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಕಾಡುಗಳನ್ನು ಕಡಿಯುವ ವಿಷಯಕ್ಕೆ ಸಹ ಇಂಥಹದೇ ಮಾತನ್ನು ಹೇಳಿದ್ದರು. ನಾವು ನಮ್ಮದೇ ಭವಿಷ್ಯದ ಪ್ರತಿಬಿಂಬವನ್ನು ನೋಡುತ್ತಿದ್ದೇವೆ, ಎಂದಿದ್ದರು. ಸ್ವಚ್ಛತೆಯ ವಿಷಯಕ್ಕೆ ಬಂದರೆ ಗಾಂಧೀಜಿ ಇಂದಿಗೂ ನಮಗೆ ಮಾದರಿ.

ಇವುಗಳೆಲ್ಲವೂ ಗಾಂಧೀಜಿ ಅವರ ವೈಜ್ಞಾನಿಕ ಚಿಂತನೆಯ ಕೆಲವು ಉದಾಹರಣೆಗಳು ಮಾತ್ರ. ವಿವರವಾಗಿ ಅಧ್ಯಯನ ಮಾಡಿದಾಗ ಗಾಂಧೀಜಿ ಅವರ ವೈಜ್ಞಾನಿಕ ಚಿಂತನೆಗಳು ನಮ್ಮನ್ನು ಬೆರಗುಗೊಳಿಸುತ್ತವೆ. ಐನಸ್ಟೈನ್ ಹೇಳಿದ "ಮುಂದಿನ ಜನಾಂಗಗಳು ಇಂತಹ ಒಬ್ಬ ವ್ಯಕ್ತಿ ಭೂಮಿಯ ಮೇಲೆ ಜೀವಿಸಿದ್ದನೇ.? ಎಂದು ಮುಂದಿನ ಪೀಳಿಗೆಗಳು ಅಚ್ಚರಿ ಪಡುತ್ತವೆ" ಎನ್ನುವ ಮಾತು ಸರ್ವಕಾಲಿಕ ಸತ್ಯ.

ಕನ್ನಡ... ಕನ್ನಡಿಗ... ಕರ್ನಾಟಕ... : ಪು.ತಿ. ನರಸಿಂಹಾಚಾರ್
(17.03.1905 – 23.10.1998)

– ಡಾ. ರಾಮಲಿಂಗೇಶ್ವರ (ಸಿಸಿರಾ)

ಕರ್ನಾಟಕ ಏಕೀಕರಣವಾಗಿ 2020ನೇ ನವೆಂಬರ್ 1ನೆಯ ತಾರೀಖಿಗೆ ಅರವತ್ತನಾಲ್ಕು ವರ್ಷಗಳಾಗುತ್ತದೆ. ಕರ್ನಾಟಕದ ಏಕೀಕರಣ ಹೋರಾಟವು ಕಹಿ-ಸಿಹಿ ಘಟನೆಗಳ ಸ್ಮರಣಲೋಕವನ್ನೇ ತೆರೆದಿಡುತ್ತವೆ. ಈ ಸ್ತರದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಸಾಹಿತ್ಯ, ಸಂಸ್ಕೃತಿ, ಸಮಾಜ, ಶಿಕ್ಷಣ, ರಾಜಕಾರಣದ ಮೂಲಕ ಕನ್ನಡ ನಾಡು ನುಡಿ ಕಟ್ಟಿದ ಮಹಾನ್ ಚೇತನಗಳನ್ನು ಗಾಂಧಿ ಭವನ ಸ್ಮರಿಸುತ್ತದೆ.

ಕನ್ನಡದ ಖ್ಯಾತ ವಿದ್ವಾಂಸ, ಸಾಹಿತಿ, ಗೀತನಾಟಕಕಾರರು, ಕವಿ .ಪು.ತಿ. ನರಸಿಂಹಾಚಾರ್ ಮೇಲುಕೋಟೆಯಲ್ಲಿ ಜನಿಸಿದ್ದರು. ಪು.ತಿ.ನ. ಎಂಬುದು ಪುರೋಹಿತ ತಿರುನಾರಾಯಣ ನರಸಿಂಹಾಚಾರ್ ಎಂಬ ಹೆಸರಿನ ಸಂಕ್ಷಿಪ್ತ ರೂಪ. ಇವರ ತಂದೆ ವೃತ್ತಿಯಿಂದ ವೈದಿಕರಾಗಿದ್ದವರು. ಇವರಿಗೆ ಅಲ್ಲಿನ ಆಧ್ಯಾತ್ಮಿಕ ಪರಿಸರ ವೈಯಕ್ತಿಕವಾಗಿ ಹಾಗೂ ಸಾಹಿತ್ಯ ಬದುಕಿನಲ್ಲ ಸಾಕಷ್ಟು ಪರಿಣಾಮ ಬೀರಿದೆ. ಪ್ರಕೃತಿ ಮತ್ತು ಪ್ರಕೃತಿಯಲ್ಲಿ ದೈವತ್ವದ ಹುಡುಕಾಟ ಅವರ ಕಾವ್ಯದ ಮೂಲ ಸೆಲೆಯಾಗಿದೆ. ಜೀವನ ಹಾಗೂ ಸಾಹಿತ್ಯದಲ್ಲಿ ಒಲವನ್ನು ಹರಿಸಿದ, ಬದುಕು ಭಗವಂತನ ಕೃಪೆಯಿಂದ ಆದುದು ಎಂದು ಭಾವಿಸಿದ ಕವಿ ಇವರು. ನವೋದಯ ಸಾಹಿತ್ಯದ ಮೊದಲ ತಲೆಮಾರಿನ ಹಿರಿಯ ಕವಿಗಳಾದ ಬಿ.ಎಂ.ಶ್ರೀ, ಬೇಂದ್ರೆ, ಕುವೆಂಪು, ಕೆ.ಎಸ್. ನರಸಿಂಹಸ್ವಾಮಿಯಂತಹ ಹಿರಿಯ ಕವಿಗಳ ಸಾಲಿಗೆ ಸೇರಿದವರಾಗಿದ್ದಾರೆ. ಪು.ತಿ.ನ. ಅವರು ಮೈಸೂರಲ್ಲಿ ಆಂಗ್ಲ ಮತ್ತು ಕನ್ನಡ ಭಾಷೆಯಲ್ಲಿ ಪ್ರಾವೀಣ್ಯತೆ ಪಡೆದರು. ಅಲ್ಲಿ ಗುರು ಹಿರಿಯಣ್ಣ, ಆತ್ಮೀಯ ಮಿತ್ರರಾದ ಶಿವರಾಮ ಶಾಸ್ತ್ರಿ ಹಾಗೂ ತೀ.ನಂ. ಶ್ರೀಕಂಠಯ್ಯನವರ ಸಂಪರ್ಕ ಒದಗಿ ಬಂತು. ಆನಂತರ ಬೆಂಗಳೂರಿನಲ್ಲಿ ಸೇನಾ ಇಲಾಖೆಯಲ್ಲಿ ಕೆಲಸ ಮಾಡುವ ಸಂದರ್ಭ ಒದಗಿತ್ತು. ಸೈನ್ಯದ ಮುಖಂಡರು ಇವರನ್ನು ಗೌರವದಿಂದ ಕಂಡಿದ್ದರಿಂದ ಪು.ತಿ.ನ. ರವರ ರೀತಿನೀತಿಗಳು ಬದಲಾಗದೆ ನೆಮ್ಮದಿಯಾಗಿ ಕೃತಿರಚನೆ ಮಾಡಲು ಸಾಧ್ಯವಾಯಿತು.

ಹಣತೆ, ಮಾಂದಳಿರು, ಶಾರದ ಯಾಮಿನಿ, ಗಣೇಶ ದರ್ಶನ, ರಸ ಸರಸ್ವತಿ, ಮಲೆ ದೇಗುಲ, ಹೃದಯ ವಿಹಾರಿ, ಇರುಳು ಮೆರುಗು, ಹಳೆಯ ಬೇರು ಹೊಸ ಚಿಗುರು, ಎಂಬತ್ತರ ನಲುಗು, ರಥಸಪ್ತಮಿ, ನಿರೀಕ್ಷೆ, ಹಣತೆಯ ಹಾಡು ಅವರು ರಚಿಸಿದ ಕವನ ಸಂಕಲನಗಳಾಗಿವೆ.

ಮಹಾಕಾವ್ಯ – 'ಶ್ರೀಹರಿ ಚರಿತೆ', ನಾಟಕ – ಜಾಹ್ನವಿಗೆ ಜೋಡಿ ದೀವಿಗೆ ಮತ್ತು ಇತರ ನಾಟಕಗಳು, ಗೀತನಾಟಕಗಳು, ಸಣ್ಣಕತೆ, ಗದ್ಯಚಿತ್ರಗಳು, ಅನುವಾದ ಕೃತಿಗಳು, ಕಾವ್ಯ–ಮೀಮಾಂಸೆ–ವಿಮರ್ಶೆ, ಸಂಗ್ರಹ ಹಾಗೂ ಸಂಪಾದಕರಾಗಿ ಅನೇಕ ಕೃತಿಗಳನ್ನು ರಚಿಸಿದ್ದಾರೆ.

ಪು.ತಿ.ನ. ಅವರು ಕವಿ ಮಾತ್ರವಲ್ಲದೆ ಉತ್ತಮ ಗೀತನಾಟಕಕಾರರರೂ ಆಗಿದ್ದಾರೆ. ಅವರ ಒಂಬತ್ತು ಗೀತನಾಟಕಗಳಲ್ಲಿ ಗೀತರೂಪಕಗಳೂ ಸೇರಿವೆ. ಅವುಗಳು ಕ್ರಮವಾಗಿ – ಗೋಕುಲ ನಿರ್ಗಮನ, ಅಹಲ್ಯೆ, ಸತ್ಯಾಯನ ಹರಿಶ್ಚಂದ್ರ, ವಿಕಟಕವಿ ವಿಜಯ, ಶಬರಿ, ಹಂಸದಮಯಂತಿ, ಹರಿಣಾಭಿಸರಣ, ದೀಪಲಕ್ಷ್ಮಿ, ಕುಚೇಲ ಕೃಷ್ಣ, ದೋಣಿಯ ಬಿನದ, ಶ್ರೀ ರಮಣ ಪ್ರಭ, ಶ್ರೀರಾಮ ಪಟ್ಟಾಭಿಷೇಕ.

ಈ ನಾಟಕಗಳಲ್ಲಿ ಗೋಕುಲ ನಿರ್ಗಮನ, ಅಹಲ್ಯೆ, ಬಿ.ವಿ. ಕಾರಂತರ ಪ್ರಯತ್ನದಿಂದ ರಂಗಪ್ರಯೋಗ ಕಂಡಿವೆ. ಉದ್ಯಾವರ ಮಾಧವ ಆಚಾರ್ಯ ಹೇಳುವಂತೆ ಹರಿಣಾಭಿಸರಣ ಹಾಗೂ ಸತ್ಯಾಯನ ಹರಿಶ್ಚಂದ್ರ ನಾಟಕಗಳು ರಂಗ ಪ್ರಯೋಗ ಕಂಡಿವೆ. ಗೋಕುಲ ನಿರ್ಗಮನ ಅವರ ಹೆಸರಾಂತ ನಾಟಕವಾಗಿದೆ.



ಶ್ರೀಹರಿಚರಿತೆ ಆಧುನಿಕ ಯುಗದಲ್ಲಿ ಕೃಷ್ಣನ ಕಲ್ಪನೆಯನ್ನು ಸಾಕ್ಷಾತ್ಕರಿಸುವ ಪ್ರಯತ್ನವಾಗಿದೆ. ಇಂತಹ ಪೌರಾಣಿಕ ಸಂಗೀತಮಯ ನಾಟಕಗಳ ರಚನೆಗೆ ಪ್ರೇರಣೆ ಸಿಕ್ಕಿದ್ದು ಹರಿಕಥೆಗಳು, ಅರಮನೆ ನಾಟಕ ಕಂಪೆನಿಗಳಲ್ಲಿದ್ದ ಒಳ್ಳೆಯ ಸಂಗೀತಗಾರರು. ಅವರೊಬ್ಬ ಗೀತರೂಪಕ ನಾಟಕಕಾರರಾಗುವುದಕ್ಕೆ ಕಾರಣ ಕಾವ್ಯ ಮತ್ತು ಸಂಗೀತ ಮೇಳೈಸಿಕೊಂಡ ಕನ್ನಡದ ಏಕೈಕ ರಚನಕಾರರಾಗಿದ್ದುದೇ ಆಗಿದೆ. ಸಂಗೀತಕ್ಕೆ ಪು.ತಿ.ನ. ಅವರು ಹಲವು ಹೊಸ ರಾಗಗಳನ್ನು ಕಂಡುಹಿಡಿಯುವುದರ ಮೂಲಕ ಕೊಡುಗೆ ಸಲ್ಲಿಸಿದ್ದಾರೆಂದು ಡಾ. ದೊರೆಸ್ವಾಮಿ ಅಯ್ಯಂಗಾರರು ಮೆಚ್ಚುಗೆಯ ಮಾತನ್ನಾಡಿದ್ದಾರೆ. ಅವುಗಳಲ್ಲಿ ಮುಖ್ಯವಾದವು ವಾಸಂತಿ, ಸಂಜೀವಿನಿ, ಹರಿಣಿ, ಋತುವಿಲಾಸ, ಗಾಂಧಾರದೋಲ, ಋಷಭ ವಿಲಾಸ ಮತ್ತು ಇನ್ನೂ ನಾಮಕರಣವಾಗದ ಹಲವಾರು ರಾಗಗಳು ಸಾಕಷ್ಟಿವೆ. ಪು.ತಿ.ನ ಅವರು ಖ್ಯಾತ ಗದ್ಯ ಬರಹಗಾರರೂ ಆಗಿದ್ದರು ಎಂಬುದಕ್ಕೆ ಅವರ ಐದು ಪ್ರಬಂಧ ಸಂಕಲನಗಳು ಸಾಕ್ಷಿಯಾಗಿವೆ. ಕವಿತೆಯ ಹಾಗೆ ಸರಳ, ಪ್ರಾಮಾಣಿಕ ಮನಸ್ಥಿತಿಯುಳ್ಳ ಹಿರಿಯ ಕವಿ ಪು.ತಿ.ನ. ಅವರಿಗೆ ಸಂದ ಪ್ರಶಸ್ತಿಗಳು ಹಲವಾರು. ಇವರ "ಹಂಸ ದಮಯಂತಿ ಮತ್ತು ಇತರ ರೂಪಕಗಳು" ಎಂಬ ಕೃತಿಗೆ 1966ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪದ್ಮಶ್ರೀ, ಪಂಪಪ್ರಶಸ್ತಿ, ನಾಡೋಜ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾಲಯದ ಡಿ.ಲಿಟ್, ರಾಜ್ಯೋತ್ಸವ ಪ್ರಶಸ್ತಿಗಳಾಗಿವೆ.

ಜೊತೆಗೆ ಚಿಕ್ಕಮಗಳೂರಿನಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವಗಳು ಸಂದಿವೆ. ಪುತಿನ ಮನೆ ಸ್ಮಾರಕವಾಗಿದ್ದು, ಪುತಿನ ಬದುಕಿದ್ದ ಕಾಲದಲ್ಲೇ. ಅವರ ಆಶಯದಂತೆ 'ನಾನು ಬದುಕಿರುವಾಗಲೇ ಬಾಳಿ, ಬದುಕಿದ ನನ್ನ ಮನೆ ಸ್ಮಾರಕವಾಗಬೇಕು. ನಾನು ಬರೆದ ಸಾಹಿತ್ಯ ನಿಂತ ನೀರಾಗದೆ, ನನ್ನ ಸಾವಿನಾಚೆಯೂ ಮುಂದಿನ ಪೀಳಿಗೆಯನ್ನು ತಲುಪುವಂತಾಗಬೇಕು' ಎಂದಿದ್ದರು. 1996ರಲ್ಲಿ ಈ ಮನೆ ಸ್ಮಾರಕವಾಗಿ, ಸರ್ಕಾರದ ತೆಕ್ಕೆ ಸೇರಿತು. ಅವರ ಬಯಕೆಯಂತೆ ಮನೆಯ ಮೂಲ ರೂಪವನ್ನು ಬದಲಿಸದೆ 2000ನೇ ಇಸ್ವಿಯಲ್ಲಿ ಪ್ರಾಚ್ಯವಸ್ತು ಇಲಾಖೆಗೆ ಗುತ್ತಿಗೆ ನೀಡಿ ಮೂಲ ಮನೆಯ ಅಂದ, ಚಂದಕ್ಕೆ ಯಾವುದೇ ಧಕ್ಕೆ ಬಾರದಂತೆ ಕವಿ ಮನೆಯನ್ನು ಸುಂದರ ಸ್ಮಾರಕವಾಗಿಸಲಾಗಿದೆ.

ಹೆಮ್ಮೆಯ ಕನ್ನಡಿಗ : ಪುನೀತ್ ರಾಜ್‌ಕುಮಾರನಿಗೆ ಪವಿತ್ರ ನಮನಗಳು
(17.03.1975 – 29.10.2021)

– ಮಹೇಶ್

ಕನ್ನಡ ನಾಡು ನುಡಿಯನ್ನು ವಿಶ್ವವಿಖ್ಯಾತಗೊಳಿಸಿದ ದಿಗ್ಗಜರುಗಳ ಕಿರು ಪರಿಚಯವೇ ಈ ಅಂಕಣ

ಚಲನಚಿತ್ರ ಕ್ಷೇತ್ರದಲ್ಲಿ ಚಿತ್ರನಟ, ಹಿನ್ನೆಲೆ ಗಾಯಕ, ತಂತ್ರಜ್ಞ, ವಿತರಕ, ಕಿರುತೆರೆ ನಿರೂಪಕ ಮತ್ತು ಸಿನೆಮಾ ನಿರ್ಮಾಪಕನಾಗಿ ಕಾರ್ಯನಿರ್ವಹಿಸಿದ ಬಹುಮುಖ ಪ್ರತಿಭಾವಂತನೇ ಪುನೀತ್ ರಾಜಕುಮಾರ್ ಅವರಾಗಿದ್ದಾರೆ. ಇವರು 29 ಕನ್ನಡ ಚಲನಚಿತ್ರಗಳಲ್ಲಿ ನಾಯಕ ನಟರಾಗಿ ನಟನೆ ಮಾಡಿದ್ದಾರೆ. ಬಾಲ್ಯದಲ್ಲಿ ತನ್ನ ತಂದೆ ರಾಜಕುಮಾರ್ ಅಭಿನಯದ ಚಿತ್ರಗಳಲ್ಲಿ ಬಾಲನಟನಾಗಿ ಕಾಣಿಸಿಕೊಂಡಿದ್ದರು. ಪುನೀತ್ ಅವರು 2002ರಲ್ಲಿ ಅಪ್ಪು ಚಿತ್ರದಲ್ಲಿ ಮೊದಲ ಬಾರಿಗೆ ನಾಯಕನಟನಾಗಿ ಸಿನೆಮಾರಂಗದ ಪಯಣ ಆರಂಭಿಸಿದರು. ಅವರನ್ನು ಅಭಿಮಾನಿಗಳು "ಪವರ್‌ಸ್ಟಾರ್" ಎಂದೂ ಕರೆಯುತ್ತಾರೆ. ಅವರು ನಟಿಸಿದ ಅಭಿ, ಆಕಾಶ್, ಅರಸು, ಮಿಲನ, ಜಾಕೀ, ಹುಡುಗರು, ಅಣ್ಣಾ ಬಾಂಡ್ ಮತ್ತು ಪವರ್ ಸೇರಿದಂತೆ ಇತರ ಹಲವು ಚಲನಚಿತ್ರಗಳು ಯಶಸ್ವಿಯಾಗಿ ಪ್ರದರ್ಶನಗೊಂಡಿದ್ದವು. ಅವರು ಕನ್ನಡ ಚಿತ್ರರಂಗದ ಪ್ರಮುಖ ನಾಯಕನಟರಲ್ಲಿ ಒಬ್ಬರಾಗಿದ್ದರು. ಅವರು ಟಿವಿ ಕಾರ್ಯಕ್ರಮ–ಕನ್ನಡದ ಕೋಟ್ಯಧಿಪತಿಯ ಪ್ರಸಿದ್ಧ ನಿರ್ವಾಹಕರಾಗಿದ್ದರು. ಕರ್ನಾಟಕ ರಾಜ್ಯಸರ್ಕಾರದ ವಿವಿಧ ಯೋಜನೆಗಳ ರಾಯಭಾರಿಯಾಗಿ, ಸಾಮಾಜಿಕ ಜಾಗೃತಿಯ ಪ್ರಚಾರಕರಾಗಿಯೂ ಅವರು ಸೇವೆ ಸಲ್ಲಿಸಿದ್ದಾರೆ.

ಪುನೀತ್ ಅವರು ಡಾ.ರಾಜ್‌ಕುಮಾರ್ ಮತ್ತು ಪಾರ್ವತಮ್ಮ ರಾಜ್‌ಕುಮಾರ್ ದಂಪತಿಗಳ ಐದನೇ ಮತ್ತು ಕಿರಿಯ ಮುದ್ದಿನ ಮಗ. ಚಿಕ್ಕಮಗಳೂರಿನ ಅಶ್ವಿನಿ ರೇವಂತ್‌ರನ್ನು ವಿವಾಹವಾಗಿದ್ದರು. ಇವರಿಗೆ ಇಬ್ಬರು ಪುತ್ರಿಯರಿದ್ದಾರೆ.

ನಿರ್ದೇಶಕ ವಿ. ಸೋಮಶೇಖರ್ ಅವರು ಪುನೀತ್ ಅವರನ್ನು ಆರು ತಿಂಗಳ ಮಗುವಾಗಿದ್ದಾಗ ಪ್ರೇಮದ ಕಾಣಿಕೆ ಚಿತ್ರದಲ್ಲಿ ತೆರೆಯ ಮೇಲೆ ತಂದರು. ನಂತರ ಪುನೀತ್ ಒಂದು ವರ್ಷದವನಾಗಿದ್ದಾಗ, ಕೃಷ್ಣಮೂರ್ತಿ ಪುರಾಣಿಕ್ ಅವರ ಕಾದಂಬರಿಯನ್ನಾಧರಿಸಿದ ವಿಜಯ್ ಅವರ ಚಿತ್ರ ಸನಾದಿ ಅಪ್ಪಣ್ಣ ಮತ್ತು ತಾಯಿಗೆ ತಕ್ಕ ಮಗದಲ್ಲಿ ನಟಿಸಿದರು. ನಿರ್ದೇಶಕ ದೊರೈ–ಭಗವಾನ್ ಪುನೀತ್ ಅವರನ್ನು ವಸಂತ ಗೀತ ಚಿತ್ರದಲ್ಲಿ ಶ್ಯಾಮ್ ಪಾತ್ರದಲ್ಲಿ, ಕೆ. ಎಸ್. ಎಲ್. ಸ್ವಾಮಿಯವರ ಪೌರಾಣಿಕ ನಾಟಕ ಭೂಮಿಗೆ ಬಂದ ಭಗವಂತ ಮತ್ತು ಬಿ. ಎಸ್. ರಂಗ ಅವರ ಭಾಗ್ಯವಂತದಲ್ಲಿ ಅವರು ಟಿ. ಜಿ. ಲಿಂಗಪ್ಪ ಸಂಯೋಜಿಸಿದ ಮೊದಲ ಜನಪ್ರಿಯ ಗೀತೆ "ಬಾನ ದಾರಿಯಲ್ಲಿ ಸೂರ್ಯ" ವನ್ನು ಧ್ವನಿಮುದ್ರಿಸಿದರು. ಅದೇ ವರ್ಷ, ಅವರು ತಂದೆಯೊಂದಿಗೆ ಚಲಿಸುವ ಮೋಡಗಳು ಮತ್ತು ಹೊಸ ಬೆಳಕು ಚಿತ್ರದಲ್ಲಿ ಕಾಣಿಸಿಕೊಂಡರು. ಈ ಚಿತ್ರಕ್ಕೆ "ಅತ್ಯುತ್ತಮ ಬಾಲ ಕಲಾವಿದ" ಪ್ರಶಸ್ತಿಯನ್ನು ಕರ್ನಾಟಕ ರಾಜ್ಯ ಚಲನಚಿತ್ರ ಮಂಡಳಿಯಿಂದ ಪಡೆದರು.

ಎರಡು ನಕ್ಷತ್ರಗಳು ಚಿತ್ರಕ್ಕಾಗಿ ಎರಡನೇ ಅತ್ಯುತ್ತಮ "ಬಾಲ ಕಲಾವಿದ" ಪ್ರಶಸ್ತಿಯನ್ನು ಕರ್ನಾಟಕ ರಾಜ್ಯ ಚಲನಚಿತ್ರ ಮಂಡಳಿಯಿಂದ ಪಡೆದರು. ಅವರು ಎರಡು ಪೌರಾಣಿಕ ಚಲನಚಿತ್ರಗಳಲ್ಲಿಯೂ ಕಾಣಿಸಿಕೊಂಡರು.



ಎನ್. ಲಕ್ಷ್ಮೀನಾರಾಯಣ ನಿರ್ದೇಶಿಸಿದ ಮತ್ತು ಶೆರ್ಲಿ ಎಲ್. ಅರೋರಾ ಅವರ ವಾಟ್ ದೆನ್ ರಾಮನ್? ಕಾದಂಬರಿ ಆಧಾರಿತ 1985ರ ಚಿತ್ರ "ಬೆಟ್ಟದ ಹೂವಿನಲ್ಲಿ" ಮುಗ್ಧ ರಾಮು ಪಾತ್ರಕ್ಕಾಗಿ ಪುನೀತ್ ಅವರಿಗೆ 33ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ 'ಅತ್ಯುತ್ತಮ ಬಾಲ ಕಲಾವಿದ' ಪ್ರಶಸ್ತಿಯನ್ನು ಪ್ರಧಾನ ಮಾಡಲಾಗಿತ್ತು. ಬಾಲನಟನಾಗಿ, ಕೊನೆಯ ಪಾತ್ರ ಪರಶುರಾಮ್ ಚಿತ್ರದಲ್ಲಿ ಅವರ ತಂದೆಯೊಂದಿಗೇ ಆಗಿತ್ತು. ದಿನೇಶ್ ಬಾಬು ಅವರ ಅಭಿ ಚಿತ್ರದಲ್ಲಿ ಕಾಲೇಜು ಹುಡುಗನಾಗಿ ಕಾಣಿಸಿಕೊಂಡರು. ಎಸ್. ನಾರಾಯಣ್ ಅವರ ಕೌಟುಂಬಿಕ ಚಿತ್ರ ಮೌರ್ಯದಲ್ಲಿ ನಟಿಸಿದರು. ಅರಸು ಚಿತ್ರದ ಅಭಿನಯಕ್ಕಾಗಿ, ಅವರು ಮೊದಲ ಫಿಲ್ಮ್‌ಫೇರ್ 'ಅತ್ಯುತ್ತಮ ನಟ' ಪ್ರಶಸ್ತಿಯನ್ನು ಪಡೆದರು. ಪ್ರಕಾಶ್ ಅವರ ಕೌಟುಂಬಿಕ ಮೌಲ್ಯಗಳ ಚಿತ್ರ 'ಮಿಲನ'ದಲ್ಲಿ ಅವರು ಆಕಾಶ್ ಎಂಬ ರೇಡಿಯೋ ಜಾಕಿಯಾಗಿ ನಟಿಸಿದ್ದಾರೆ. ಈ ಚಿತ್ರಕ್ಕಾಗಿ ಅವರು 'ಅತ್ಯುತ್ತಮ ನಟ' ಎಂದು ಪ್ರಥಮವಾಗಿ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಯನ್ನು ಪಡೆದರು. ಜಾಕೋಬ್ ವರ್ಗೀಸ್ ಅವರ ರಾಜಕೀಯ ಥ್ರಿಲ್ಲರ್ ಪೃಥ್ವಿ ಚಿತ್ರದಲ್ಲಿ ಅವರು ಭ್ರಷ್ಟಾಚಾರದ ವಿರುದ್ಧ ಹೋರಾಡುವ ಜಿಲ್ಲಾಧಿಕಾರಿಯಾಗಿ ನಟಿಸಿದ್ದಾರೆ. 2017ರಲ್ಲಿ, ಅವರು ಸಂತೋಷ್ ಆನಂದ್ರಾಮ್ ಅವರ ರಾಜಕುಮಾರ ಚಿತ್ರದಲ್ಲಿ ಕಾಣಿಸಿಕೊಂಡರು, ಇದು ಬಾಕ್ಸ್ ಆಫೀಸ್‌ನಲ್ಲಿ ಎಲ್ಲಾ ದಾಖಲೆಗಳನ್ನು ಮುರಿದು ಸಾರ್ವಕಾಲಿಕ ಅತಿ ಹೆಚ್ಚು ಗಳಿಕೆ ಮಾಡಿದ ಕನ್ನಡ ಭಾಷೆಯ ಚಲನಚಿತ್ರವಾಯಿತು. ಪುನೀತ್ ತಂದೆಯಂತೆಯೇ ಗಾಯನದಲ್ಲಿ ಉತ್ತಮ ಸಾಧನೆ ಮಾಡಿದ ಕೆಲವೇ ಕೆಲವು ನಟರಲ್ಲಿ ಒಬ್ಬರು. ಪುನೀತ್ ಅವರು ಅನೇಕ ಕಂಪನಿಗಳ ಹಾಗೂ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ತಂಡ ರಾಯಲ್ ಚಾಲೆಂಜರ್ಸ್ ಬೆಂಗಳೂರಿನ ಬ್ರಾಂಡ್ ರಾಯಭಾರಿಯೂ ಆಗಿದ್ದರು. ಇದಲ್ಲದೆ, ತಮ್ಮ ಗಾಯನಕ್ಕಾಗಿ ಪಡೆದ ಸಂಭಾವನೆಯನ್ನು ವಿವಿಧ ಸಾಮಾಜಿಕ ಕೆಲಸಗಳಿಗೆ ವಿನಿಯೋಗಿಸುತ್ತಿದ್ದರು. ಅವರ ಸಾಮಾಜಿಕ ಸೇವೆ, ವೃದ್ಧಾಶ್ರಮ, ಗೋಶಾಲೆ, ಅನಾಥ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ಹೀಗೆ ಹಲವು ಆಯಾಮಗಳಲ್ಲಿ ಮಾಡಿದ್ದರು. ಅವರು 1,800 ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಹೊತ್ತಿದ್ದರು. ಇಂದು ಯುವಜನರು ಇದ್ದಷ್ಟು ದಿನ ನಾವೂ ನಮ್ಮ ಕೈಯಲ್ಲಾದ ಸಾಮಾಜಿಕ ಸೇವೆಯನ್ನು ಮಾಡುತ್ತೇವೆ ಎಂದು ಶ್ರದ್ಧಾಂಜಲಿಯ ವೇಳೆ ಶಪಥಗೈಯುತ್ತಿದ್ದಾರೆ. ಇವರು ರಾಜ್‌ಕುಮಾರರಂತೆ ನೇತ್ರದಾನ ಮಾಡಿ ನಾಲ್ವರ ಕಣ್ಣು ಬೆಳಕಾಗಿದ್ದಾರೆ. ಕನ್ನಡ ನಾಡಿನ ಧ್ರುವತಾರೆ ಆಕಾಶದಲ್ಲಿಂದು ಮಿನುಗುತ್ತಿದ್ದಾರೆ. ಇವರ ಕಲಾಸೇವೆಯನ್ನು ಪರಿಗಣಿಸಿ ಮರಣೋತ್ತರವಾಗಿ ಕರ್ನಾಟಕ ಸರ್ಕಾರ "ಕರ್ನಾಟಕ ರತ್ನ" ಪ್ರಶಸ್ತಿಯನ್ನು ಘೋಷಿಸಿದೆ.

ಕನ್ನಡದ ತೇಜಸ್ಸು : ಕೆ.ಪಿ.ಪೂರ್ಣಚಂದ್ರ ತೇಜಸ್ವಿ

(ಸೆಪ್ಟೆಂಬರ್ 8 1938 – ಏಪ್ರಿಲ್ 5 2007)

– ಡಾ. ಸತ್ಯಮಂಗಲ ಮಹದೇವ

ಕನ್ನಡ ಭಾಷೆಯ ನವ್ಯ ಸಾಹಿತ್ಯದ ಸ್ವತಂತ್ರ ಪ್ರವೃತ್ತಿಯ ಲೇಖಕರಲ್ಲಿ ಪ್ರಮುಖವಾಗಿ ಕೇಳಿ ಬಂದ ಹೆಸರು ಕೆ.ಪಿ. ಪೂರ್ಣಚಂದ್ರ ತೇಜಸ್ವಿ. ಅಬಚೂರಿನ ಪೋಸ್ಟಾಫೀಸು ಕಥಾ ಸಂಕಲನದ ಮೂಲಕ ಇವರ ಹೆಸರು ಮುನ್ನಲೆಗೆ ಬಂದಿತ್ತು. ತೇಜಸ್ವಿ ಆರಂಭದಲ್ಲಿ ಬೇರೆ ಹೆಸರಿನಲ್ಲಿ ಕಾವ್ಯ ರಚನೆ ಮಾಡಿದ್ದರೂ, ನಂತರ ಕಥೆ, ಕಾದಂಬರಿ, ಲೇಖನಗಳ ಕಡೆ ಹೆಚ್ಚಿನ ಗಮನ ಹರಿಸಿದರು.

ರಾಷ್ಟ್ರಕವಿ ಕುವೆಂಪು ಮತ್ತು ಹೇಮಾವತಿ ದಂಪತಿಗೆ ಪುತ್ರರಾಗಿ ಶಿವಮೊಗ್ಗ ಜಿಲ್ಲೆಯ ಕುಪ್ಪಳಿಯಲ್ಲಿ ಜನಿಸಿದರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪದವಿ ಹಾಗೂ ಕನ್ನಡದಲ್ಲಿ ಎಂ.ಎ. ಪದವಿ ಪಡೆದರು.ಇವರ ಮೊದಲ ಕಥೆ 'ಲಿಂಗ ಬಂದ'. ಸ್ನಾತಕೋತ್ತರ ಪದವಿಯ ನಂತರ ಅದ್ಯಾಪಕ ವೃತ್ತಿಯನ್ನು ಬಯಸದೆ ಮಲೆನಾಡಿನ ಮೂಡಿಗೆರೆಯಲ್ಲಿ ಕೃಷಿಯಲ್ಲಿ ತೊಡಗುವ ಮಹತ್ವದ ನಿರ್ಧಾರವನ್ನು ಮಾಡಿಕೊಂಡರು. ಕೃಷಿ ಜೊತೆಗೇ ಅಗಾದವಾದ ಸಾಹಿತ್ಯ ಕೃಷಿಯಲ್ಲಿ ತೊಡಗಿದರು. ಸಾಹಿತ್ಯದ ಜೊತೆಗೆ ಇವರಿಗೆ ಛಾಯಾಚಿತ್ರಗ್ರಹಣ ಹಾಗು ಬೇಟೆಯಲ್ಲಿ ಆಸಕ್ತಿಯಿದ್ದಿತು. ಇವರು ರೈತ ಚಳುವಳಿಗಳಲ್ಲಿಯೂ ಭಾಗಿಯಾಗಿದ್ದರು. ಕವಿತೆ, ಕತೆ, ಕಾದಂಬರಿ, ನಾಟಕ, ಅನುವಾದ, ಪ್ರವಾಸ ಕಥನ ಮೊದಲಾದ ಪ್ರಕಾರಗಳಲ್ಲಿ ಸಾಹಿತ್ಯಕೃತಿಗಳನ್ನು ರಚಿಸಿದ್ದಾರೆ. ಹಲವಾರು ಆಂಗ್ಲ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ನಾಲ್ಕು ದಶಕಗಳ ಕಾಲ ಕಥೆ, ಕಾದಂಬರಿಗಳ ಮೂಲಕ, ವಿಜ್ಞಾನದ ವಿಸ್ಮಯಗಳಲ್ಲಿ ಅನೇಕ ಮಹತ್ವಪೂರ್ಣ ಕೃತಿಗಳನ್ನು ನೀಡಿದ್ದಾರೆ. ಇವುಗಳಲ್ಲಿ ಕೀಟಗಳು, ಪ್ರಾಣಿಗಳು, ನದಿ–ಕೊಳ್ಳಗಳು, ಕಾಡುಗಳು, ಬೇಟೆಯ ವೈವಿಧ್ಯತೆಯ ಪ್ರಕೃತಿ ಪ್ರಪಂಚವನ್ನು ತಂದಿದ್ದಾರೆ. ಇವರ ಸಾಹಿತ್ಯ ಸೇವೆಗಾಗಿ ಪಂಪ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿಗಳು ಸಂದಿವೆ.

ಇಪ್ಪತ್ತೊಂದನೇ ಶತಮಾನದ ಚರಿತ್ರೆಯೆಂದರೆ ಅದು ವಿಜ್ಞಾನದೊಡನೆ ನಡೆಸಿದ ಅನುಸಂಧಾನದ ಚರಿತ್ರೆ, ವಿಜ್ಞಾನದ ಜೊತೆಗಿನ ಅನುಸಂಧಾನ ಮಾನವ ಚಿಂತನೆಯ ದಿಕ್ಕನ್ನೇ ಬದಲಿಸಿದೆ. ವೈಜ್ಞಾನಿಕ ಸಂಶೋಧನೆಗಳು, ಚಿಂತನೆಗಳು, ಅವುಗಳಿಂದ ಮೂಡಿದ ತಂತ್ರಜ್ಞಾನ ಹೊಸ ಸಂಸ್ಕೃತಿಯ ಹುಟ್ಟಿಗೆ ನಾಂದಿ ಹಾಡಿವೆ. ವಿಜ್ಞಾನ ಮಾನವನ ಬೌದ್ಧಿಕ ಚಿಂತನೆಯ ವಿಧಾನವನ್ನೇ ಬದಲಾಯಿಸಿದೆ. ಇಪ್ಪತ್ತನೇ ಶತಮಾನದ ಮತ್ತೊಂದು ವೈಶಿಷ್ಟ್ಯವೆಂದರೆ ವಿಪುಲವಾದ ವೈಜ್ಞಾನಿಕ ಸಾಹಿತ್ಯ ಸೃಷ್ಟಿ ಸೃಜನಶೀಲ ಸಾಹಿತ್ಯದಷ್ಟೇ ಹಲವೊಮ್ಮೆ ಅದನ್ನು ಮೀರಿಸಿದ ಜನಪ್ರಿಯತೆಯನ್ನು ಗಳಿಸಿದ್ದವು. ಕುವೆಂಪು ಅವರ ಪಾಲಿಗೆ ವಿಜ್ಞಾನ ಜ್ಞಾನದ ತೃಷೆಯನ್ನು ಹಿಂಗಿಸುವ, ಜೊತೆಗೆ ವೈಚಾರಿಕತೆ, ಮತ, ಮೌಢ, ಸಂಪ್ರದಾಯಗಳಿಂದ ಬಂಧ ಮುಕ್ತನನ್ನಾಗಿಸುವ ಸಾಧನ. ಹಾಗಾಗಿ "ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ" ಎನ್ನುತ್ತಾರೆ. ಕುವೆಂಪು ಅವರು ಉಪಕುಲಪತಿಗಳಾಗಿದ್ದಾಗಲೇ ಪ್ರಸಾರಾಂಗ ಅಗಾಧ ಪ್ರಮಾಣದಲ್ಲಿ ವೈಜ್ಞಾನಿಕ ಸಾಹಿತ್ಯವನ್ನು ಸೃಷ್ಟಿಸಿದ್ದೂ ವಿಶೇಷ.

ಕನ್ನಡದಲ್ಲಿ ವೈಜ್ಞಾನಿಕ ಸಾಹಿತ್ಯ ರಚನೆ ಕುರಿತಂತೆ ಕಾರಂತ ತೇಜಸ್ವಿಯವರ ನಡುವೆ ಹಲವು ಸಾದೃಷ್ಯಗಳಿವೆ. ಇಬ್ಬರೂ ವಿಶ್ವವಿದ್ಯಾಲಯಗಳಲ್ಲಿ ಕ್ರಮಬದ್ಧ ವಿಜ್ಞಾನ ಶಿಕ್ಷಣ ಪಡೆದವರಲ್ಲ. ವಿಜ್ಞಾನದ ಬೋಧನೆಯನ್ನು ಅವಲಂಬಿಸಿದವರಲ್ಲ. ವೈಜ್ಞಾನಿಕ ಸಂಶೋಧನೆಯನ್ನು ಶಿಸ್ತಿನಿಂದ ನಡೆಸಿದವರಲ್ಲ. ಆದರೆ ವೈಜ್ಞಾನಿಕ ಸಾಹಿತ್ಯ ರಚನೆಯನ್ನು ಇಬ್ಬರೂ ಬಹಳ ಗಂಭೀರವಾಗಿ ತೆಗೆದುಕೊಂಡವರು. ಕಾರಂತರು ವೈಜ್ಞಾನಿಕ ಸಾಹಿತ್ಯ ಕೃಷಿ ಆರಂಭಿಸಿದಾಗ ಸೃಜನಶೀಲ ಲೇಖಕರಲ್ಲಿ ಆ ಬಗ್ಗೆ ಅಂಥ ಒಲವು ಇದ್ದಂತೆ ತೋರುವುದಿಲ್ಲ. ಹೆಚ್ಚೆಂದರೆ ಕಾರಂತರ ಪ್ರಯತ್ನವನ್ನು "ಅವರ ಹಲವು ಪ್ರಯೋಗಗಳಲ್ಲಿ ಇದೂ ಒಂದು" ಎಂದು ಹೇಳಿ ಕೈತೊಳೆದುಕೊಂಡರು. ಇಂದಿಗೂ ಆ ಅಭಿಪ್ರಾಯ ಬದಲಾಗಿಲ್ಲ. ತೇಜಸ್ವಿಯವರು ವಿಜ್ಞಾನ ಸಾಹಿತ್ಯದೊಡನೆ ನಡೆಸಿದ ಮುಖಾಮುಖಿ ಕಾರಂತರಿಗಿಂತ ಭಿನ್ನವಾಗಿತ್ತು. ತಮ್ಮ ಸೃಜನಶೀಲ ಕೃತಿಗಳಲ್ಲಿ ತೇಜಸ್ವಿಯವರು ಸಾಮಾಜಿಕ ಶಿಸ್ತುಗಳಷ್ಟೇ ವೈಜ್ಞಾನಿಕ ಪರಿಕಲ್ಪನೆಗಳನ್ನು ಬಳಸುತ್ತಾರೆ. ವೈಜ್ಞಾನಿಕ ಕೃತಿಗಳಲ್ಲಿ ಸಾಮಾಜಿಕ ಶಿಸ್ತನ್ನು ಸಮುಚಿತವಾಗಿ ಬೆರೆಸುತ್ತಾರೆ. ಆದುದರಿಂದಲೇ ಅವರ ಕೃತಿಗಳಲ್ಲಿ ಅಪೂರ್ವವಾದ ಸ್ವೋಪಜ್ಞತೆ ಕಂಡುಬರುತ್ತದೆ. ಈ ಸಮ್ಮಿಳಿತದಿಂದಾಗಿ ಹಲವು ಬಾರಿ ಅವರ ವಿಜ್ಞಾನದ ಕೃತಿಗಳನ್ನು ಸೃಜನಶೀಲ ಕೃತಿಗಳಿಂದ ಪ್ರತ್ಯೇಕಿಸುವುದು ಕಷ್ಟವಾಗುತ್ತದೆ.



ತೇಜಸ್ವಿಯವರ ಈ ಧೋರಣೆಗೆ ಕಾರಣವಿದೆಯೆನಿಸುತ್ತದೆ. ಧರ್ಮ, ಆಧ್ಯಾತ್ಮ, ಪರಂಪರೆ, ರೂಢಿಗತ ಮೌಲ್ಯಗಳನ್ನು ಪ್ರಶ್ನಿಸುವ ಅವುಗಳಿಗೆ ಸ್ಪಂದಿಸುವ ಇಲ್ಲವೇ ಪ್ರತಿಕ್ರಿಯಿಸುವ ಪರಿಧಿಯಲ್ಲೇ ನಮ್ಮ ಸೃಜನಾತ್ಮಕ ಸಾಹಿತ್ಯ ರಿಂಗಣಗುಡುತ್ತಿದ್ದಾಗ, ಆ ಪರಿಧಿಯಿಂದ ಬಿಡುಗಡೆಗೊಳ್ಳಲು ತೇಜಸ್ವಿ ಪ್ರಯತ್ನಿಸಿದರು. ಆ ಆವರಣದಿಂದ ಹೊರಜಿಗಿದು ಅವರು ವೈಜ್ಞಾನಿಕ ಚಿಂತನೆ, ತರ್ಕ, ಸಿದ್ಧಾಂತದ ಕಕ್ಷೆಗೆ ಬಂದರು. ಅಲ್ಲದೇ ಇಪ್ಪತ್ತನೇ ಶತಮಾನದ ವೈಜ್ಞಾನಿಕ ಚಿಂತನೆಯು, ವಿಶ್ಲೇಷಣೆಯ ವಿಧಾನದಿಂದ ಸಂಶ್ಲೇಷಣೆಯತ್ತ ಹೊರಳಿದ್ದು ತೇಜಸ್ವಿ ಅವರಿಗೆ ಸಶಕ್ತ ಸಾಧನ ಸಿಕ್ಕಂತಾಯಿತು. ಸಾಹಿತ್ಯ, ಫಿಲಾಸಫಿ ಮತ್ತು ವಿಜ್ಞಾನದ ವಿದ್ಯಾರ್ಥಿಯಾಗಿದ್ದ ತೇಜಸ್ವಿ ಅವರು ವೈಜ್ಞಾನಿಕ ತರ್ಕದ ಹಿನ್ನೆಲೆಯಲ್ಲಿ ಸೃಜನಶೀಲ ಕೃತಿಗಳನ್ನು ರಚಿಸಲು ಸಾಧ್ಯವಾಯಿತು.

ಒಂದು ಸರಳವಾದ ಘಟನೆಯನ್ನು ಸಹಜವಾದ ರೀತಿಯಲ್ಲೇ ಆರಂಭಿಸಿ, ಅದನ್ನು ಬೆಳೆಸುತ್ತಾ, ವಿಸ್ತಾರವಾದಂತೆ ಸಂಕೀರ್ಣಗೊಳಿಸುತ್ತಾ ನಿಗೂಢಗೊಳಿಸುತ್ತಾ ಕೊನೆಗೆ ಪಾರದರ್ಶಕವಾಗಿಸುವ ಪತ್ತೇದಾರಿ ತಂತ್ರವನ್ನು ಅವರು ಸಹಜವಾಗಿ ದುಡಿಸಿಕೊಳ್ಳುತ್ತಾರೆ. ತೇಜಸ್ವಿ ಅವರ ವೈಜ್ಞಾನಿಕ ಮಾಹಿತಿಯನ್ನು ಕಲೆಯ ಮಟ್ಟದಲ್ಲಿ ನಿರ್ವಹಿಸುತ್ತಾರೆ. ತೇಜಸ್ವಿಯವರ ವೈಜ್ಞಾನಿಕ ಕೃತಿಗಳಲ್ಲೇ ಅತ್ಯಂತ ಯಶಸ್ವೀ ಪ್ರಯೋಗವೆನಿಸಿದ ಮಿಸ್ಸಿಂಗ್ ಲಿಂಕ್‌ನಲ್ಲಿ ಈ ದುಡಿಮೆಯನ್ನು ಕಾಣಬಹುದು. ಕನ್ನಡದ ವೈಜ್ಞಾನಿಕ ಕೃತಿಗಳಲ್ಲೇ ಅದೊಂದು ವಿಶಿಷ್ಟ ಕೃತಿ, ಮಾನವನ ಉಗಮದಂಥ ಶುದ್ಧ ಶಾಸ್ತ್ರೀಯ ಹಾಗೂ ಸಂಕೀರ್ಣ ಶಾಖೆಯನ್ನು ನಿರೂಪಿಸಿರುವ ಪರಿ ಬೆರಗುಗೊಳಿಸುವಂಥದ್ದು. ವಾನರ ಸಂಕುಲದಿಂದ ಕವಲೊಡೆದ ಆದಿ ಮಾನವ ಇವರೆಡರ ನಡುವೆ ಕಳಚಿಬಿದ್ದು ಕಾಲಗರ್ಭ ಸೇರಿದ್ದ ಕೊಂಡಿಗಳ ಅನ್ವೇಷಣೆಯ ಸಾಹಸಗಾಥೆಯನ್ನು ಅವರು ಅಪೂರ್ವವಾದ ಬೆರಗಿನಿಂದ ಕಟ್ಟುತ್ತಾರೆ. ಅದಕ್ಕಾಗಿ ಹುಚ್ಚರಂತೆ ದುಡಿಯುವ ವಿಜ್ಞಾನಿಗಳ ಸಾಹಸಗಳು, ಆಕಸ್ಮಿಕವಾಗಿಯೇ ತೆರೆದುಕೊಳ್ಳುವ ಸಾಕ್ಷ್ಯಗಳು ಮಾನವ ಉಗಮ ಅವರ ನಿರೂಪಣೆಯಲ್ಲಿ ರೋಚಕವಾಗಿ ಗರಿಗಟ್ಟಿಕೊಂಡಿದೆ.

ಇದೇ ಬಗೆಯ ಅಚ್ಚರಿ, ವಿಸ್ಮಯ ನಿಗೂಢಗಳನ್ನು ತೇಜಸ್ವಿ ಅವರು ವಿಸ್ಮಯ ಸರಣಿಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಇಕಾಲಜಿ ವಸ್ತುವನ್ನು ಕುರಿತ ಸರಣಿಯಾದರೂ, ಆ ವಿಷಯಕ್ಕೆ ಅಷ್ಟೇನೂ ಪೂರಕವಲ್ಲದ ಆದರೆ ಇಂದ್ರಜಾಲದ ಕತೆಗಳಂತಿರುವ 'ಮೃತ್ಯು ಸರೋವರ ಲಾಬ್ರಿಯಾ", "ಲಾಚ್‌ನಲ್ ಮಾನ್ಸ್ಟರ್", "ಲೇಕ್‌ಯೀಸ್‌ನ ಪೆಡಂಭೂತ ಮುಂತಾದವುಗಳಲ್ಲಿ ನಿರೂಪಿಸಿದ್ದಾರೆ. ಅವರ "ಮಹಾನದಿ ನೈಲ್" ಕೃತಿ ರಚನೆಯಾಗಿದೆ.

ಜೀವ ಪ್ರಪಂಚದ ಕತೆಯನ್ನು ಹೇಳಲು ಅವರು ಅಳವಡಿಸಿಕೊಂಡಿರುವ ಕಥನ ಕ್ರಮ ವಿಶಿಷ್ಟವಾದದ್ದು. 1930ರ ದಶಕದಲ್ಲಿ ಕುವೆಂಪು ರಚಿಸಿದ ಮಲೆನಾಡಿನ ಚಿತ್ರಗಳು ಕೃತಿಯ ಮುಂದುವರಿದ ಭಾಗವನ್ನು ಸಾಮಾಜಿಕ ಜೀವವಿಜ್ಞಾನವನ್ನಾಗಿ ತೇಜಸ್ವಿಯವರು 80ರ ದಶಕದಲ್ಲಿ ಆರಂಭಿಸಿದ್ದರು. ಆ ಮೂಲಕ ವನಸಿರಿ, ಸಂಪ್ರದಾಯ, ಆಚರಣೆ, ಮೌಢ್ಯ, ಬದುಕಿನ ವಿಧಾನವನ್ನು ಸಂಶ್ಲೇಷಣಾ ಕ್ರಮದಿಂದ ಸಂಕಲಿಸಿದ್ದರು. ಪ್ರಕೃತಿಯಲ್ಲಿ ಸಹಜವಾಗಿ ಬೆಳೆದುಬಂದ ಹುಟ್ಟು ಮತ್ತು ನಿಸರ್ಗದ ಅವನತಿಯನ್ನು, ಅದರ ಅಳಿದುಳಿದ ವೈಭವವನ್ನು ಬಹುಶಿಸ್ತಿನ ಅಧ್ಯಯನವನ್ನಾಗಿ ಮೊದಲ ಬಾರಿಗೆ ಪರಿಸರದ ಕತೆಯಲ್ಲಿ ನಿರ್ವಹಿಸಿದರು. ಪರಿಸರದ ಕತೆ ಸಾಮಾಜಿಕ ಜೀವ ವಿಜ್ಞಾನವನ್ನು ಬಹುದೊಡ್ಡ ರೀತಿಯಲ್ಲಿ ಉದ್ಘಾಟಿಸಿತು. ಅದರ ಎರಡನೇ ಭಾಗವಾಗಿ ಅವರ ಕುಲುಮೆಯಲ್ಲೇ ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕತೆಗಳು ರೂಪ ಪಡೆಯಿತು.

ಅವರು ವರ್ಣಿಸುವ ಅಂಬರದ ಹಕ್ಕಿಗಳ ಹಾರಾಟ, ಮಿಂಚುಳ್ಳಿಯ ಚಿಟ್ಟೆ ಆಧ್ಯಾತ್ಮಿಕ ಲೋಕವನ್ನೇ ನಿರ್ಮಿಸಿ ಬಿಡುತ್ತವೆ. ಸಾಮಾಜಿಕ ವಸ್ತುಗಳನ್ನು ಕುರಿತು, ಚಿತ್ರಿಸುವ ಭಿತ್ತಿಯಲ್ಲಿ ಹಕ್ಕಿಗಳು ಹಾರಿಬಂದು ಕೂರುವುದು ಹಕ್ಕಿಗಳ ಪರಿಸರದಲ್ಲಿ ಮನುಷ್ಯರು ನುಗ್ಗಿ ಬರುವುದು ಎಡಬಿಡದೆ ಸಾಗಿದೆ. ಆ ದೃಷ್ಟಿಯಿಂದ ಕರ್ನಾಟಕದ ಹಕ್ಕಿಗಳು ಮಾಲಿಕೆ ಮತ್ತು ಡಾ.ವಿ.ವಿ. ಬೆಳವಾಡಿ ಅವರೊಡನೆ ರಚಿಸಿದ ಕೀಟ ಪ್ರಪಂಚ ಕುರಿತ ನಡೆಯುವ ಕಡ್ಡಿ ! ಹಾರುವ ಎಲೆ! ಗಮನಿಸಬೇಕು. ಇಲ್ಲಿ ಹಕ್ಕಿಗಳು, ಕೀಟಗಳು ಕೇವಲ ಜೀವಿಗಳಾಗದೆ ಸಾಮಾಜಿಕ ವಾಸ್ತವಗಳಾಗಿ ಹಕ್ಕಿ, ಕೀಟಗಳ ಬದುಕಿನ ಜೊತೆಗೆ ಅಲಕ್ಷಿತ ಜ್ಞಾನ, ದಾರುಣ ಕತೆಗಳು, ಮಂದಣ್ಣಗಳು ಇಣುಕಿ ನೋಡುತ್ತವೆ. ಹಾಗಾಗಿ ನಿಸರ್ಗದ ಪ್ರಭಾವ, ಹೆಡ್ಡ ಪ್ಯಾರನನ್ನು ಮಿಂಚುಳ್ಳಿಯ ಗೂಡಿನ ಪತ್ತೆಗೆ ಅಣಿಗೊಳಿಸುತ್ತದೆ. ದನಕಾಯುವ ರಾಮ, ಜೇನು ಹುಟ್ಟಿಗೆ ದಾಳಿಯಿಡುವ ಜೇನು ಮಗರೆ ಹಕ್ಕಿಯ ಜೀವನ ಕ್ರಮ, ಬಾಳೆಗುಬ್ಬಿ ಜೋಡಿಯ ಮರಣ, ವಿಧುರ ಮಾರನ ದುರಂತ ಜೀವನ, ಹಾವು ಮೀನು ಪ್ರಕರಣ, ಬಬ್ಬುವಿನ ಮಗನ ಸಾವನ್ನು ಮನುಷ್ಯರೊಡನೆ ಹುಟ್ಟುವ ಪ್ರೀತಿಯ ಸಂಬಂಧ, ಗದ್ದೆ ಗೊರವನ ದುರಂತಕ್ಕೆ ಸಾಕ್ಷಿಯಾದರೆ, ಕೊಡಲಿಗೆ ಉರುಳುವ ಹನಾಲು ತಾರೆ, ಮರಗಳು ಮಂಗಟ್ಟೆಯ ಹಕ್ಕಿಯ ಕೊರಳಿಗೆ, ಉರುಳು ಬಿಗಿಯುತ್ತವೆ.

ಭೌತ, ರಸಾಯನ, ಖಭೌತ ವಿಜ್ಞಾನದಂಥ ವಿಷಯಗಳನ್ನು ಇದಕ್ಕಿಂತ ಸರಳವಾಗಿ ಹೇಳಲು ಸಾಧ್ಯವಾಗುವುದಿಲ್ಲ ಎನ್ನುವುದೇ ಇವರ ಯಶಸ್ಸಿನ ಮಾನದಂಡ. ತೇಜಸ್ವಿ ಅವರ ವೈಜ್ಞಾನಿಕ ಕೃತಿಗಳನ್ನು ಒಟ್ಟಂದದಲ್ಲಿ ನೋಡಿದಾಗ ಕಾಣಸಿಗುವ ಲಕ್ಷಣಗಳಿವು: 1. ಅಗಾಧವಾದ ವಿಸ್ಮಯ, ಕುತೂಹಲ ಮತ್ತು ಬೆರಗಿನಿಂದಲೇ ವಿಷಯವನ್ನು ಪ್ರವೇಶಿಸುತ್ತಾರೆ. 2. ನಿರೂಪಣೆಗೆ ಅಂತರಶಿಸ್ತಿನ ಸಂಶ್ಲೇಷಣಾ ವಿಧಾನ ಬಳಕೆಯಾಗಿದೆ. 3. ಸಾಮಾಜಿಕ ಶಿಸ್ತು ಮತ್ತು ವೈಜ್ಞಾನಿಕ ಚಿಂತನೆಯನ್ನು ಸಮುಚಿತವಾಗಿ ಬೆರೆತ ಹೊಸದೊಂದು ವಿಧಾನವಾಗಿದೆ. 4. ವಿಜ್ಞಾನ ಪ್ರಯೋಗ ಮಾತ್ರ ಆಗದೆ, ಬಿಡುಗಡೆಯ ಹಾದಿಯಾಗಿ, ದುರಂತದ ಬಗ್ಗೆ ಎಚ್ಚರಿಸುವ ದನಿಯಾಗಿ ಕನ್ನಡವನ್ನು ದುಡಿಸಿಕೊಳ್ಳುವ ಸೃಜನಶೀಲ ಶಕ್ತಿಯಾಗಿದೆ.

ದಿವ್ಯಜ್ಯೋತಿ

– ಡಿ.ಎಸ್. ಕರ್ಕಿ

ತಿಳಿ ನೀಲದಲ್ಲಿ ತಾ ನೀಲವಾಗಿ
ಅವ ಹೋದ ದೂರ ದೂರ
ಬೆಳಗಿಹುದು ಇಲ್ಲಿ ಅವ ಬಿಟ್ಟ
ಬೆಳಕು ಇನ್ನೊಮ್ಮೆ ಏಕೆ ಬಾರ?
ಆಚೆ ಈಚೆ ಮೊಮ್ಮಕ್ಕಳಿಬ್ಬರಲಿ
ಮೈಯ ಬಾರ ಚೆಲ್ಲಿ
ಜಗದ ಕರುಣೆ ನಡುವಂತೆ
ನಡೆದು ಮಂದಿರದ ಪೀಠವೇರಿ
ನಿಂದಲ್ಲೊ – ಜಡವುಳಿದು
ಜೀವವೊಂದಾಯ್ತು ದೇವನಲ್ಲಿ
ಎಸೆದ ಗುಂಡಿಗಾ ಕುಸಿದ
ದೇಹದಲಿ ವಿಮಲ ರಕ್ತ ಚೆಲ್ಲಿ
ಮುಗಿದ ಕೈಯು ಮುಗಿದಂತೆ ಇತ್ತು :
ನೆಲಸಿತ್ತು ಕ್ಷಮೆಯ ಮೊಗದಿ
ಎದೆಯೊಳೆಂಥ ತಿಳಿ ಭಾವವಿತ್ತು !
ಅದನಾವ ಬಲ್ಲ ಜಗದಿ?
ಹೋದ ಹೋದನವ ತ್ಯಾಗ
ಜೀವನದ ತುತ್ತ ತುದಿಯನೇರಿ
ಏರಿ ಏರಿದೊಲು ಅಂತರಂಗದೈಸಿರಿಯ
ಜಗಕೆ ತೂರಿ ಸತ್ಯ–ಪ್ರೇಮಗಳ
ಸತ್ವವನ್ನೆ ಕಣ್ಣೆದುರು ಎತ್ತಿ ತೋರಿ
ಬೇರೆ ಲೋಕದನುಭಾವ
ಬೀರಿ ಅವ ಹೋದನಾವ ದಾರಿ?
ಎನಿತು ಸರಳ ನುಡಿ, ಎಷ್ಟು ಸಹಜ ನಡೆ,
ಮನದ ಮಹತಿಯೇನು ಅವನ ಎದೆಯ
ಉನ್ನತಿಯ ನಿಲುಕುವದು ಯಾವ ಗಿರಿಯ ಸಾನು?
ಇಹುದೆ ಅವನ ಕರುಣೆಯನು ಧರೆಗೆ
ಕರೆವಂಥ ಕಾಮಧೇನು?
ಅವನು ಗೈದ ಲೀಲೆಯಲಿ
ಲಯಸಿತೆಂಥವರ "ನಾನು–ನಾನು"
ತಿಳಿದಿಹುದು ಚಿತ್ತ : ಹರಿದಿಹುದು
ನೋಟ ಮೇಲಕ್ಕೆ ಬಾನಿನೆಡಗೆ
ಆ ಜಾಡ ಹಿಡಿದು ಇಳಿದಂತೆ
ಇಹುದು ಬೆಳಕೊಂದು ಕೆಳಗೆ ಇಳೆಗೆ
"ಎನೆಷ್ಟು ಭ್ರಾಂತಿ ಕಾಣದೆಯ ಜ್ಯೋತಿ?"
ಎಂಬರುಹು ಮೂಡಲೊಡನೆ
ಆಬೆಳಕ ನಂಬಿ ನಿಂದಿಹನು ಧೀರ
ಎದೆ ತೆರೆದು ನಾಡ ಕರೆಗೆ

ಸೌಜನ್ಯ : ಕವನಗಳಲ್ಲಿ ಮೂಡಿದ ಗಾಂಧಿ
ಕವನ ಸಂಕಲನದಿಂದ

ಕಸ್ತೂರ್‌ಬಾ ಗಾಂಧಿ

ಮಿಸ್ ಹೆಲಿಮನ್ – ಸರಳಾದೇವಿ

ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿಯು ಹಿಂದಿಯಲ್ಲಿ ಪ್ರಕಟಿಸಿದ ಕಸ್ತೂರ್‌ಬಾ ಕೃತಿಯನ್ನು ಹೊದಿಕೆ ಮಾಸ್ತರರಿಂದ ಕನ್ನಡಕ್ಕೆ ಅನುವಾದ ಮಾಡಿಸಿ ಅಂದಿನ ಅಧ್ಯಕ್ಷರಾದ ಕೆ.ಎಸ್. ನಾರಾಯಣಸ್ವಾಮಿ ಅವರು 1974ರಲ್ಲಿ ಪ್ರಕಟಿಸಿದ ಕಸ್ತೂರ್‌ಬಾ ಗಾಂಧಿ ಕೃತಿಯ ಭಾಗ ನಿಯಮಿತವಾಗಿ ಬರಲಿದೆ.

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

1935ರಲ್ಲಿ ಮೊಟ್ಟಮೊದಲು ಅನಿರೀಕ್ಷಿತವಾಗಿ ಮಗನವಾಡಿಯಲ್ಲಿ ಗಾಂಧಿ ಹಾಗೂ ಕಸ್ತೂರಬಾರೊಡನೆ ಕೆಲವು ದಿನ ಉಳಿಯುವ ಸುಯೋಗ ನನಗೆ ಒದಗಿತ್ತು. ಆಗ ಅಲ್ಲಿಯ ಜೀವನವು ತುಂಬಾ ಜಟಿಲವಾಗಿತ್ತು. ಲಖನೌ ಕಾಂಗ್ರೆಸ್ಸಿನ ತಯಾರಿ ನಡೆದಿತ್ತು. ಆಶ್ರಮವು ಕೆಲಸಗಾರ ಅತಿಥಿಗಳಿಂದ ತುಂಬಿ ಹೋಗಿತ್ತು. ನನಗೂ ಏನಾದರೂ ಕೆಲಸ ಕೊಡಿ ಎಂದು ನಾನು ಗಾಂಧಿ ಅವರ ಹತ್ತಿರ ಕೇಳಿದೆ. ಎರಡು ದಿನಗಳ ತರುವಾಯ ಕೆಲಸ ಕೊಡುವೆನೆಂದು ಅವರು ಆಶ್ವಾಸನವೇನೋ ಕೊಟ್ಟರು. ಆದರೆ ಕೆಲಸ ಕೊಡಲೇ ಇಲ್ಲ. ಮಧ್ಯಾಹ್ನ ಕಳೆಯುತ್ತಲೇ ಕಸ್ತೂರಬಾರ, ದರಬಾರು ನಡೆಯುತ್ತಿತ್ತು. ಅವರ ಸಂಗಡ ಇರುವ ಭಗಿನಿಯರೂ, ಹುಡುಗಿಯರು ಕೂಡಿ ಧಾನ್ಯ ಸ್ವಚ್ಛ ಮಾಡುವುದು, ಬೀಸುವುದು ಮೊದಲಾದ ಕೆಲಸ ಮಾಡಲು ಅಡಿಗೆ ಮನೆಯ ಪಡಸಾಲೆಯಲ್ಲಿ ಸೇರುತ್ತಿದ್ದರು. ಆಗ ನಾನೂ ಅವರೊಡನೆ ಸೇರಿಬಿಡುತ್ತಿದ್ದೆ. ನನಗೆ ಚೆನ್ನಾಗಿ ಹಿಂದಿ ಮಾತನಾಡಲು ಬರುತ್ತಿತ್ತು. ಆದ್ದರಿಂದ ಅವರ ಮಾತು ಕಥೆಗಳಲ್ಲಿ ಅನಾಯಾಸವಾಗಿ ಸೇರಿಕೊಳ್ಳುತ್ತಿದ್ದೆ. ಇದರಿಂದ ಕಸ್ತೂರಿಬಾ ಅವರು ದರಬಾರದ ಇನ್ನಿತರರೂ ತುಂಬಾ ಖುಷಿಯಾಗುತ್ತಿದ್ದರು. ಎಲ್ಲರೂ ನನ್ನನ್ನು ತುಂಬಾ ಪ್ರೀತಿಸುತ್ತಿದ್ದರು.

ನಾನು ತಿರುಗಿ ಒಮ್ಮೆ ನನಗೆ ಕೆಲಸ ಕೊಡಲು ಗಾಂಧಿ ಅವರಿಗೆ ನೆನಪು ಮಾಡಿದಾಗ ಅವರು ನಸುನಕ್ಕು ಹೇಳಿಬಿಟ್ಟರು. "ನೀನು ಕಸ್ತೂರಬಾ ಹಾಗೂ ಅವರ ದರಬಾರದೊಂದಿಗೆ ಸಮರಸವಾಗಿ ಬಿಟ್ಟಿರುವೆ, ಇದೇನೂ ಸಣ್ಣ ಕೆಲಸ ಅಲ್ಲ" ಎಂದು ಅನಂತರ ನನಗೆ ಊರಲ್ಲಿ ಹೋಗಿ ಪಾಯಖಾನೆ ಸ್ವಚ್ಛ ಮಾಡುವುದು, ಹಾಗೂ ಹತ್ತಿ ಸ್ವಚ್ಛ ಮಾಡುವುದರಿಂದ ಹಿಡಿದು ತಕಲಿಯ ಮೇಲೆ ನೂಲುವವರೆಗಿನ ಯಾವತ್ತೂ ಕೆಲಸ ಕೊಟ್ಟರು.



ಆದರೂ ನನ್ನ ಮೇಲೆ ಕಸ್ತೂರಬಾರ ಪ್ರೇಮ ಹಾಗೂ ವಾತ್ಸಲ್ಯ ಕೊನೆಯವರೆಗೂ ಇದ್ದವು. ಸೇವಾಗ್ರಮ ಆಶ್ರಮ ಅದೇ ಆಗ ಆರಂಭವಾಗಿತ್ತು. ಆಗ ನಾನು ವರ್ಧಾದ ಮಹಿಳಾ ಆಶ್ರಮದಲ್ಲಿ ಇರುತ್ತಿದ್ದೆ. ಸೇವಾಗ್ರಾಮಕ್ಕೆ ಹೋಗುವ ರಸ್ತೆ ತಯಾರಾಗುತ್ತಿತ್ತು. ಇದರಿಂದ ಹಳೆಯ ಕಾಲು ದಾರಿಯೂ ಉಳಿದಿರಲಿಲ್ಲ. ಮಳೆಗಾಲದಲ್ಲಿ ಇನ್ನೂ ತಯಾರುಗುತ್ತಲಿರುವ ರಸ್ತೆಯ ಮೇಲೆ ಕಾಲಿಟ್ಟರೆ ವರ್ಧಾದ ಜಿಗುಟು ಮಣ್ಣಿನಲ್ಲಿ ಮೊಣಕಾಲಿನವರೆಗೂ ಹುದುಗಿ ಹೋಗುತ್ತಲಿತ್ತು. ಕಾಲಿಗೆ ಭಾರವಾದ ಮಣ್ಣಿನ ಚಪ್ಪಲಿಯೇ ಅಂಟಿಕೊಳ್ಳುತ್ತಿತ್ತು. ಒಂದು ದಿನ ನನಗೊಂದು ಜರೂರೀ ತಾರು ಬಂತು. ಅದರ ಉತ್ತರ ಕೊಡಲಿಕ್ಕೆ ಕೂಡಲೇ ಗಾಂಧಿ ಅವರನ್ನು ಭೇಟಿಯಾಗುವುದು ಅವಶ್ಯವಿತ್ತು. ಭಾರಿ ಮಳೆ ಸುರಿಯುತ್ತಲಿತ್ತು. ಬೇರೆ ಉಪಾಯವೇ ಇರಲಿಲ್ಲ. ಮೊಣಕಾಲವರೆಗೆ ಕೆಸರು ತುಳಿಯುತ್ತ ಸೇವಾಗ್ರಾಮ ಮುಟ್ಟಲಿಕ್ಕೆ ನನಗೆ 2–3 ಗಂಟೆ ಹಿಡಿಯಿತು. ಕಾಲು ತೊಳೆದುಕೊಂಡು ಗಾಂಧಿ ಅವರ ಕುಟೀರಕ್ಕೆ ಹೋದೆ. ಆದರೆ ಅಲ್ಲಿ ಪಡಸಾಲೆಯಲ್ಲಿ ಕಸ್ತೂರಬಾ ಅವರು ಕಾವಲು ಮಾಡುತ್ತಿದ್ದುದು ನೋಡಿದೆ. ಅವರು ಒಮ್ಮೆಲೆ ರೇಗಿ ನನ್ನ ಮೈಮೇಲೆ ಬಂದರು. "ಇಂದು ಇಷ್ಟೊಂದು ಮಳೆಯಲ್ಲಿ ಯಾಕೆ ಬಂದಿ! ಅಂಥ ಅವಶ್ಯಕತೆ ಏನಿತ್ತು? ಗಾಂಧಿ ಅವರ ರಕ್ತದ ಒತ್ತಡ ಹೆಚ್ಚಾಗಿದೆ. ಇಂದು ಅವರು ಯಾರಿಗೂ ಅವರನ್ನು ಭೇಟಿಯಾಗಲು ಬಿಡುತ್ತ ಇಲ್ಲ." ಎಂದು ಹೇಳಿದರು. ಪರಿಸ್ಥಿತಿಯು ಗಂಭೀರವಾಗಿರುವುದು ತಿಳಿಯಿತು. ಕಸ್ತೂರಬಾರ ಮುಖಸ್ತುತಿ ಮಾಡಿ ಸುಮ್ಮನಿರಿಸಿದೆ. ಗಾಂಧಿ ಅವರ ಆರೋಗ್ಯದ ವಿಷಯ ಕೇಳಿದೆ. ಮತ್ತು ಕೊನೆಯಲ್ಲಿ ಹೇಳಿದೆ. "ನನಗೆ ಒಂದಿಷ್ಟೇ ಜರೂರೀ ಕೆಲಸ ಇದೆ" ಎಂದೆ.

ಮುಂದುವರಿಯುವುದು....

ಸ್ಮಾಗ್ ಟವರ್ (ಹೊಂಜು ಗೋಪುರ)



ಒಂದು ಕಿ.ಮೀ ವ್ಯಾಪ್ತಿಯಲ್ಲಿ ಪ್ರತಿ ಸೆಕೆಂಡಿಗೆ 1 ಸಾವಿರ ಘನ ಮೀಟರ್‌ನಷ್ಟು ಈ ಗೋಪುರವು ಗಾಳಿಯನ್ನು ಶುದ್ಧೀಕರಿಸಲಿದೆ. ಈ ಶುದ್ಧೀಕರಣ ಯಂತ್ರವನ್ನು ಪ್ರಾಯೋಗಿಕ ಯೋಜನೆ ರೂಪದಲ್ಲಿ ದೆಹಲಿಯಲ್ಲಿ ಸ್ಥಾಪಿಸಲಾಗಿದೆ. ದೆಹಲಿ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಾಲಿನ್ಯದಿಂದಾಗಿ ತುರ್ತು ಪರಿಸ್ಥಿತಿ ಇದೆ. ಜನರು ಮನೆಯಿಂದ ಹೊರಬರಲು ಕಷ್ಟಪಡುತ್ತಿದ್ದಾರೆ. ಎಲ್ಲರಿಗೂ ಉಸಿರಾಟದ ತೊಂದರೆ ಕಾಣಿಸಿಕೊಳ್ಳುತ್ತಿದೆ. ಸ್ಮಾಗ್ ಟವರ್ ಎಂಬುದು ಗಾಳಿ ಶುದ್ಧೀಕರಣ ಘಟಕವಾಗಿದೆ. ಇದು ಕಲುಷಿತ ಗಾಳಿ ಅಥವಾ ಅದರ ಕಣಗಳನ್ನು ಸುತ್ತಮುತ್ತಲಿನಿಂದ ಹೀರಿಕೊಳ್ಳುತ್ತದೆ. ನಂತರ ಪರಿಸರಕ್ಕೆ ಶುದ್ಧ ಗಾಳಿಯನ್ನು ಬಿಡುಗಡೆ ಮಾಡುತ್ತದೆ. ಗಾಳಿಯನ್ನು ಹೀರುವಂತೆ ಮಾಡಲು ತಳದಲ್ಲಿ ಅನೇಕ ಪದರಗಳ ಏರ್ ಫಿಲ್ಟರ್‌ಗಳು ಹಾಗೂ ಫ್ಯಾನ್‌ಗಳನ್ನು ಈ ಟವರ್‌ನಲ್ಲಿ ಅಳವಡಿಸಲಾಗಿದೆ. ಕಲುಷಿತ ಗಾಳಿಯು ಘಟಕದೊಳಗೆ ಪ್ರವೇಶಿಸಿ ನಂತರ ಅದನ್ನು ವಾತಾವರಣಕ್ಕೆ ಪುನಃ ಪ್ರಸಾರ ಮಾಡುವ ಮೊದಲು ಅದನ್ನು ಬಹು ಪದರಗಳಿಂದ ಶುದ್ಧೀಕರಿಸಲಾಗುತ್ತದೆ. ಈ ಗೋಪುರ ನಗರ ಪ್ರದೇಶಗಳಲ್ಲಿನ ವಾಯು ಮಾಲಿನ್ಯದ ಕಡಿತವನ್ನು 'ಏರ್ ಕ್ಲೀನಿಂಗ್' ಮೂಲಕ ಮೌಲ್ಯಮಾಪನ ಮಾಡಲು ಐಐಟಿ ದೆಹಲಿ ಮತ್ತು ಐಐಟಿ ಬಾಂಬೆ ನಡೆಸುತ್ತಿದೆ. ಟವರ್‌ನ ಕೆಳಭಾಗದಲ್ಲಿ ಒಟ್ಟು 40 ಫ್ಯಾನ್ ಗಳನ್ನು ಅಳವಡಿಸಲಾಗಿದೆ. ಗೋಪುರದ ಮೇಲ್ಭಾಗದಿಂದ ಗಾಳಿಯನ್ನು ಹೀರಿಕೊಳ್ಳಲಾಗುತ್ತದೆ, ಫಿಲ್ಟರ್ ಮಾಡಿ ಮತ್ತು ಕೆಳಭಾಗದಲ್ಲಿರುವ ಫ್ಯಾನ್ ಮೂಲಕ ಬಿಡುಗಡೆ ಮಾಡಲಾಗುತ್ತದೆ.

ಸೌಜನ್ಯ : ಒನ್ ಇಂಡಿಯಾ – ಸಂಗ್ರಹ : ಅಖಿಲಾ ವಿದ್ಯಾಸಂದ್ರ

ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್

– ಇಂದಿರಾ ಕೃಷ್ಣಪ್ಪ

ಮಹಿಳಾ ಸಮಾನತೆಯ ರೂವಾರಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಅಂಬೇಡ್ಕರ್ ಅವರು ಮುಂಬೈ ಪ್ರಾಂತೀಯ ಶಾಸನಸಭೆಯ ಸದಸ್ಯರಾಗಿದ್ದಾಗ, ಶಿಕ್ಷಣ, ಕೈಗಾರಿಕೆ, ಸ್ಥಳೀಯ ಸಂಸ್ಥೆಗಳ ನಿರ್ವಹಣೆ, ಕಾರ್ಮಿಕರು, ಕುಟುಂಬ ಯೋಜನೆ, ಮುಂತಾದ ವಿಷಯಗಳಲ್ಲಿ ಕಾರ್ಲ್‌ಮಾರ್ಕ್ಸ್‌ಗಿಂತಲೂ ಭಿನ್ನ ನಿಲುವಿನಿಂದ ಸಮಸ್ಯೆಗಳನ್ನು ಮುಂದಿಟ್ಟು ಚರ್ಚಿಸಿದರು. "ದುಡಿಯುವ ವರ್ಗದ ಮೇಲೆ ಆರ್ಥಿಕ ಶೋಷಣೆಯೊಂದಿಗೆ, ಸಾಮಾಜಿಕ ಶೋಷಣೆಯೂ ನಿರಂತರವಾಗಿ ನಡೆಯುತ್ತಿರುತ್ತದೆ. ಶ್ರಮಜೀವಿ ಮಹಿಳೆಯರು, ಮನೆ ಮತ್ತು ಹೊರಗಿನ ಕೆಲಸದಿಂದ ಕುಬ್ಜರಾಗಿದ್ದಾರೆ. ಗರ್ಭಿಣಿ ಮತ್ತು ಬಾಣಂತಿಯರಿಗೆ ಹೆರಿಗೆ ಸೌಲಭ್ಯ ನೀಡುವುದರಿಂದ, ಜೀವನಾಗತ್ಯಗಳನ್ನು ದೊರಕಿಸಿದಂತಾಗುತ್ತದೆ" ಎಂದು ಕಾರ್ಮಿಕ ಮಹಿಳೆಯರಿಗೆ ಉತ್ತಮ ಸೌಲಭ್ಯ ಸಹಕಾರ ದೊರಕುವಂತೆ ಮಾಡಿದರು. ಕುಟುಂಬ ಯೋಜನೆಯನ್ನು ಒತ್ತಾಯಿಸುತ್ತಾ "ಮಕ್ಕಳನ್ನು ಹೆರುವುದು ಮತ್ತು ಪಾಲನೆಯಲ್ಲೇ ಹೆಣ್ಣುಮಕ್ಕಳ ಜೀವನ ಸವೆದು ಹೋಗುವುದು, ಅವರ ಶಕ್ತಿ ಸಾಮರ್ಥ್ಯ ಸಮಾಜಕ್ಕೆ ಬೇಕು" ಆಸ್ಪತ್ರೆಗಳಲ್ಲಿ ಮಹಿಳಾ ವಾರ್ಡ್‌ಗಳಿಗೆ ಸ್ವತಃ ಭೇಟಿ ನೀಡಿದರು. 800 ಅಡಿ ಆಳದ ಗಣಿಗಳಲ್ಲಿ ಇಳಿದು, ಕಾರ್ಮಿಕರ ಸೌಕರ್ಯ, ವ್ಯವಸ್ಥೆಗಳನ್ನು ಸುಧಾರಣೆ ತಂದರು. ಗಣಿ ಕಾರ್ಮಿಕರ ಕಲ್ಯಾಣ ನಿಧಿಗೆ, ಮಹಿಳಾ ಪ್ರತಿನಿಧಿ ಸುಧಾರಣೆಗೆ ಹಲವಾರು ಕ್ರಮಗಳನ್ನು ಕೈಗೊಂಡರು. 1941ರಲ್ಲಿ "ಮಹಿಳೆಯರ ಆಸ್ತಿಹಕ್ಕು" ಕುರಿತು ಮನವಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರು. 1941ರಿಂದ 1946ರವರೆಗೆ ಭಾರತದ ಗೌರ್‍ನರ್ ಜನರಲ್ ಅವರ ಕಾರ್ಯಕಾರಿ ಸಮಿತಿಯಲ್ಲಿ, ಕಾರ್ಮಿಕ ಸದಸ್ಯರಾಗಿ ಅಂಬೇಡ್ಕರ್ ಅವರು ಕಾರ್ಯ ನಿರ್ವಹಿಸಿದ್ದರು. ಆ ಸಂದರ್ಭದಲ್ಲಿ ಸಂದಿಗ್ಧ ಪರಿಸ್ಥಿತಿಯನ್ನೆದುರಿಸುವ ಪರಿಸ್ಥಿತಿ ಇವರ ಮುಂದಿತ್ತು. ಆಗ 2ನೇ ಮಹಾಯುದ್ಧ. ಬ್ರಿಟಿಷರು ಆ ಯುದ್ಧದಲ್ಲಿ ಪಾಲ್ಗೊಂಡಿದ್ದರು. ತುರ್ತಾಗಿ ಯುದ್ಧದಲ್ಲಿ ಬಳಸುವ ಸ್ಫೋಟಕಗಳಿಗಾಗಿ, ಗಣಿಗಳಿಂದ ಖನಿಜಗಳು ಅಗತ್ಯವಿರುತ್ತದೆ. ಗಣಿಗಳಲ್ಲಿ ಮಹಿಳಾ ಕಾರ್ಮಿಕರನ್ನು ನಿಷೇಧಿಸಿದ್ದ ಕಾನೂನು ಆಗ ಜಾರಿಯಲ್ಲಿತ್ತು. ಬ್ರಿಟಿಷ್ ಸರ್ಕಾರ ಈ ಕಾಯ್ದೆಯನ್ನು ರದ್ದುಗೊಳಿಸಿ, ಹೆಚ್ಚೆಚ್ಚು ಮಹಿಳೆಯರೂ ಗಣಿಯಲ್ಲಿ ದುಡಿದು, ಉತ್ಪಾದನೆ ಹೊರತರಲು ಕ್ರಮಕೈಗೊಳ್ಳಬೇಕೆಂದು ಸೂಚನೆ, ಅಂಬೇಡ್ಕರ್ ಅವರನ್ನು ತಲ್ಲಣಗೊಳಿಸಿತ್ತು. ಒಂದೆಡೆ ಪ್ರಭುತ್ವ, ಇನ್ನೊಂದೆಡೆ ಕಾರ್ಮಿಕ ಮಹಿಳೆಯರನ್ನು ಅಪಾಯದ ಗಣಿ ಕೈಗಾರಿಕೆಗೆ ಒಡ್ಡುವ ಸ್ಥಿತಿ, ಮತ್ತೊಂದೆಡೆ ಕಾಯ್ದೆಯನ್ನು ರದ್ಧತಿಯ ಪ್ರತಿರೋಧಗಳು. ಇವುಗಳನ್ನು ಗಮನದಲ್ಲಿಟ್ಟುಕೊಂಡು, 1941ರ ಗಣಿ ಕೈಗಾರಿಕೆ ತಿದ್ದುಪಡಿ ಮಸೂದೆಯನ್ನು ಜಾರಿಗೆ ತಂದರು. ಈ ಕಾಯ್ದೆಯಿಂದ

- ಗಣಿಯಲ್ಲಿ ಮಹಿಳೆಯರು ಕೆಲಸ ಮಾಡುವ ಅವಕಾಶ
- ಸಮಾನ ಕೆಲಸಕ್ಕೆ ಸಮಾನ ವೇತನ
- ಹೆರಿಗೆ ಸೌಲಭ್ಯ, ಹೆರಿಗೆ ಕಾಲದ ವೇತನ
- ಮಕ್ಕಳಿಗೆ ಶಿಶುವಿಹಾರ, ಹಾಲಿನ ಸೌಲಭ್ಯ
- ಗಣಿಯಲ್ಲಿ ಕೆಲಸವಿಲ್ಲದಾಗ, ಮಹಿಳೆಯರಿಗೆ ಪರ್ಯಾಯ ಉದ್ಯೋಗಗಳು



ಇತ್ಯಾ ಸೌಲಭ್ಯ–ಸೌಕರ್ಯಗಳೊಂದಿಗೆ ಮಹಿಳೆಯರು ಗಣಿ ಕೆಲಸದಲ್ಲಿ ದುಡಿಯಲು ಅವಕಾಶ ಮಾಡಿಕೊಟ್ಟರು.

ಭಾರತದ ಸ್ವಾತಂತ್ರ್ಯ ಪಡೆದಾಗ, ಭಾರತದ ಪ್ರಥಮ ಕಾನೂನು ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಅಂಬೇಡ್ಕರ್ ಅವರು ಮಹಿಳಾ ಸಮುದಾಯ ಅಮೂಲಾಗ್ರ ಪರಿವರ್ತನೆ ಎಡೆಗೆ ಪರಿಕ್ರಮಿಸುವಂತೆ ಮಾಡಿದರು. ಮಹಿಳೆಯರ ಹಕ್ಕು, ಅಧಿಕಾರ, ಅವಕಾಶ, ಸಾಮಾಜಿಕ ನ್ಯಾಯ, ಪ್ರಾತಿನಿಧ್ಯಗಳನ್ನು ಹಿಂದೂ ಕೋಡಬಿಲ್ ಮುಖಾಂತರ ಸದನದಲ್ಲಿ ಮಂಡಿಸಿದ್ದರು. 1947ರಿಂದ ಸದನದಲ್ಲಿ ಮಂಡಿತವಾಗಿ, ಚರ್ಚೆಗೊಳಪಟ್ಟು

- ಬಹುಪತ್ನಿತ್ವ ನಿಷೇಧ – ಏಕಪತ್ನಿತ್ವದ ಕಾನೂನು ಬದ್ಧತೆ
- ಮಹಿಳೆಯರಿಗೆ (ಅವಿವಾಹಿತ ಹೆಣ್ಣು ಮಗಳು, ವಿಧವೆ, ವಿವಾಹಿತೆ) ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು
- ತಾಯಿ–ಮಗುವಿನ ಸಹಜ ಪೋಷಕಳು – ದತ್ತು ಸ್ವೀಕಾರದ ಹಕ್ಕು
- ವಿಚ್ಛೇಧನದ ಹಕ್ಕು – ನಿರ್ವಹಣಾ ವೆಚ್ಚ ಪಡೆಯುವ ಹಕ್ಕು ಮಸೂದೆಗಳು ಸದನದಲ್ಲಿ ತೀವ್ರ ಚರ್ಚೆಗೊಳಪಟ್ಟವು.

ಈ ಕಾನೂನುಗಳು ಒಂದೆಡೆ ಮಹಿಳೆಯರ ವೈವಾಹಿಕ ಸ್ವಾತಂತ್ರ್ಯ ಹಂಗಿಲ್ಲದ ಜೀವನ ನಿರ್ವಹಣೆ, ವಾರಸುದಾರಿಕೆಯ ಪಾರಮ್ಯಗಳಾದರೆ, ಇನ್ನೊಂದೆಡೆ ಪುರುಷರ ವೈವಾಹಿಕ ಸ್ವಚೇತನದ ನಿರ್ಬಂಧತೆ, ಆಸ್ತಿ ಮತ್ತು ಸಂತಾನದ ಏಕಸ್ವಾಮ್ಯತೆಯ ನಿಯಂತ್ರಣ, ಪಿತೃಪ್ರಧಾನತೆಯ ನಿಷೇಧಗಳನ್ನು ತರುವಂಥಹದ್ದಾಗಿತ್ತು. ಸಂಪ್ರದಾಯಸ್ಥರು, ಪ್ರತಿಗಾಮಿಗಳ ತೀವ್ರ ವಿರೋಧದದ ನಡುವೆ, ಮಹಿಳಾ ಮಸೂದೆ ಅಂಗೀಕಾರವಾಗದಿದ್ದರಿಂದ, ತೀವ್ರ ಹತಾಶೆಗೊಳಗಾಗಿ, ಅಂಬೇಡ್ಕರ್ ಅವರು "ಸಮಾಜದಲ್ಲಿ ಕ್ರಾಂತಿಯನ್ನು ತರಬಹುದಾಗಿದ್ದ ಬಿಲ್ಲನ್ನು ಸಂಸತ್ತಿನಲ್ಲಿ ಕೊಲ್ಲಲಾಗಿದೆ. ನಾನು ಮಂತ್ರಿ ಮಂಡಲದಲ್ಲಿ ಉಳಿಯುವುದರಲ್ಲಿ ಅರ್ಥವಿಲ್ಲ. ನನ್ನ ರಾಜೀನಾಮೆಯನ್ನು ಅಂಗೀಕರಿಸಿರಿ" ಎಂದು ರಾಜೀನಾಮೆ ಪತ್ರ ಸಲ್ಲಿಸಿದ್ದರು. ಜಗತ್ತಿನ ಇತಿಹಾಸದಲ್ಲಿ ಮಹಿಳಾ ಸಮಾನತೆ ತರಲಾಗದ ಕಾನೂನು ಮಂತ್ರಿ ಪದವಿ ಯಕಃಶ್ಚಿತ ಎಂದು ಪರಿಗಣಿಸಿ ರಾಜೀನಾಮೆ ಸಲ್ಲಿಸಿದ ಮತ್ತೊಬ್ಬ ಮಹನೀಯನಿಲ್ಲ.

ಮುಂದುವರಿಯುವುದು...

ರಾಜಿಯಾಗದ ವ್ಯಕ್ತಿತ್ವ : ಭಾವಪೂರ್ಣ ನಮನ

ಪ್ರೊ. ಜಿ.ಕೆ. ಗೋವಿಂದರಾವ್ (27.04.1937-15.10.2021)

– ಕೆ. ಮರುಳಸಿದ್ದಪ್ಪ

ಸಾಗರದ ಲಾಲ್‌ಬಹಾದ್ದೂರ್ ಶಾಸ್ತ್ರಿ ಕಾಲೇಜಿನಲ್ಲಿ ಇಂಗ್ಲಿಷ್ ಸಾಹಿತ್ಯದ ಅಧ್ಯಾಪಕರಾಗಿದ್ದ ಜಿ.ಕೆ.ಜಿ. ಬೆಂಗಳೂರಿಗೆ ಬಂದಾಗಲೆಲ್ಲಾ ಲಂಕೇಶರನ್ನು ಮತ್ತವರ ಗೆಳೆಯರನ್ನು ಭೇಟಿಯಾಗುತ್ತಿದ್ದರು. ಸುಮತೀಂದ್ರ ನಾಡಿಗ್, ನಿಸಾರ್ ಅಹಮದ್, ಲಂಕೇಶ್ ಮುಂತಾದವರು ಈ ಕೂಟದಲ್ಲಿರುತ್ತಿದ್ದರು. ಆಗ ನವ್ಯಕಾವ್ಯ ಉತ್ತುಂಗ ಸ್ಥಿತಿಯಲ್ಲಿತ್ತು. ನವ್ಯಪರಂಪರೆಯ ಕೇಂದ್ರ ವ್ಯಕ್ತಿ ಕವಿ ಗೋಪಾಲಕೃಷ್ಣ ಅಡಿಗರ ಸುತ್ತ ಆರಾಧನಾ ಮಂಡಲಿಯೇ ಇತ್ತು. ಅಡಿಗರು ಸಾಗರದ ಲಾಲ್‌ಬಹಾದ್ದೂರ್ ಶಾಸ್ತ್ರಿ ಕಾಲೇಜಿನ ಪ್ರಿನ್ಸಿಪಾಲರೂ ಇಂಗ್ಲಿಷ್ ವಿಭಾಗದ ಮುಖ್ಯಸ್ಥರೂ ಆಗಿದ್ದರು. 'ರಾಕ್ಷಸರು' ಎಂಬ ತಮ್ಮ ಪ್ರಬಂಧದಲ್ಲಿ ಬದುಕಿನಲ್ಲಿ ಅವರಿಗೆ ಎದುರಾದ ಮೂರು ಜನ ರಾಕ್ಷಸರ ಬಗೆಗೆ ಪ್ರಸ್ತಾಪಿಸುತ್ತ, ಅಡಿಗರು ಪುರಾಣ ಪ್ರಸಿದ್ಧ ಕಲ್ಪನೆಯನ್ನು ಯಕ್ಷಗಾನ ರಾಕ್ಷಸ ಪಾತ್ರಗಳ ವರ್ಣನೆಯೊಂದಿಗೆ ರಂಜಕವಾಗಿ ವಿವರಿಸಿದ್ದಾರೆ. ಅಡಿಗರು ತಮ್ಮ ಪ್ರಬಂಧದಲ್ಲಿ ಹೆಸರು ಹೇಳದಿದ್ದರೂ ಅವರಿಗೆ ಬದುಕಿನಲ್ಲಿ ಎದುರಾದ ಮೂರು ಮಂದಿ ಯಾರು? ಎಂಬುದು ಅವರ ಆಪ್ತವಲಯದಲ್ಲಿದ್ದವರಿಗೆ ಗೊತ್ತಿತ್ತು. ಅಡಿಗರ ಅಭಿಮಾನಿಯಾಗಿದ್ದ ನನಗೆ ಜಿ.ಕೆ.ಜಿ. ಮಾತುಗಳು ಸಂತೋಷ ತರಲಿಲ್ಲವಾದರೂ ಈ ವ್ಯಕ್ತಿಯ ನಿರ್ದಾಕ್ಷಿಣ್ಯ ಖಡಕ್ ಮಾತುಗಳಿಂದ ಗಲಿಬಿಲಿಗೊಂಡಿದ್ದೆ. ಈ ಮೊದಲ ಭೇಟಿಯ ಬಳಿಕ ಅವರ ಜೊತೆ ನನ್ನ ಸ್ನೇಹ ಸಂಬಂಧ ಕ್ರಮೇಣ ಬೆಳೆಯಿತು. ವಿಗ್ರಹಭಂಜಕ ಪ್ರವೃತ್ತಿ ಜಿ.ಕೆ.ಜಿ.ಯವರ ಸ್ವಭಾವದಲ್ಲಿಯೇ ಸೇರಿಹೋಗಿತ್ತು. ಶಾಲಾ ವಿದ್ಯಾರ್ಥಿ ಯಾಗಿದ್ದಾಗಲೇ ಅವರ ಸಹಪಾಠಿಗಳೊಡನೆ ಸೇರಿ ಅಧ್ಯಾಪಕರಿಗೆ ಮುಜುಗರವುಂಟುಮಾಡುತ್ತಿದ್ದ ವಿಚಾರವನ್ನು ಕವಿ ಬಿ. ಸಿ. ರಾಮಚಂದ್ರಶರ್ಮ ನೆನಪು ಮಾಡಿಕೊಳ್ಳುತ್ತಿದ್ದರು. ಶರ್ಮರು ಬೆಂಗಳೂರು ಹೈಸ್ಕೂಲಿನಲ್ಲಿ ಅವರಿಗೆ ಪಾಠ ಹೇಳಿದ ಅಧ್ಯಾಪಕರು. ಜಿ.ಕೆ.ಜಿ.ಯವರು ಬಳಿಕ ಬಸವನಗುಡಿ ನ್ಯಾಷನಲ್ ಕಾಲೇಜಿಗೆ ಸೇರಿದರು. ಅಲ್ಲಿಯೂ ವಿದ್ಯಾರ್ಥಿ ನಾಯಕನಾಗಿದ್ದ ಜಿ.ಕೆ.ಜಿ. ಅಧ್ಯಾಪಕರು, ಪ್ರಿನ್ಸಿಪಾಲರಿಗೆ ಸವಾಲಾಗಿದ್ದವರು. ಅವರ ಸಹಪಾಠಿಯಾಗಿದ್ದ ನಮ್ಮ ನೆರೆಹೊರೆಯ ಶಿವಸ್ವಾಮಿ ಎಂಬ ಇಂಜಿನಿಯರ್ ಜಿ.ಕೆ.ಜಿ.ಯವರ ಕಾಲೇಜು ದಿನಗಳ ಸಂಘರ್ಷಗಳನ್ನು ನನಗೆ ಹೇಳುತ್ತಿದ್ದರು. ನ್ಯಾಷನಲ್ ಕಾಲೇಜ್ ಸಮೀಪದಲ್ಲಿಯೇ ರಾಮಕೃಷ್ಣ ಆಶ್ರಮ ಸರ್ಕಲ್‌ನಲ್ಲಿಯೇ ಜಿ.ಕೆ.ಜಿ.ಯವರ ತಾತನ ಮನೆ ಇತ್ತು. ಅವರ ತಾಯಿಯ ತಂದೆಯಾಗಿದ್ದ ಅವರ ತಾತ, ಬೆಂಗಳೂರು ಸೆಂಟ್ರಲ್ ಕಾಲೇಜ್ ಪ್ರಿನ್ಸಿಪಾಲರಾಗಿ ನಿವೃತ್ತರಾಗಿದ್ದ ಬಹು ಪ್ರತಿಷ್ಠಿತ ವ್ಯಕ್ತಿ. ಅವರ ಅನೇಕ ಬಂಧುಬಳಗ ಬೆಂಗಳೂರಿನವರೇ ಆಗಿದ್ದು ಬಾಲ್ಯದಿಂದಲೂ ಮುಕ್ತವಾಗಿ ಅವರು ಬೆಳೆದವರಾದುದರಿಂದ ಆತ್ಮವಿಶ್ವಾಸ ಅವರ ವ್ಯಕ್ತಿತ್ವದಲ್ಲಿ ಬೆರೆತುಹೋಗಿತ್ತು. ಮುಂದೆ ಅವರೇ ಕಾಲೇಜ್ ಅಧ್ಯಾಪಕರಾದ ಮೇಲೆ ವಿದ್ಯಾರ್ಥಿಗಳ ಸ್ನೇಹ ವಿಶ್ವಾಸ ಗಳಿಸಲು ಈ ಆತ್ಮವಿಶ್ವಾಸ ಅವರಿಗೆ ನೆರವಾಗಿರಬಹುದು. ವಿಜ್ಞಾನದಲ್ಲಿ ಪದವಿ ಪಡೆದಿದ್ದ ಅವರು ಕೆಲವು ಕಾಲ, ಉಡುಪಿಯ ಕಾಲೇಜೊಂದರಲ್ಲಿ ಟ್ಯೂಟರ್ ಆಗಿದ್ದು, ಬಾಹ್ಯ ವಿದ್ಯಾರ್ಥಿಯಾಗಿ ಇಂಗ್ಲಿಷ್ ಎಂ.ಎ. ಓದಿದರು. ಸಾಗರದಲ್ಲಿ ಲಾಲ್ ಬಹಾದ್ದೂರ್ ಶಾಸ್ತ್ರಿ ಕಾಲೇಜ್ ಆರಂಭವಾದಾಗ, ಇಂಗ್ಲಿಷ್ ಅಧ್ಯಾಪಕರಾಗಿ ಸೇರಿದರು. ಬಳಿಕ ಬೆಂಗಳೂರಿನ ಸೇಂಟ್ ಜೋಸೆಫ್ ಕಾಮರ್ಸ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ಮೂರು ದಶಕಗಳಾದ ಮೇಲೆ ನಿವೃತ್ತರಾದರು.



ಜ್ಞಾನಭಾರತಿಯ ಕನ್ನಡ ಅಧ್ಯಯನ ಕೇಂದ್ರದಲ್ಲಿ ನಿವೃತ್ತಿಯ ಬಳಿಕ ತೌಲನಿಕ ವಿದ್ಯಾರ್ಥಿಗಳಿಗೆ ಪಾಠ ಹೇಳಿದರು. ಸುಮಾರು ನಾಲ್ಕು ದಶಕಗಳ ಕಾಲ ಅಧ್ಯಾಪಕರಾಗಿದ್ದ ಅವರು ಶ್ರೇಷ್ಠ ಅಧ್ಯಾಪಕರೆಂದು ಖ್ಯಾತರಾಗಿದ್ದರು. ನಾಟಕಗಳನ್ನು ವಿಶೇಷವಾಗಿ ಷೇಕ್ಸ್‌ಪಿಯರ್ ಬಗೆಗೆ ಅಸಾಧಾರಣ ಪಾಂಡಿತ್ಯ ಪಡೆದಿದ್ದ ಜಿ.ಕೆ.ಜಿ., ಸಾರ್ವಜನಿಕ ಸಭೆಗಳಲ್ಲಿಯೂ ಉಪನ್ಯಾಸ ನೀಡುತ್ತಿದ್ದರು. ಷೇಕ್ಸ್‌ಪಿಯರ್ ನಾಟಕಗಳ ಕುರಿತು ಬರೆದಿರುವ ಅವರ ಬರೆಹಗಳು ಅವರ ಪರಿಣತ ವಿಮರ್ಶಾ ದೃಷ್ಟಿಗೆ ಸಾಕ್ಷಿಯಾಗಿವೆ. ಸಾವಿರಾರು ಜನ ವಿದ್ಯಾರ್ಥಿಗಳ ಆದರಾಭಿಮಾನಗಳಿಗೆ ಪಾತ್ರರಾಗಿದ್ದ ಜಿ.ಕೆ.ಜಿ. ಅವರು ನಿವೃತ್ತಿಯ ಬಳಿಕವೂ ಹಲವಾರು ವಿದ್ಯಾರ್ಥಿಗಳೊಂದಿಗೆ ಸ್ನೇಹವಿರಿಸಿಕೊಂಡಿದ್ದರು. ಕಾಲೇಜಿನ ಪಾಠಪ್ರವಚನದ ಜೊತೆಗೆ ಇತರ ಶೈಕ್ಷಣಿಕ ಚಟುವಟಿಕೆಗಳು ಮೂಲಕ ಬೆಂಗಳೂರು ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ನಿರಂತರ ಸೇವೆ ಸಲ್ಲಿಸಿದರು. ವಿಶ್ವವಿದ್ಯಾಲಯ ಹಾಗೂ ಕಾಲೇಜು ಅಧ್ಯಾಪಕರ ಸಂಘದ ಕಾರ್ಯದರ್ಶಿಯಾಗಿ ಅಧ್ಯಕ್ಷರಾಗಿ ಹಲವು ವರ್ಷಗಳ ಕಾಲ ದುಡಿದರು. ಬೆಂಗಳೂರು ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾಗಿದ್ದರು. ಯಾವುದೇ ವೇದಿಕೆಯಲ್ಲಿದ್ದರೂ ಕ್ರಿಯಾಶೀಲವಾಗಿ ಆಡಳಿತದ ವಿಮರ್ಶೆಯಲ್ಲಿ ತೊಡಗಿಕೊಳ್ಳುತ್ತಿದ್ದ ಅವರು ಕಾಲೇಜು ಶಿಕ್ಷಣ ವಲಯದಲ್ಲಿ ಬಹು ಜನಪ್ರಿಯ ನಾಯಕನೆನಿಸಿಕೊಂಡಿದ್ದರು. ಈ ಎಲ್ಲ ಚಟುವಟಿಕೆ ಗಳಿಂದ ಅವರ ಓದು, ಅಧ್ಯಾಪನಗಳಿಗೆ ಯಾವುದೇ ಅಡ್ಡಿ ಆತಂಕಗಳಿರಲಿಲ್ಲ. ಬಹು ವಿಸ್ತಾರವಾದ ವೈವಿಧ್ಯಮಯ ಆಸಕ್ತಿಯ ಓದು ಅವರದು. ತಮ್ಮ ವೇತನದ ಸಾಕಷ್ಟು ಭಾಗವನ್ನು ಪುಸ್ತಕಗಳನ್ನು ಕೊಳ್ಳಲು ವ್ಯಯಿಸುತ್ತಿದ್ದರು. ಅವರು ಓದಿ ಮುಗಿಸಿದ ಪುಸ್ತಕ ಗಳನ್ನು ಸ್ನೇಹಿತರಿಗೂ ಕೊಟ್ಟು ಓದಿಸುತ್ತಿದ್ದರು. ನನ್ನಂತಹ ಹಲವಾರು ಗೆಳೆಯರು ಈ ಮಟ್ಟಿಗೆ ಅವರಿಗೆ ಋಣಿಯಾಗಿದ್ದೇವೆ. ಅವರ ಖಾಸಗಿ ಪುಸ್ತಕ ಭಂಡಾರದಲ್ಲಿ ಸಾವಿರಾರು ಪುಸ್ತಕಗಳಿವೆ. ತಾವು ಓದಿದ ಪುಸ್ತಕದ ಬಗೆಗೆ ಸ್ನೇಹಿತರೊಂದಿಗೆ ಚರ್ಚಿಸುವುದು ಅವರಿಗೆ ಬಹು ಪ್ರಿಯವಾದ ಕೆಲಸವಾಗಿತ್ತು. ವ್ಯರ್ಥ ಹರಟೆ ಅಥವಾ ಖಾಸಗಿ ವಿಚಾರ ಅವರಿಗೆ ಇಷ್ಟವಾಗುತ್ತಿರಲಿಲ್ಲ. ಸಾಹಿತ್ಯ, ರಾಜಕೀಯ, ರಂಗಭೂಮಿ ಹೀಗೆ ವ್ಯಕ್ತಿಯ ಸೀಮಿತ ವಲಯವನ್ನು ದಾಟಿದ ಸಾರ್ವತ್ರಿಕ ವಿಚಾರಗಳು ಮಾತ್ರ ಅವರಿಗೆ ಪ್ರಿಯವೆನ್ನಿಸುತ್ತಿದ್ದುದರಿಂದ ಇಂತಹ ಆಯ್ದ ಸ್ನೇಹಿತರೊಂದಿಗೆ ಮಾತ್ರ ಅವರು ಸಂಪರ್ಕವಿರಿಸಿಕೊಂಡಿದ್ದರು. ಉಳಿದ ಲೋಕಾರೂಢ ಸ್ನೇಹ ಸಂಬಂಧಗಳಿದ್ದರೂ ಅವರ ಆಪ್ತ ವಲಯಕ್ಕೆ ಬೇರೆಯವರಿಗೆ ಪ್ರವೇಶವಿರಲಿಲ್ಲ.

ಓದು ಬರೆಹ, ಅಧ್ಯಾಪಕ ವೃತ್ತಿ, ಸಾರ್ವಜನಿಕ ಚಟುವಟಿಕೆಯ ನಿರಂತರ ಬದುಕಿನ ಜಿ.ಕೆ.ಜಿ. ಅವರಿಗೆ ನಾಟಕವೆಂಬುದು ಕೇವಲ ಸಾಹಿತ್ಯಾಸಕ್ತಿಯಾಗಿರಲಿಲ್ಲ. ವಿದ್ಯಾರ್ಥಿ ಜೀವನದಲ್ಲಿಯೇ ನಾಟಕಗಳಲ್ಲಿ ಪಾತ್ರ ವಹಿಸುತ್ತಿದ್ದ ಅವರು ಕಾಲೇಜು ಅಧ್ಯಾಪಕರಾದ ಮೇಲೆ ಸಹಜವಾಗಿಯೇ ರಂಗಭೂಮಿಯತ್ತ ಆಕರ್ಷಿತರಾಗಿದ್ದರು. ಬೆಂಗಳೂರಿನ ಹವ್ಯಾಸಿ ರಂಗಭೂಮಿಯ ಪ್ರಸಿದ್ಧ ನಟರಲ್ಲಿ ಅವರ ಹೆಸರು ಚಿರಕಾಲ ಉಳಿಯುವಂತಹ ಪಾತ್ರಗಳು ಅವರಿಗೆ ದಕ್ಕಿದವು. ನಾಟಕಾಭಿರುಚಿ ಅವರಿಗೆ

ಸಾಹಿತ್ಯದ ನೆಲೆಯಿಂದ ಬಂದಿತ್ತು. ಕಾರ್ನಾಡರ 'ತುಘಲಕ' ನಾಟಕದಲ್ಲಿ ಪ್ರಧಾನ ಭೂಮಿಕೆಯಲ್ಲಿ ಅವರು ಪಾತ್ರ ವಹಿಸಿದರು. ಆಗ ಅವರು ಸಾಗರದಲ್ಲಿ ಅಧ್ಯಾಪಕ ರಾಗಿದ್ದರು. ಈ ನಾಟಕದಲ್ಲಿ ತುಘಲಕ್ ಪಾತ್ರಧಾರಿಯಾಗಿದ್ದ ಅವರ ಅಭಿನಯವನ್ನು ನಾನು ನೋಡಿಲ್ಲ. ಆದರೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ನಾಟಕ ಪ್ರದರ್ಶನಗಳಲ್ಲಿ ಅವರ ಅಭಿನಯ ಪ್ರತಿಭೆ ನನಗೆ ಪರಿಚಯವಾಗಿದೆ. "ಮ್ಯಾಕ್‌ಬೆತ್' ನಾಟಕದಲ್ಲಿ ನಾಯಕ ಪಾತ್ರದಲ್ಲಿ, 'ಸಂಸ್ಕಾರ'ದ ಪ್ರಾಣೇಶಾಚಾರ್ಯನ ಪಾತ್ರ 'ಕಿಂಗ್ ಲಿಯರ್' ನಾಟಕದ ಲಿಯರ್ ದೊರೆ ಹೀಗೆ ಹಲವಾರು ನಾಟಕಗಳಲ್ಲಿ ಅವರ ಅಭಿನಯ ನೋಡಿದ್ದೇನೆ. ಅವರೊಬ್ಬ ಹುಟ್ಟಾ ನಟ. ಅದ್ಭುತವಾದ ಕಂಠಸಿರಿ, ಎತ್ತರವಾದ ಆಕರ್ಷಕ ದೇಹ ಸಂಪತ್ತು ಅವರ ನಟನೆಗೆ ಸಹಜವಾಗಿಯೇ ಇದ್ದ ಕೊಡುಗೆಯಾಗಿತ್ತು. ನಾಟಕದಿಂದ ಸಿನೆಮಾ, ಬಳಿಕ ಟಿ.ವಿ. ಧಾರಾವಾಹಿಗಳಲ್ಲಿ ಅವರಿಗೆ ಹಲವಾರು ಅವಕಾಶಗಳು ದೊರೆತು, ಬಹು ಬೇಗ ಅವರು 'ಸ್ಟಾರ್' ಆಗಿಬಿಟ್ಟರು. ಸಂಪಾದನೆಯ ದೃಷ್ಟಿಯಿಂದ, ಕೀರ್ತಿಯ ದೃಷ್ಟಿಯಿಂದ ಸಿನೆಮಾ ಹಾಗೂ ಟಿ.ವಿ. ಮಾಧ್ಯಮಗಳಿಂದ ಅವರಿಗೆ ಲಾಭವಾಗಿರಬಹುದು; ಆದರೆ ಜಿ.ಕೆ.ಜಿ. ಅವರಿಗೆ ಅವರ ನಟನೆಯ ಹಸಿವನ್ನು ತಣಿಸಿದ ಕ್ಷೇತ್ರ ರಂಗಭೂಮಿ. 'ಕಿಂಗ್ ಲಿಯರ್' ನಾಟಕದಲ್ಲಿ ಲಿಯರ್ ಮಹರಾಜನ ಪಾತ್ರ ವಹಿಸುವಲ್ಲಿ ಅವರಿಗಿದ್ದ ಆಸೆ, ಪಾತ್ರ ದಕ್ಕಿದಾಗ ಅವರಿಗಾದ ಸಂತೋಷ ಎಂತಹುದೆಂಬುದನ್ನೂ ನಾನು ಬಲ್ಲೆ, ನಾಡಿನಲ್ಲಿ ಅವರು ಹೆಚ್ಚು ಜನಪ್ರಿಯಗೊಂಡುದು ಟಿ.ವಿ. ಧಾರಾವಾಹಿ ಮೂಲಕ. ಈ ಜನಪ್ರಿಯತೆ ಅವರನ್ನು ಸಾರ್ವಜನಿಕ ಚಳುವಳಿಗಳತ್ತ ಕೊಂಡೊಯ್ದಿತು. ಚಳುವಳಿಗಳ ಪರಂಪರೆಯಲ್ಲಿಯೇ ಬೆಳೆದು ಜಿ.ಕೆ.ಜಿ. ಐದು ದಶಕಗಳಲ್ಲಿ ಅವರು ಗುರುತಿಸಿಕೊಳ್ಳದೆ ಇದ್ದ ಚಳುವಳಿಗಳೇ ಇಲ್ಲವೆಂದರೂ ಸರಿ ಆಗುತ್ತದೆ. ಗೋಕಾಕ್ ಚಳುವಳಿ, ರಾಮಜನ್ಮಭೂಮಿ ಸಂಬಂಧ ಮಸೀದಿ ಧ್ವಂಸದ ವಿರುದ್ಧ ನಡೆದ ಚಳುವಳಿ, ಬಾಬಾಬುಡನ್‌ಗಿರಿಯಲ್ಲಿ ಹೋರಾಟ ಹೀಗೆ ಹಲವಾರು ಚಳುವಳಿಗಳ ಮುಂಚೂಣಿಯಲ್ಲಿ ಅವರು ಕಾಣಿಸಿಕೊಂಡಿದ್ದರು. ಚಳುವಳಿಯ ಸೈದ್ಧಾಂತಿಕ ನೆಲೆಯನ್ನು ಚೆನ್ನಾಗಿ ಗ್ರಹಿಸಿ ಮುಂದಡಿಯಿಡುತ್ತಿದ್ದರು. ದಲಿತ ಸಂಘರ್ಷ ಸಮಿತಿಗಳಂತೂ ಜಿ.ಕೆ.ಜಿ. ಅವರನ್ನು ವಕ್ತಾರನೆಂದೇ ಭಾವಿಸಿದ್ದವು. ಅವರು ಏರ್ಪಡಿಸುತ್ತಿದ್ದ ಅನೇಕ ಶಿಬಿರಗಳಲ್ಲಿ ಭಾಗವಹಿಸಿ ಉಪನ್ಯಾಸ ನೀಡುತ್ತಿದ್ದರು, ಕೋಮುವಾದಿಗಳ ಬಗೆಗೆ ಅವರಿಗೆ ಕಂಡದಂತಹ ಕೋಪ, ಇದು ಕೇವಲ ತಾತ್ವಿಕ ವಿರೋಧವಾಗಿರಲಿಲ್ಲ. ವ್ಯಕ್ತಿಶಃ ಬಹಿರಂಗವಾಗಿ ಮತ್ತೆ ಮತ್ತೆ ವಿರೋಧಿಸುವ ಮೂಲಕ, ತಮ್ಮನ್ನು ತಾವು ಅಪವರ್ಗೀಕರಣ ಮಾಡಿಕೊಳ್ಳಬೇಕಾದ ಅಗತ್ಯ ಅವರಿಗಿತ್ತೆ? ಇದೂ ಸಹ ಪರಿಶೀಲಿಸಬೇಕಾದ ಸಂಗತಿ, ನಮ್ಮ ಸುತ್ತ ಮುತ್ತ ಬ್ರಾಹ್ಮಣಿಕೆಯನ್ನು ಕುರಿತು ತೀವ್ರ ವಿರೋಧ ಟೀಕೆಗಳು ಕೇಳಿಬರುತ್ತಿರುವ ಸಂದರ್ಭದಲ್ಲಿ ಹುಟ್ಟಿನಿಂದ ಬ್ರಾಹ್ಮಣರಾದ ಪ್ರಗತಿಪರ ಜಾತ್ಯತೀತರನೇಕರಿಗೆ ಮುಜುಗರವೆನ್ನಿಸುವುದು ಸಹಜವಾಗಿದೆ. ಈ ಮುಜುಗರಕ್ಕೆ ಕಾರಣರಾದ ಸಂಪ್ರದಾಯವಾದಿಗಳ ಬಗೆಗೆ ಅವರಿಗೆ ಆಕ್ರೋಶ.

ವಿಸ್ತಾರವಾದ ಓದಿನ ಭಾಗವಾಗಿ ಅವರು ಬರಹದಲ್ಲಿಯೂ ತೊಡಗಿದ್ದರು. ಬಹ ಹಿಂದೆಯೇ 'ಈಶ್ವರ ಅಲ್ಲಾ' ಎಂಬ ಕಿರು ಕಾದಂಬರಿಯನ್ನು, ಕೆಲವು ಏಕಾಂಕಗಳನ್ನು ಬರೆದಿದ್ದಾರೆ. ಅವರ ಬಿಡಿ ಲೇಖನಗಳು ಒಂದೆರಡು ಸಂಕಲನಗಳಲ್ಲಿ ಪ್ರಕಟವಾಗಿವೆ. ಗಾಂಧೀಜಿ ಮತ್ತು ಅಂಬೇಡ್ಕರ್ ಬಗೆಗಿನ ಅವರ ತೌಲನಿಕ ಅಧ್ಯಯನ ಗ್ರಂಥರೂಪದಲ್ಲಿ ಪ್ರಕಟವಾಗಿದೆ.

ಬಾಬಾ ಬುಡನ್ ಗಿರಿ ಹೋರಾಟದ ಕಾಲದಲ್ಲಿ ಬೆಂಗಳೂರಿನಿಂದ ಹಾಸನ, ಚಿಕ್ಕಮಗಳೂರು ಮಾರ್ಗವಾಗಿ ಚಿಕ್ಕ ವ್ಯಾನ್‌ನಲ್ಲಿ ಗಿರೀಶ್ ಕಾರ್ನಾಡ್, ಜಿ.ಕೆ.ಜಿ., ಗೌರಿಲಂಕೇಶ್, ಮುಂತಾಗಿ ಹದಿನೈದು ಇಪ್ಪತ್ತು ಜನರ ತಂಡ ಸಂಜೆ ಆರಕ್ಕೆ ಹೊರಟೆವು. ರಾತ್ರಿ ಹತ್ತು ಗಂಟೆಯ ಹೊತ್ತಿಗೆ ನಮ್ಮನ್ನು ಚಿಕ್ಕಮಗಳೂರು ಜಿಲ್ಲೆಯ ಗಡಿಯಲ್ಲಿ ಬೇಲೂರಿನ ಸಮೀಪ ಪೊಲೀಸರು ತಡೆದರು. ಪ್ರತಿಬಂಧಕಾಜ್ಞೆ ಇರುವುದರಿಂದ ಮುಂದೆ ಬಿಡಲು ಸಾಧ್ಯವಿಲ್ಲವೆಂದರು, ನಾವೂ ಪೊಲೀಸರನ್ನು ವಿರೋಧಿಸಿ ಅಲ್ಲಿಯೇ ಧರಣಿ ನಡೆಸಿದವು, ಸುಮಾರು ಒಂದು ತಾಸು ಜಟಾಪಟಿ ನಡೆದು ನಮ್ಮನ್ನೆಲ್ಲಾ ಕಾನೂನು ಉಲ್ಲಂಘಿಸಿದ್ದಕ್ಕಾಗಿ ಅರೆಸ್ಟ್ ಮಾಡಿ ಪೊಲೀಸರು ಹಾಸನದತ್ತ ಕರೆದೊಯ್ದರು. ಪೊಲೀಸ್ ಠಾಣೆ ಅಥವಾ ಜೈಲಿಗೆ ಕರೆದೊಯ್ಯುತ್ತಿರ ಬಹುದೆಂದು ನಾವು ಭಾವಿಸಿದ್ದೆ. ಆದರೆ ವಾಹನ ಹಾಸನದ ಅಶೋಕ ಹೋಟೆಲ್ ಆವರಣ ಪ್ರವೇಶಿಸಿತು. ಹಸಿವೆ, ಚಳಿಯ ಹೊಡೆತ, ಇದೆಲ್ಲದರಿಂದ ಬಳಲಿದ್ದ ನಮಗೆ ಸತ್ಯಾಗ್ರಹಿಗಳು ಅಶೋಕ ಹೋಟೆಲ್‌ನಂತಹ ಭವ್ಯ ಹೋಟೆಲ್‌ನಲ್ಲಿ ಆತಿಥ್ಯ ಪಡೆಯುವ ಅಸಂಬದ್ಧತೆ ಹೊಳೆಯಲಿಲ್ಲ. ಊಟ, ಮಲಗಲು ಸುಸಜ್ಜಿತ ಕೊಠಡಿಗಳು – ಸಂತೋಷದಿಂದ ಇದೆಲ್ಲ ಸೌಕರ್ಯ ಅನುಭವಿಸಿದೆವು. ಬೆಳಿಗ್ಗೆ ತಿಂಡಿ ಮುಗಿಸಿ, ಬೆಂಗಳೂರಿಗೆ ಹೊರಟಾಗ ಜಿ.ಕೆ.ಜಿ. ಅವರ ನಿರ್ಧಾರ ನಮ್ಮೆಲ್ಲರಿಗೂ ಮುಜುಗರ ತಂದಿತ್ತು. ಹೋಟೆಲ್ ಕೊಠಡಿಯ ಬಾಡಿಗೆಯನ್ನು ತಾವೇ ಕೊಡಲು ಮುಂದಾದರು. ಮೊದಲು ಹೋಟೆಲ್ ವ್ಯವಸ್ಥಾಪಕರು ತಾಂತ್ರಿಕ ಕಾರಣಕ್ಕಾಗಿ ಒಪ್ಪಲಿಲ್ಲ ವಾದರೂ ಜಿ.ಕೆ.ಜಿ. ಹಠದ ಕಾರಣ, ಅವರನ್ನೊಬ್ಬ ಪ್ರವಾಸಿ ಎಂದು ಪರಿಗಣಿಸಿ ಬಾಡಿಗೆ ಪಡೆದರು. ಜಿ.ಕೆ.ಜಿ. ಒಬ್ಬ ಅಸಾಧಾರಣ ವ್ಯಕ್ತಿ, ವೈವಿಧ್ಯಮಯವಾದ ವರ್ಣರಂಜಿತ ಬದುಕನ್ನು ನಡೆಸಿದವರು. ಬದುಕಿನುದ್ದಕ್ಕೂ ಕೆಲವು ನಂಬಿಕೆಗಳಿಗೆ ಬದ್ಧರಾಗಿದ್ದ ಅವರು ಎಂದಿಗೂ ರಾಜಿ ಮಾಡಿಕೊಳ್ಳಲಿಲ್ಲ. ಸಣ್ಣಪುಟ್ಟ ಆಮಿಷಗಳಿಗೆ ಬಲಿಯಾಗಲಿಲ್ಲ. ಪ್ರತಿಷ್ಠಿತ ಕುಟುಂಬ, ಮೇಲ್ವರ್ಗದ ಸವಲತ್ತುಗಳನ್ನು ನಿರಾಕರಿಸಿ ಚಳುವಳಿಗಾರರ ಜೊತೆ ಗುರುತಿಸಿಕೊಂಡು 'ಬಾಳಿದರು. ಅವರ ಅಗಲುವಿಕೆಯಿಂದ ಕರ್ನಾಟಕದ ಪ್ರಗತಿಪರ ಚಳುವಳಿಗಳಿಗೆ ಬಹುದೊಡ್ಡ ನಷ್ಟವಾಗಿದೆಯಾದರೂ ತುಂಬು ಬಾಳನ್ನು ನಡೆಸಿ ಗೆಳೆಯರಿಗೆ ಅಭಿಮಾನಿಗಳಿಗೆ, ವಿದ್ಯಾರ್ಥಿಗಳಿಗೆ ಆದರ್ಶವಾಗಿ ಅವರು ಉಳಿದಿದ್ದಾರೆ.

ಸೌಜನ್ಯ : ಹೊಸತು ಮಾಸಪತ್ರಿಕೆ

ಗಾಂಧಿ ಶರದ್ಗೀತ

– ನಾಡೋಜ ಚನ್ನವೀರ ಕಣವಿ

ಮಣ್ಣ ಹಣತೆಯಲಿ ಬೆಳಕಿನ ಕುಡಿಗಳೂ
ಮಿಡಿದಿವೆ ಬಾನಿಗೆ ಕೈ ಮುಗಿದು
ಲಕ್ಷ ಕೋಟಿ ನಕ್ಷತ್ರದ ಗುಡಿಯಲಿ
ಗಾಂಧಿ ಚಿತ್ತವಿದೆ ಕಣ್ಣೆರೆದು
ತಿಳಿ ಬೆಳದಿಂಗಳ ಶಾಲನು ಹೊದಿಸಿದೆ
ಗಾಂಧೀ ಹುಣ್ಣಿಮೆ ಜನಪದಕೆ
ಸೀಗೆ-ಗೌರಿ, ಸೇವಂತಿಗೆ ದಂಡೆಯು
ಆರತಿ ಬೆಳಗಿವೆ ಪ್ರತಿಪದಕೆ

ಲಾಲ್ ಬಹಾದ್ದೂರ್ ಶಾಸ್ತ್ರಿಜಿ : (02.10.1904 - 11.01.1966)

ಡಾ. ಅಶೋಕ್‌ಕುಮಾರ್

ಭಾರತದ ಅತ್ಯಂತ ಪ್ರಾಮಾಣಿಕ, ದಕ್ಷ, ಸರಳ ಶಿಸ್ತಿನ ಸಜ್ಜನ ಪ್ರಧಾನಿ ಎಂದೇ ಪ್ರಖ್ಯಾತರಾದವರು ಲಾಲ್ ಬಹಾದ್ದೂರ್ ಶಾಸ್ತ್ರಿ ಅವರಾಗಿದ್ದಾರೆ. ಅವರು ಮೊಘಲ್ ಸಾರಾಯ್‌ನಲ್ಲಿ ಗಾಂಧೀಜಿ ಅವರ ಜನ್ಮದಿನದಂದೇ ಅಂದರೆ ಅಕ್ಟೋಬರ್ 2ರಂದೇ ಜನಿಸಿದವರಾಗಿದ್ದಾರೆ. ಸ್ವತಂತ್ರ ಭಾರತದ ಮೂರನೇ ಪ್ರಧಾನಿಯಾಗಿದ್ದ ಇವರು ಭಾರತದ ಸ್ವಾತಂತ್ರ್ಯಕ್ಕೆ ಹೋರಾಡಿದವರಾಗಿದ್ದಾರೆ. 1921ರಲ್ಲಿ ಮಹಾತ್ಮ ಗಾಂಧಿ ಅವರ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಲು ಇವರು ಶಿಕ್ಷಣವನ್ನು ಅರ್ಧದಲ್ಲೇ ತ್ಯಜಿಸಿದರು. ಕಾಶಿ ವಿದ್ಯಾ ಪೀಠದಿಂದ ಇವರಿಗೆ ಶಾಸ್ತ್ರಿ ಎಂಬ ಬಿರುದು 1926ರಲ್ಲಿ ಕೊಡಲ್ಪಟ್ಟಿತ್ತು. ಒಂಬತ್ತು ವರ್ಷಗಳ ಕಾಲ ಕಾರಾಗೃಹವಾಸ ಅನುಭವಿಸಿದ ಇವರು 1946 ರವರೆಗೂ ಜೈಲಿನಲ್ಲಿದ್ದರು. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ, ಹೋರಾಟಗಾರರಿಗೆ ದಿ ಸರ್ವೆಂಟ್ ಆಫ್ ಇಂಡಿಯಾ ಸೊಸೈಟಿಯಿಂದ ಹಣಸಹಾಯ ಮಾಡುವ ರೂಢಿಯಂತೆ, ಶಾಸ್ತ್ರಿ ಅವರ ಕುಟುಂಬ ನಿರ್ವಹಣೆಗೆ 50 ರೂಪಾಯಿಗಳನ್ನು ನೀಡಲಾಗುತ್ತಿತ್ತು. ಶಾಸ್ತ್ರಿ ಅವರು ಅವರ ಪತ್ನಿಗೆ, ಒಮ್ಮೆ ಈ ಹಣದ ಬಗ್ಗೆ ವಿಚಾರಿಸಿದ್ದರು. ಲಲಿತಾ ಶಾಸ್ತ್ರಿ ಅವರು ಉತ್ತರ ಬರೆಯುತ್ತಾ, ಆ ಹಣದಲ್ಲಿ 40 ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿ ಇನ್ನು ಉಳಿದ 10 ರೂಪಾಯಿಯನ್ನು ಉಳಿಸುತ್ತಿದ್ದೇನೆ ಎಂದು ಬರೆದರು. ಶಾಸ್ತ್ರಿ ಅವರು ಆ ಉಳಿದ 10 ರೂಪಾಯಿಯನ್ನು ಕಷ್ಟದಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರಿಗೆ ಕೊಡಬೇಕೆಂದು ಪತ್ರ ಬರೆದರು. ದಂಪತಿಗಳ ಅಪರಿಗ್ರಹನೀತಿಗೆ ಮಾದರಿಯಾಗಿದ್ದಾರೆ.

ಇವರು ಭಾರತವನ್ನು ಸ್ವಾವಲಂಬಿ ಮತ್ತು ಸ್ವಾಭಿಮಾನಿ ದೇಶವಾಗಿ ಮಾಡುವಲ್ಲಿ ಶ್ರಮಿಸಿದ್ದಾರೆ. ಅವರು ಪ್ರಧಾನಿಯಾದ ಸಂದರ್ಭದಲ್ಲಿ ದೇಶದಲ್ಲಿ ಬರಗಾಲ ಬಂದೊದಗಿತು. ಆಗ ಹೊರದೇಶದಿಂದ ಆಹಾರವನ್ನು ಆಮದು ಮಾಡಿಕೊಳ್ಳಬೇಕಾಯಿತು. ಸಾಲ ಭಾರ ಅಧಿಕವಾಯಿತು. ಅದನ್ನರಿತ ಶಾಸ್ತ್ರಿಜಿ ಅವರು ವಾರದಲ್ಲಿ ಒಂದು ದಿನ ಊಟವನ್ನು ಬಿಟ್ಟರೆ ಎಷ್ಟೋ ಆಹಾರ ಸಂಗ್ರಹವಾಗುವುದೆಂದು, ಸೋಮವಾರ ರಾತ್ರಿ ಊಟವನ್ನು ಬಿಡಲು ಸಾರ್ವಜನಿಕರಲ್ಲಿ ಮನವಿ ಮಾಡಿದರು. ತಾವೂ ಸಹ ಸೋಮವಾರದ ಊಟವನ್ನು ತ್ಯಜಿಸಿದ್ದರು. ಅವರ ಅಂತಿಮ ದಿನಗಳವರೆಗೂ ಶಾಸ್ತ್ರಿ ಅವರು ಸೋಮವಾರದ ಉಪವಾಸವನ್ನು ಪರಿಪಾಲಿಸಿದ್ದರು. ಅವರು ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಬಿಹಾರದ ಜನರು ಅವರನ್ನು ಭೇಟಿಯಾಗಲು ಬಂದಿದ್ದರು. ಅವರಿಗೆ ನಾಲ್ಕು ಗಂಟೆಯ ಸಮಯ ನಿಗದಿಯಾಗಿತ್ತು. ಸಂಸತ್ ಭವನದ ಸಭೆಯಲ್ಲಿ ಭಾಗಿಯಾದ ಪ್ರಧಾನಿಗೆ, ಸಮಯಕ್ಕೆ ಸರಿಯಾಗಿ ಬರಲಾಗದ್ದರಿಂದ, ಭೇಟಿ ಮಾಡಲು ಬಂದವರು ನಿರ್ಗಮಿಸಿದ್ದರು. ವಿಷಯ ತಿಳಿದ ಶಾಸ್ತ್ರಿ ಅವರು, ಬಸ್ ನಿಲ್ದಾಣಕ್ಕೆ ಖುದ್ದಾಗಿ ಹೋಗಿ ಅವರನ್ನು ಮತ್ತೆ ಕರೆತಂದು ಮಾತನಾಡಿದ್ದರು. ಇವರ ಸಂದೇಶ "ಜೈ ಜವಾನ್, ಜೈ ಕಿಸಾನ್" ಇಂದಿಗೂ ಕೃಷಿಕರ, ರೈತರ ಸ್ವಾಭಿಮಾನಿ ಘೋಷಣೆಯಾಗಿದೆ. ಅವರ ಆಡಳಿತಾವಧಿಯಲ್ಲಿ ಭಾರತ ಪಾಕಿಸ್ತಾನದ ಗಡಿವಿವಾದ ಪ್ರಮುಖವಾಗಿತ್ತು. ಇದರಿಂದ ಕಚ್ ಬಳಿ ನಡೆದ ಯುದ್ಧ ಯುಎನ್ ಮಧ್ಯಸ್ಥಿಕೆಯಿಂದ ನಿಲುಗಡೆಯಾಗಿತ್ತು. ಜಮ್ಮು-ಕಾಶ್ಮೀರದಲ್ಲಿ ಮತ್ತೊಮ್ಮೆ ಭುಗಿಲೆದ್ದಿತು. ಭಾರತ-ಪಾಕ್ ಪ್ರಮುಖ ಯುದ್ಧ ಪ್ರಾರಂಭವಾಗಿ ಭಾರತದ ಪಡೆ ಲಾಹೋರ್ ಆಕ್ರಮಿಸುವ ಹಂತದಲ್ಲಿರುವಾಗಲೇ ಶಾಂತಿ ಒಪ್ಪಂದಕ್ಕೆ ರಷ್ಯಾ ಕರೆನೀಡಿತು. ಜನವರಿ 1966ರಲ್ಲಿ ಶಾಸ್ತ್ರಿಜಿ ಮತ್ತು ಮಹಮ್ಮದ್ ಆಯೂಬ್ ಖಾನ್, (ಪಾಕಿಸ್ತಾನದ ಪ್ರಧಾನ ಮಂತ್ರಿ) ಅಲೆಕ್ಸೈ ನಿಕೊಲಯೆವಿಚ್ ಕೊಸಿಜಿನ್ ಅವರಿಂದ ತಾಷ್ಕೆಂಟ್‌ನಲ್ಲಿ ಆಯೋಜಿಸಲಾದ ಮಾತುಕತೆಯಲ್ಲಿ ಭಾಗವಹಿಸಿದ್ದರು. ಶಾಸ್ತ್ರಿಜಿ ಅವರು ಜನವರಿ 10 ರಂದು ತಾಶ್ಕೆಂಟ್ ಡಿಕ್ಲರೇಶನ್ ಒಪ್ಪಂದಕ್ಕೆ ಸಹಿ ಹಾಕಿದರು. ಮರುದಿನವೇ ಅವರು ಹೃದಯಾಘಾತದಿಂದ ನಿಧನರಾಗಿದ್ದರು. ಪಾಕಿಸ್ತಾನದವರೇ ಊಟದಲ್ಲಿ ವಿಷವನ್ನು ಹಾಕಿದ್ದರು ಎಂಬ ಸಂಶಯದ ಹೊಗೆಯಾಡುತ್ತಲೇ ಇದೆ. ಆದರೆ ಅದನ್ನು ಅಲ್ಲಿನ ವೈದ್ಯರು ದೃಢಪಡಿಸಿಲ್ಲ. ಇವರು ದೇಶವಾಚೆ ಸಾವನ್ನಪ್ಪಿದ ಭಾರತದ ಪ್ರಧಾನ ಮಂತ್ರಿಯವರಾಗಿದ್ದಾರೆ. ಇವರಿಗೆ ಮರಣಾನಂತರ "ಭಾರತ ರತ್ನ" ಗೌರವವನ್ನು ಪ್ರಧಾನ ಮಾಡಲಾಗಿದೆ. ಇವರ ಸ್ಮರಣಾರ್ಥ ದೆಹಲಿಯಲ್ಲಿ ಸ್ಮಾರಕ ನಿರ್ಮಿಸಲಾಗಿದೆ. ಇತ್ತೀಚೆಗೆ ಅವರ 'ತಾಷ್ಕೆಂಟ್ ಡೈರಿ' ಕೃತಿ ಸಹ ಬಿಡುಗಡೆಯಾಗಿದೆ.



ಐವರು ಮಹಿಳಾ ಅಧಿಕಾರಿಗಳಿಗೆ ಮೊದಲ ಬಾರಿಗೆ ಕರ್ನಲ್ ಶ್ರೇಣಿ ನೀಡಿದ ಭಾರತೀಯ ಸೇನೆ!

ಭಾರತೀಯ ಸೇನೆ ಇಂದು ಹೊಸ ಇತಿಹಾಸವನ್ನು ನಿರ್ಮಿಸಿದೆ. ಭಾರತದ ಸೇನೆಯಲ್ಲಿ ಈವರೆಗೆ ಅತ್ಯುತ್ತಮ ಸೇವೆ ಸಲ್ಲಿಸಿದ ಪುರುಷ ಅಧಿಕಾರಿಗಳಿಗೆ ಮಾತ್ರ ಕರ್ನಲ್ ಶ್ರೇಣಿಯನ್ನು ನೀಡಲಾಗುತ್ತಿತ್ತು. ಆದರೆ, ಇದೇ ಮೊದಲ ಬಾರಿಗೆ ಭಾರತೀಯ ಸೇನೆಯ ಆಯ್ಕೆ ಮಂಡಳಿಯು ಐವರು ಮಹಿಳಾ ಅಧಿಕಾರಿಗಳನ್ನು ಕರ್ನಲ್ ಶ್ರೇಣಿಗೆ ಆಯ್ಕೆ ಮಾಡಿದೆ. 26 ವರ್ಷಗಳ 'ಗಣನೀಯ ಸೇವೆ' ಪೂರ್ಣಗೊಳಿಸಿದ ನಂತರ ಈ ಐವರೂ ಮಹಿಳಾ ಅಧಿಕಾರಿಗಳಿಗೆ ಬಡ್ತಿ ನೀಡುವ ಬಗ್ಗೆ ಸೇನೆ ಇಂದು ಸ್ಪಷ್ಟಪಡಿಸಿದೆ. ನಿರ್ಧಾರವನ್ನು ಪ್ರಕಟಿಸಿದ ಭಾರತೀಯ ಸೇನೆಯು ಸೋಮವಾರ, "ಕಾರ್ಪ್ ಆಫ್ ಸಿಗ್ನಲ್, ಕಾರ್ಪ್ ಆಫ್ ಎಲೆಕ್ಟ್ರಾನಿಕ್ ಮತ್ತು ಮೆಕ್ಯಾನಿಕಲ್ ಇಂಜಿನಿಯರ್ಸ್ (ಇಎಂಇ) ಹಾಗೂ ಕಾರ್ಪ್ ಆಫ್ ಇಂಜಿನಿಯರ್‌ಗಳೊಂದಿಗೆ ಸೇವೆ ಸಲ್ಲಿಸುತ್ತಿರುವ ಮಹಿಳಾ ಅಧಿಕಾರಿಗಳು ಕರ್ನಲ್ ಹುದ್ದೆಗೆ ಅನುಮೋದನೆ ಪಡೆಯುತ್ತಿರುವುದು ಇದೇ ಮೊದಲು". ಕಾರ್ಪ್ ಆಫ್ ಸಿಗ್ನಲ್‌ನ ಲೆಫ್ಟಿನೆಂಟ್ ಕರ್ನಲ್ ಸಂಗೀತಾ ಸರ್ದನ, ಲೆಫ್ಟಿನೆಂಟ್ ಕರ್ನಲ್ ಸೋನಿಯಾ ಆನಂದ್, ಕಾರ್ಪ್ ಆಫ್ ಇಎಂಇ ಲೆಫ್ಟಿನೆಂಟ್ ಕರ್ನಲ್ ನವನೀತ್ ದುಗ್ಗಲ್, ಕಾರ್ಪ್ ಆಫ್ ಇಂಜಿನೀಯರ್ಸ್, ಲೆಫ್ಟಿನೆಂಟ್ ಕರ್ನಲ್ ರೀನು ಖನ್ನಾ ಮತ್ತು ಲೆಫ್ಟಿನೆಂಟ್ ಕರ್ನಲ್ ರಿಚ ಸಾಗರ್, ಒಟ್ಟು ಐವರು ಕರ್ನಲ್ (ಟೈಮ್ ಸ್ಕೇಲ್) ಶ್ರೇಣಿಗೆ ಆಯ್ಕೆಯಾದ ಮಹಿಳಾ ಅಧಿಕಾರಿಗಳು ಎಂದು ಸೇನೆಯು ಹೇಳಿದೆ. 16 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ನಂತರ ಕರ್ನಲ್ ಹುದ್ದೆಗೆ ಮೊದಲ ಆಯ್ಕೆ ನಡೆಯುತ್ತದೆ, ಇದರಲ್ಲಿ ಉಳಿದವರಿಗೆ 26 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ನಂತರ ಕರ್ನಲ್ ಶ್ರೇಣಿಯನ್ನು ನೀಡಲಾಗುತ್ತದೆ.




ಸೌಜನ್ಯ : ನ್ಯೂಸ್ ಹಂಟ್

ಸ್ವಾತಂತ್ರ್ಯೋತ್ಸವ-75 ಅಮೃತ ಮಹೋತ್ಸವ


ಕರ್ನಾಟಕದ ಜಲಿಯನ್‌ವಾಲಾ ಬಾಗ್ : ವಿದುರಾಶ್ವತ್ಥ

ಸಂಗ್ರಹ : ಡಾ. ನಿಕೇತನ

ಸ್ವರಾಜ್ಯಕ್ಕಾಗಿ ನಡೆದ ಚಾರಿತ್ರಿಕ ಹೋರಾಟಗಳ ಪರಂಪರೆಯಲ್ಲಿ ಕರ್ನಾಟಕದ ವಿದುರಾಶ್ವತ್ಥ ಧ್ವಜಸತ್ಯಾಗ್ರಹವು ಪ್ರಮುಖವಾದದ್ದು. ವಿದುರಾಶ್ವತ್ಥ ಧ್ವಜ-ಸತ್ಯಾಗ್ರಹವು(1938) ಅಧಿಕಾರಿಗಳ ವಿವೇಚನಾರಹಿತ ಕ್ರಮಗಳಿಂದಾಗಿ ಹಿಂಸಾತ್ಮಕ ಸ್ವರೂಪ ಪಡೆದುಕೊಂಡು ಸಾವು ನೋವುಗಳಿಗೆ ಕಾರಣವಾಯಿತು. ಈ ಹೋರಾಟದಲ್ಲಿ ಅನೇಕ ಹೋರಾಟಗಾರರು ಹುತಾತ್ಮರಾದರು. ಈ ಘಟನೆಗಳಿಗೆ ಇರುವ ದಬ್ಬಾಳಿಕೆ ಮತ್ತೂ ಅಮಾನವೀಯತೆಯ ಸಾಮ್ಯತೆಯನ್ನು ಗಮನಕ್ಕೆ ತೆಗೆದುಕೊಂಡ ಚರಿತ್ರಕಾರರು ಮತ್ತು ಇತರ ಲೇಖಕರು ಈ ಹಿನ್ನೆಲೆಯಲ್ಲಿ ವಿದುರಾಶ್ವತ್ಥವನ್ನು ಕರ್ನಾಟಕದ ಜಲಿಯನ್‌ವಾಲಾ ಬಾಗ್ ಎಂದೇ ಸಮರ್ಥನೀಯವಾಗಿ ವಿವರಿಸಿದ್ದಾರೆ.



ಹುತಾತ್ಮ ನರಸಪ್ಪ
ರಾಮಚಂದ್ರಪುರ




ಹುತಾತ್ಮ
ಎಂ. ಹನುಮಂತಪ್ಪ
ಮರಳೂರು

ಗಾಂಧೀಜಿಯವರು ಈ ವಿಷಯವನ್ನು ತಿಳಿದು ವಿಷಾದ ವ್ಯಕ್ತಪಡಿಸುತ್ತ, ಹಿಂದೆ ಕೊಟ್ಟಿದ್ದ ಪತ್ರವನ್ನು ರದ್ದುಗೊಳಿಸಿ, 'ಇಷ್ಟೊಂದು ಜನರ ಪ್ರಾಣಾಹುತಿಯು ಮೈಸೂರಿನ ಜನತೆ ಶೀಘ್ರದಲ್ಲಿಯೇ ಸ್ವಾತಂತ್ರ್ಯವನ್ನು ಪಡೆಯಲು ದಾರಿಯಾದಂತಾಗಿದೆ ಎಂದೂ ಜನರು ಕಾಯಾ-ವಾಚಾ-ಮನಸಾ ಶಾಂತಿ ಮತ್ತು ಸಂತೋಷದಿಂದ ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಲು ಸಿದ್ಧರಿರಬೇಕೆಂದೂ' ಭೂಪಾಳಂ ಚಂದ್ರಶೇಖರಯ್ಯನವರ ಮೂಲಕ ಸಂದೇಶವನ್ನು ಕಳುಹಿಸಿದರು. ಜೊತೆಗೆ. ವಿದುರಾಶ್ವತ್ಥಕ್ಕೆ ಹೋಗಿ ನಿಖರವಾದ ಮತ್ತು ನಿಷ್ಪಕ್ಷಪಾತವಾದ ವರದಿಯನ್ನು ಕಳುಹಿಸಬೇಕೆಂದು ಹೇಳಿದರು. ಗಾಂಧೀಜಿಯವರು ಘಟನೆ ಖಂಡಿಸಿ, "ಈಗಿನ ಜನತಾ ನಿರಂಕುಶಾಧಿಕಾರವನ್ನು ಕಿತ್ತುಹಾಕಿ ಆಡಳಿತದ ಜವಾಬ್ದಾರಿಯನ್ನು ಪ್ರತಿನಿಧಿಗಳಿಗೆ ಒಪ್ಪಿಸುವುದೇ ಉತ್ಕೃಷ್ಟ ಹಾಗೂ ಏಕಮಾತ್ರ ಪರಿಹಾರವೆಂದು" ಮಹಾರಾಜರಿಗೂ, ದಿವಾನರಾದ ಮಿರ್ಜಾ ಇಸ್ಮಾಯಿಲ್‌ರಿಗೂ ಸಂದೇಶ ಕಳುಹಿಸಿದರು. ವೇಪಾ ರಮೇಶಂರವರ ಅಧ್ಯಕ್ಷತೆಯಲ್ಲಿ ಮೂವರು ಸದಸ್ಯರನ್ನೊಳಗೊಂಡ ಒಂದು ವಿಚಾರಣಾ ಸಮಿತಿಯನ್ನು ನೇಮಿಸಿತು. ಇದರಿಂದ ಎರಡು ಸಮಿತಿಗಳ ಅವಶ್ಯಕತೆಯೇ ಇಲ್ಲವೆಂದು ಕಾಂಗ್ರೆಸ್, ಕಾಂಗ್ರೆಸ್ ಸಮಿತಿಯನ್ನೇ ರದ್ದುಗೊಳಿಸಿ. 1939, ಅಕ್ಟೋಬರ್ 26ರಂದು ವಿದುರಾಶ್ವತ್ಥವೂ ಸೇರಿದಂತೆ ಸಂಸ್ಥಾನದ ಹಲವು ಕಡೆ 'ವಿದುರಾಶ್ವತ್ಥ ದಿನ'ವನ್ನು ಆಚರಿಸಿ ಹುತಾತ್ಮರನ್ನು ಸ್ಮರಿಸಲಾಯಿತು ಅದೇ ದಿನ ಸಾರ್ವಜನಿಕ ಆಸ್ಪತ್ರೆಯ ಶಿಲಾನ್ಯಾಸ ನೆರವೇರಿಸಲು ಗೌರಿಬಿದನೂರಿಗೆ ಬಂದಿದ್ದ ದಿವಾನ್ ಮಿರ್ಜಾ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಯಲ್ಲಿ ಸಾಗಿ ವರದಿಯ ಪ್ರತಿಯನ್ನೂ ದಿವಾನರ ಪ್ರತಿಕೃತಿಯನ್ನೂ ದಹನ ಮಾಡಲಾಯಿತು.

ಗಾಂಧೀಜಿಯವರು ಏಪ್ರಿಲ್ 25, 1938ರ ವಿದುರಾಶ್ವತ್ಥ ದುರಂತದ ತರುವಾಯ ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳುವಂತಾಯಿತು. "ರಾಷ್ಟ್ರಧ್ವಜದ ಬಗ್ಗೆ ಮೈಸೂರಿನಲ್ಲಿ ನಡೆಯುತ್ತಿರುವ ಚಳವಳಿ ಕಾಲಧರ್ಮಕ್ಕೆ ಅನುಗುಣವಾಗಿದೆ. ಸರ್ಕಾರವು ತನ್ನ ನಿರಂಕುಶ ವರ್ತನೆಯನ್ನು ಕೈಬಿಟ್ಟು ಮೈಸೂರಿನ ಆಡಳಿತಕ್ಕೆ ಸಾರ್ವಜನಿಕ ಪ್ರತಿನಿಧಿಗಳನ್ನು ಜವಾಬ್ದಾರರನ್ನಾಗಿ ಮಾಡುವುದು ಸೂಕ್ತವೆಂದು ಶ್ರೀಮನ್ಮಹಾರಾಜರವರಿಗೂ. ಅವರ ಸಲಹೆಗಾರರಾದ ಇಸ್ಮಾಯಿಲ್‌ರಿಗೂ ಸೂಚಿಸುತ್ತೇನೆ" ಎಂಬ ಸಂದೇಶ ರವಾನಿಸಿ ದೇಶೀಯ ಸಂಸ್ಥಾನಗಳಲ್ಲಿ ಚಳವಳಿಗಳಿಗೆ ಮಾರ್ಗದರ್ಶನ ಮಾಡುವ ಜವಾಬ್ದಾರಿ ವಹಿಸಿಕೊಂಡರು. ಹೀಗೆ ವಿದುರಾಶ್ವತ್ಥ ಘಟನೆಯು ಮೈಸೂರು ಸಂಸ್ಥಾನದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಯ ಕಿಚ್ಚನ್ನು ಹೊತ್ತಿಸಿ ಚಾಲಕಶಕ್ತಿಯಾಗಿ ಪರಿಣಮಿಸಿತು ಎನ್ನುವುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ.

ತತ್ಫಲವಾಗಿ ಮೇ 17, 1938ರಂದು ಪಟೇಲ್ ಮಿರ್ಜಾ ಒಪ್ಪಂದವಾಯಿತು. ಒಪ್ಪಂದದ ಪ್ರಕಾರ ಮೈಸೂರು ಕಾಂಗ್ರೆಸ್ ಸಂಸ್ಥೆಯನ್ನು ಒಂದು ರಾಜಕೀಯ ಪಕ್ಷವೆಂಬುದಾಗಿ ಅಂಗೀಕರಿಸಲಾಯಿತು. ಕಾಂಗ್ರೆಸ್‌ನ ತ್ರಿವರ್ಣ ಧ್ವಜವನ್ನು ಮೈಸೂರು ಧ್ವಜದೊಡನೆ ಹಾರಿಸಲು ಮತ್ತು ಜಾರಿಯಲ್ಲಿರುವ ಎಲ್ಲಾ ನಿಷೇಧಾಜ್ಞೆಗಳನ್ನು ಹಿಂತೆಗೆದುಕೊಂಡು ರಾಜಕೀಯ ಬಂಧಿಗಳನ್ನು ಬಿಡುಗಡೆ ಮಾಡಲು ಹಾಗೂ ಸುಧಾರಣಾ ಸಮಿತಿಗೆ ಕಾಂಗ್ರೆಸ್ ಸದಸ್ಯರನ್ನು ನೇಮಿಸಲು ಸರ್ಕಾರವು ಅಂತಿಮವಾಗಿ ಒಪ್ಪಿಗೆ ನೀಡಿತು. 1939ರ ಸೆಪ್ಟೆಂಬರ್‌ನಲ್ಲಿ ಕೆಜಿಎಫ್ ಚಳವಳಿಯು ಕೆ. ಸಿ.ರೆಡ್ಡಿಯವರ ನೇತೃತ್ವದಲ್ಲಿ ನಡೆಯಿತು. 1942ರ ಕ್ವಿಟ್ ಇಂಡಿಯಾ ಚಳವಳಿ ನಡೆದು ಹಲವಾರು ನಾಯಕರು ಜೈಲು ಸೇರಿದರು. 1947ರ ಆಗಸ್ಟ್ 15ರಂದು ದೇಶಕ್ಕೆ ಸ್ವಾತಂತ್ರ್ಯ ಬಂದಿತಾದರೂ ಮೈಸೂರು ಜನತೆ ಆಶಿಸುತ್ತಿದ್ದ ಜವಾಬ್ದಾರಿ ಬದಲಾಗಿ ಸರ್ಕಾರದ ನಿಯಮಗಳು ಇನ್ನೂ ಕಠಿಣವಾಗಲಾರಂಭಿಸಿದವು. ತತ್ಪರಿಣಾಮವಾಗಿ ಕಾಂಗ್ರೆಸ್ ಪುನಃ ಸತ್ಯಾಗ್ರಹ ಆರಂಭಿಸಿ ಸೆಪ್ಟೆಂಬರ್ 01 ರಂದು 'ಮೈಸೂರು ಚಲೋ' ಚಳವಳಿಯನ್ನು ಪ್ರಾರಂಭಿಸಿತು. ಸತತ ನಲವತ್ತೆರಡು ದಿನಗಳ ಚಳವಳಿಯ ನಂತರ 1947ರ ಅಕ್ಟೋಬರ್ 24ರಂದು ಕೆ.ಸಿ.ರೆಡ್ಡಿಯವರ ನೇತೃತ್ವದ ಜವಾಬ್ದಾರಿ ಸರ್ಕಾರ ಅಸ್ತಿತ್ವಕ್ಕೆ ಬಂದಿತು.



ಗಾಂಧಿ ಮತ್ತು ಆಧ್ಯಾತ್ಮಿಕ ಸುಸ್ಥಿರತೆ

ಡಾ. ವೂಡೇ ಪಿ. ಕೃಷ್ಣ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಮಹಾತ್ಮ ಗಾಂಧಿ ಮತ್ತು ಸ್ವಚ್ಛ ಭಾರತ

ಭಾರತ ಸರ್ಕಾರಕ್ಕೆ ಗಂಗೆಯನ್ನು ಶುಚಿಗೊಳಿಸುವುದು ಪ್ರಸಕ್ತ ವರ್ಷಗಳಲ್ಲಿ ರಾಷ್ಟ್ರೀಯ ಮಹತ್ವದ ವಿಚಾರವಾಗಿದೆ. 1925ರಲ್ಲಿ ಗಾಂಧೀಜಿ ಅವರು 'ನವಜೀವನ' ವಾರಪತ್ರಿಕೆಯಲ್ಲಿ (ಈ ವಾರಪತ್ರಿಕೆಗೆ 1919ರಿಂದ ಗಾಂಧೀಜಿ ಅವರು ಸಂಪಾದಕರಾಗಿದ್ದರು.) ಶೌಚಾಲಯದಲ್ಲಿ ಶುಚಿತ್ವದ ಮಹತ್ವದ ಬಗ್ಗೆ ಹೀಗೆ ಬರೆಯುತ್ತಾರೆ.: "ನಮ್ಮ ಮನೆಯ ಹಾಲ್‌ನಷ್ಟೇ ನಮ್ಮ ಶೌಚಾಲಯ ಸಹ ಶುಚಿಯಾಗಿರಬೇಕು ಎನ್ನುವುದನ್ನು ನಾನು 35 ವರ್ಷಗಳ ಹಿಂದೆಯೇ ಕಲಿತಿದ್ದೆ. ಇದನ್ನು ನಾನು ಪಶ್ಚಿಮದವರನ್ನು ನೋಡಿ ಕಲಿತಿದ್ದು."

"ನಮ್ಮ ಬಹಳಷ್ಟು ರೋಗಗಳಿಗೆ ಕಾರಣ ನಮ್ಮ ಶೌಚಾಲಯದ ಅಶುಚಿತ್ವ ಮತ್ತು ಮಲವನ್ನು ಎಲ್ಲೆಂದರಲ್ಲಿ ಬಿಸಾಡುವುದು ಪರಿಪಾಠ. ಆದ್ದರಿಂದ ನಾನು, ಶೌಚದ ವಿಷಯದಲ್ಲಿ ಸ್ವಚ್ಛ ಪರಿಸರದ ಅಗತ್ಯತೆಯನು ಮತ್ತು ಶುಚಿಯಾದ ವಸ್ತುಗಳ ಬಳಕೆಯ ಅವಶ್ಯಕತೆಯನ್ನು ನಂಬುತ್ತೇನೆ. ಪಶ್ಚಿಮ ಬಂಗಾಳ ರಾಜ್ಯದ, ಬರ್ಭುಮ್ ಎನ್ನುವ ಹಳ್ಳಿಯಲ್ಲಿ ವಾಸಿಸುವ ವ್ಯಕ್ತಿಯೊಬ್ಬನಿಂದ 1937ರಲ್ಲಿ ಗಾಂಧೀಜಿ ಅವರಿಗೆ ಪತ್ರವೊಂದು ಬಂದಿತ್ತು. "ಮಾದರಿ ಗ್ರಾಮದ ಪರಿಕಲ್ಪನೆಯನ್ನು ತಾವು ಹೇಗೆ ಗ್ರಹಿಸುತ್ತೀರಿ ಹಾಗೂ ತಮ್ಮ ಪ್ರಕಾರ ಭಾರತದ ಹಳ್ಳಿಗಳನ್ನು ಯಾವ ಸಮಸ್ಯೆಗಳು ಕಾಡುತ್ತಿವೆ?" ಎಂದು ಆ ಪತ್ರ ಬರೆದವನು ಕೇಳಿದ್ದ.

ಆ ಪತ್ರಕ್ಕೆ ಗಾಂಧೀಜಿ ಅವರು 'ಹರಿಜನ' ವಾರಪತ್ರಿಕೆಯ 1937ರ ಸಂಚಿಕೆಯೊಂದರಲ್ಲಿ ಈ ರೀತಿ ಉತ್ತರ ನೀಡಿದ್ದರು. (ಈ ಪತ್ರಿಕೆಗೆ 1930ರಿಂದ ಗಾಂಧೀಜಿ ಅವರು ಸಂಪಾದಕರಾಗಿದ್ದರು.) "ಯಾವ ಗ್ರಾಮ ಪರಿಪೂರ್ಣ ನೈರ್ಮಲ್ಯವನ್ನು ಹೊಂದಿರುತ್ತದೆಯೋ, ಅದೇ ಮಾದರಿ ಗ್ರಾಮ. ಹಳ್ಳಿಯ ಜನ ಮೊಟ್ಟಮೊದಲು ತಮ್ಮಲ್ಲಿಯ ನೈರ್ಮಲ್ಯ ಸಮಸ್ಯೆಯನ್ನು ಪರಿಹರಿಸಲು ಕೆಲಸ ಮಾಡಬೇಕು.

ಅವರು ಬರೆಯುತ್ತಾರೆ; "ಒಬ್ಬ ಹಳ್ಳಿಯವನು ಸ್ವಯಂ ಪ್ರೇರಿತ ನೈರ್ಮಲ್ಯ ಕಾರ್ಮಿಕರಾದರೆ, ಆಗ ಆತ ರಾತ್ರಿ ಮಣ್ಣನ್ನು ಸಂಗ್ರಹಿಸಿ ಅದನ್ನು ಗೊಬ್ಬರವಾಗಿ ಪರಿವರ್ತಿಸಲು ಹಾಗೂ ಹಳ್ಳಿಯ ರಸ್ತೆಗಳನ್ನು ಗುಡಿಸಲು ಆರಂಭಿಸುತ್ತಾನೆ. ಆತನು ಹಳ್ಳಿಯ ಜನರಿಗೆ ದೈನಂದಿನ ಚಟುವಟಿಕೆಗಳನ್ನು ಹೇಗೆ ಮಾಡಬೇಕು, ನೈರ್ಮಲ್ಯದ ಮಹತ್ವ ಹಾಗೂ ನೈರ್ಮಲ್ಯವನ್ನು ನಿರ್ಲಕ್ಷಿಸುವುದರಿಂದ ಆಗುವ ಅಪಾಯದ ಬಗ್ಗೆ ಎಚ್ಚರಿಸುತ್ತಾನೆ. ಯಾರು ಕೇಳಲಿ ಬಿಡಲಿ, ಆ ಕೆಲಸಗಾರ ತನ್ನ ಕಾರ್ಯ ಮುಂದುವರಿಸುವುದನ್ನು ಮಾತ್ರ ನಿಲ್ಲಿಸುವುದಿಲ್ಲ. ಅಧಿಕಾರಿಗಳ ಬಂಗಲೆಗಳಲ್ಲಿ ಎಷ್ಟು ನೈರ್ಮಲ್ಯ ಇರುತ್ತದೆಯೋ ಅಷ್ಟೇ ಪ್ರಮಾಣದ ನೈರ್ಮಲ್ಯ ಆ ಬಂಗಲೆಯ ಪಕ್ಕದಲ್ಲಿರುವ ಕೆಲಸಗಾರರ ಮನೆಗಳಲ್ಲೂ ಇರಬೇಕು ಎಂದು ಗಾಂಧೀಜಿ ಅವರು 1946ರ ಸೆಪ್ಟೆಂಬರ್‌ನಲ್ಲಿ ನವದೆಹಲಿಯಲ್ಲಿ ತಮ್ಮ ಭಾಷಣವೊಂದರಲ್ಲಿ ಹೇಳಿದ್ದರು. "ದುಃಖದಾಯಕ ವಿಷಯವೆಂದರೆ ವೈಸ್‌ರಾಯ್ ಅವರ ಮನೆಯಲ್ಲಿ ದುಡಿಯುವ ಕೆಲಸಗಾರರು ಮತ್ತು ಕಸಗುಡಿಸುವವರ ವಸತಿ ಸಮುಚ್ಚಯವು ಅತ್ಯಂತ ಕೊಳಕಾಗಿದೆ. ಅಧಿಕಾರಿಗಳ ಸೇವಕರ ಮನೆಗಳೂ ಸ್ವಚ್ಛ ಮತ್ತು ಶಿಸ್ತಿನಿಂದ ಕೂಡಿರುವ ದೃಶ್ಯ ಮಾತ್ರ ನನಗೆ ತೃಪ್ತಿ ಕೊಡಲು ಸಾಧ್ಯ' ಎಂದು ಅವರು ನುಡಿದಿದ್ದರು.

ಒಮ್ಮೆ ಗಾಂಧೀಜಿ ಅವರ ಆಶ್ರಮದ ಬಳಿಯಿರುವ ಹಳ್ಳಿಯವರು ಮಲವನ್ನು ಮಣ್ಣಿನಿಂದ ಮುಚ್ಚಲು ನಿರಾಕರಿಸುತ್ತಾರೆ "ಇದು ಭಂಗಿಯವರು ಮಾಡುವ ಕೆಲಸ. ಅವರ ಮುಖ ನೋಡುವುದೂ ಸಹ ಪಾಪದ ಕೆಲಸ" ಎಂದೆಲ್ಲಾ ನಿಂದಿಸುತ್ತಾರೆ. ಆಗ ಗಾಂಧಿ ಅವರು ತಾವೇ ಆ ಕಾರ್ಯದ ಮೇಲ್ವಿಚಾರಣೆ ವಹಿಸಿಕೊಳ್ಳುತ್ತಾರೆ. ತಾವೇ ಎಲ್ಲರಿಗೂ ಮಾದರಿಯಾಗಬೇಕೆಂದು ಹಲವು ತಿಂಗಳು ಕಾಲ ಬುಟ್ಟಿ ಮತ್ತು ಕಸಬರಿಕೆಯೊಂದಿಗೆ ಹಳ್ಳಿಗೆ ಹೋಗುತ್ತಾರೆ. ಅವರಿಗೆ ಸ್ನೇಹಿತರು ಮತ್ತು ಅತಿಥಿಗಳೂ ಸಹಕಾರ ನೀಡುತ್ತಾರೆ. ಅವರೆಲ್ಲಾ ಸೇರಿ ಬುಟ್ಟಿ ತುಂಬಾ ಕಸ–ಕೊಳೆ, ಮಲವನ್ನು ತಂದು ಗುಂಡಿಯಲ್ಲಿ ಮುಚ್ಚುತ್ತಾರೆ.

ಅವರ ಆಶ್ರಮದ ಎಲ್ಲ ಸ್ವಚ್ಛತಾ ಕಾರ್ಯಗಳೂ ಅಲ್ಲಿ ವಾಸಿಸುವವರಿಂದಲೇ ನಡೆಯುತ್ತಿದ್ದವು. ಗಾಂಧಿ ಅವರು ಮಾರ್ಗದರ್ಶನ ಮಾಡುತ್ತಿದ್ದರು. ಹಲವು ಮತ, ಧರ್ಮ, ಬಣ್ಣಗಳ ಜನರು ಅಲ್ಲಿ ವಾಸಿಸುತ್ತಿದ್ದರು. ಆಶ್ರಮದಲ್ಲೆಲ್ಲೂ ಕೊಳೆ ಕಾಣುತ್ತಿರಲಿಲ್ಲ. ಎಲ್ಲ ವ್ಯರ್ಥ ವಸ್ತುಗಳನ್ನು ಗುಂಡಿಗಳಲ್ಲಿ ಹಾಕಲಾಗುತ್ತಿತ್ತು. ತರಕಾರಿ ಸಿಪ್ಪೆ ಮತ್ತು ಉಳಿದ ಆಹಾರ ಪದಾರ್ಥಗಳನ್ನು ಅವುಗಳಲ್ಲಿ ಮಾಡಲಾದ ಗೊಬ್ಬರ ಗುಂಡಿಯಲ್ಲಿ ಹಾಕಲಾಗುತ್ತಿತ್ತು. ಮಾನವ ಮಲವನ್ನು ಹೂತು ಹಾಕಿ ಗೊಬ್ಬರದಂತೆ ಬಳಸಲಾಗುತ್ತಿತ್ತು. ಆದ್ದರಿಂದ ಸರಿಯಾದ ಒಳಚರಂಡಿ ವ್ಯವಸ್ಥೆ ಇಲ್ಲದಿದ್ದರೂ ಸಹ ತೋಟವು ಕ್ರಿಮಿಕೀಟ, ಸೊಳ್ಳೆಗಳಿಂದ ಮುಕ್ತವಾಗಿತ್ತು.

ಗಾಂಧಿ ಮತ್ತು ಅವರ ಸಹವಾಸಿಗಳು ಗುಡಿಸುವ ಕಾರ್ಯವನ್ನು ಸರದಿಯಲ್ಲಿ ಮಾಡುತ್ತಿದ್ದರು. ಬಕೆಟ್ ಶೌಚಾಯಲ ಮತ್ತು ಎರಡು ಕಂದಕಗಳುಳ್ಳ ಶೌಚಾಲಯ ಎನ್ನುವ ನೂತನ ವಿಧಾನವನ್ನು ಅವರು ಪರಿಚಯಿಸಿದರು. ಅವರು ತಮ್ಮ ಈ ಹೊಸ ಅನ್ವೇಷಣೆಯನ್ನು ಆಶ್ರಮಕ್ಕೆ ಭೇಟಿ ಕೊಡುತ್ತಿದ್ದ ಎಲ್ಲರಿಗೂ ಹೆಮ್ಮೆಯಿಂದ ತೋರಿಸುತ್ತಿದ್ದರು. ಬಡವ ಶ್ರೀಮಂತ, ನಾಯಕ, ಕೆಲಸಗಾರ, ಭಾರತೀಯ ಮತ್ತು ವಿದೇಶಿಗ ಯಾರೇ ಆದರೂ ಇವುಗಳನ್ನೇ ಬಳಸಬೇಕಿತ್ತು. ಈ ಪ್ರಯೋಗವು ಸಾಂಪ್ರದಾಯಿಕ ಮನೋಧರ್ಮದ ಸಹವಾಸಿಗಳ ಮತ್ತು ಆಶ್ರಮದ ಮಹಿಳೆಯರಲ್ಲಿ ಮಲ ಸಂಗ್ರಹಣೆಯ ಬಗ್ಗೆ ಇದ್ದ ಪೂರ್ವಾಗ್ರಹವನ್ನು ಹೋಗಲಾಡಿಸಲು ಸಹಾಯ ಮಾಡಿತು.

ಮುಂದುವರಿಯುವುದು...

ನಾಡು ಕಟ್ಟಿದ ನಾಡಪ್ರಭು

ಇಂದಿರಾ ಕೃಷ್ಣಪ್ಪ

ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ದೊರೆತ ಕೆಲವು ಶಾಸನಗಳು ಯಲಹಂಕ ನಾಡಿನ ಉದಯವನ್ನು ಹೇಳುತ್ತದೆ. ಈಗ ಲಭ್ಯವಿರುವ ಈ ಶಾಸನಗಳಲ್ಲಿ ಗೋಚರಿಸುವ ಭಾಗಗಳ ಮಾಹಿತಿಯನ್ನು ಇಲ್ಲಿ ಕೊಡಲಾಗಿದೆ.

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

1342 – ಬೆಂಗಳೂರು – 24 ಯಲಹಂಕದ ಹೊಬಳಿ ಗಾಣಿಗರಹಳ್ಳಿ ಕೆರೆ ಉತ್ತರಕೋಡಿ ಬಳಿಯಲ್ಲಿರುವ ಕಲ್ಲಿನಲ್ಲಿ.

ಶಿಲಾಶಾಸನ, ಭಾಷೆ ಹಾಗೂ ಲಿಪಿ ಕನ್ನಡ. ಕಾಲ ಶಕವರ್ಷ 1264ನೆಯ ಚಿತ್ರಭಾನು ಸಂವತ್ಸರದ ಚೈತ್ರ ಶುದ್ಧ 13 ಬುಧವಾರ, ಕ್ರಿ.ಶ. 1342 ಮಾರ್ಚ್ 20 ಬುಧವಾರಕ್ಕೆ ಸರಿಹೊಂದುತ್ತದೆ.

1. ಸ್ವಸ್ತಿಶಕವರುಷ1264ಸಂ
2. ದುನಡವಚಿತ್ರಭಾನುಸಂವ
3. ತ್ಸರದಚಯಿತ್ರಸು13ಬುಶ್ರೀಮ
4. ನ್ಮಹಾಪ್ರತಾಪಚಕ್ರವರ್ತಿಹೊ
5. ಯಿಸಣಶ್ರೀವೀರಬಲ್ಲಾಳ ದೇವರಸರುವುಂ
6. ಣ್ಣಾಮಲೆಯಪಟ್ಟಣದಲು ಸುಖರಾಜ್ಯಂ
7. ಗೆಯಿವುತಿರಲು ಶ್ರೀಮನ್ಮಹಾಪಸಾಯಿತರು
8. ಮಪ್ಪಮೊಸೆಯರುಗಂಡಚಿಕ್ಕಬಯಿ ರೆಯನಾಯ
9. ಕರುಅವರಮಯಿದುನಂಧೀರುಚೊ ೞಿಯನಾಯಕರು
10. ಶ್ರೀಮನ್ಮಹಾಯೆಲಹಕನಾಡ ಪ್ರಭುಗಳುಬಯಿರೆದೇ
11. ವಮಾರಗವುಂಡತಾಮಿಯಪ್ಪ ಮಾಚಿದೇವಕನಗವುಂ
12. ಡನಾಡಸೇನಬೋವ ಅಲಾಳಜೀಯರೊಳಗಾದಸಮ
13. ಸ್ತಪ್ರಜೆಗವುಂಡಗಳು ಶ್ರೀಮನ್ಮಹಾಸಾವಂತಾಧಿ
14. ಪತಿಪಂಮದೇವರಸರಮಕ್ಕಳು ಅಲ್ಲಯ್ಯನವರಿಂ
15. ಗೆಸೋಮಿದೇವನಹಳ್ಳಿಕಾಳಿತಮ್ಮನ ಹಳ್ಳಿಪೇತೆದ್ರಿಮಾ
16. ವಿನಕೆರೆಹುರವಾಮಾರಾಡಿಯ ಕೆರೆವೊಳಗಾದಚ
17. ತುಸ್ಸೀಮೆಯಗದ್ದೆ ಬೆಜ್ಜಲನುಧರೆಚಂದ್ರಾದಿತ್ಯರು
18. ಳ್ಳಂನಕರಉಸರ್ವಮಾನ್ಯವಾಗಿ ಕೊಟ್ಟಕೊಡಗೆ
19. ಮಂಗಳಮಹಾ ಶ್ರೀ ಶ್ರೀ ಶ್ರೀ

1343 – ಬೆಂಗಳೂರು – 21 ಯಲಹಂಕದ ಹೊಬಳಿ ಜಕ್ಕೂರು ಗ್ರಾಮದ ಮಕ್ಕರಿಗನ ಹೊಲದಲ್ಲಿ ನೆಟ್ಟ ಕಲ್ಲಿನಲ್ಲಿ.


1. ಸ್ವಸ್ತಿಶ್ರೀಶಕಾಬ್ದ 1965ನೆಯ
2. ಚಿತ್ರಭಾನುಸಂ। ಅಶ್ವೀಜಶು5
3. ಬ್ರೀಶ್ರೀಮತುಪ್ರತಾಪಚಕ್ರವರ್ತಿ
4. ಶ್ರೀ ಹೊಯ್ಸಳ ವೀರಬಲ್ಲಾಳ
5. ದೇವರಸರು ಉಣ್ಣಾಮಲೆ ಪಟ್ಟಣ
6. ದಲುಪ್ರಿಥ್ವೀರಾಜ್ಯಂಗೈಯುತಿರಲು
7. ಶ್ರೀಮನುಮಹಾವಿಲಹ್ಕನಾಡ
8. ಸಮಸ್ತ ಪ್ರಜೆಗವುಂಡುಗಳೂ



9. ಮನುಮಹಾಸಾವಂತದೀಪ
10. ತಿಮೀಸೆಯರ ಗಂಡಚಿಕ್ಕಬಾಯಿ
11. ರಯನಾಯ್ಕನಮಗ ಹೊನ್ನಮಾರಾಯ
12. ನಾಯ್ಕನೂನಾಡಸೇನ ಬೋವ ಆಲಾಳರಿಗೆ
13. ಶಿಲಾಶಾಸನವ ಮಾಡಿಕೊಟ್ಟ ಕ್ರಮ
14. ವೆಂತೆಂದೆಡೆಯೀನಾಡೊಳಗಣ
15. ಜರಗಪ್ಪಬೆದ್ದಲು,
16. ನಗೆಮಾಳವೊಳಗಾದಚ
17. ತುಸ್ಸೀಮೆವಿನುಳ್ಳದನುಸ
18. ರ್ವ್ವಮಾನ್ಯದ ಕೊಡಗಿಯಾ
19. ಗಿಚಂದ್ರಾದಿತ್ಯರುಳ್ಳಂ
20. ಬರಸಲುವಂತಾಗಿಶಿಲಾ
21. ಶಾಸನವಮಾಡಿಕೊಟ್ಟರು
22. ಮಂಗಳಮಹಾಶ್ರೀ



ಬೆಂಗಳೂರಿನ ಗವಿಪುರ ಗುಟ್ಟಹಳ್ಳಿಯಲ್ಲಿರುವ ಕೆಂಪೇಗೌಡರು ತಮ್ಮ ಕುಲದೇವತೆಯ ಹೆಸರಿನಲ್ಲಿ ಕಟ್ಟಿಸಿದ ಕೆಂಪಾಂಬುದಿ ಕೆರೆ.



ದೇವನಹಳ್ಳಿ ತಾಲ್ಲೂಕು ಚಿಕ್ಕಜಾಲದಲ್ಲಿರುವ ಯಲಹಂಕ ನಾಡಗೌಡರುಗಳ ಕಾಲದ ಕಲ್ಯಾಣಿ ಮತ್ತು ದೇವಾಲಯ

ಮಾದಕ ವಸ್ತುಗಳ ಮಾಯಾಜಾಲ

ಡಾ. ಸಿ.ಆರ್. ಚಂದ್ರಶೇಖರ್

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಗಾಂಜಾ : ಹಲವು ರೂಪಗಳು

ಗಾಂಜಾ, ಭಂಗಿ ಸೇದುವುದು ನಮ್ಮ ದೇಶದಲ್ಲಿ ಬಹು ಹಿಂದಿನಿಂದಲೂ ಕಂಡುಬರುತ್ತದೆ. ಊರ ಮುಂದಿನ ಮಂಟಪ, ಮಠಗಳಲ್ಲಿ, ಸಾಧು ಸನ್ಯಾಸಿಗಳು ಭಂಗಿ ಸೇದುವುದು ಸಾಮಾನ್ಯ ವಿಚಾರ. ಅವರೊಂದಿಗೆ ಊರಿನ ಪಡ್ಡೆ ಹುಡುಗರು, ಸೋಮಾರಿಗಳೂ ಸೇರಿಕೊಳ್ಳುತ್ತಾರೆ. ಗಾಂಜಾ, ಭಂಗಿಯನ್ನು ಶಿವನೂ ಸೇದುತ್ತಾನೆ ಎಂದು ನೆಪ ಹೇಳಿ, ತಾವೂ ಅದನ್ನು ಸೇದಿ ಆ ಪರಮಾತ್ಮನನ್ನು ಕಾಣುತ್ತೇವೆ, ಸೇರುತ್ತೇವೆ ಎಂಬ ಭ್ರಮೆಗೆ ಒಳಗಾಗುತ್ತಾರೆ. ಗಾಂಜಾ ಕೆನಾಬಿಸ್ ಸಟೈವ ಎಂಬ ಗಿಡದ ಮೂಲದಿಂದ ಬರುತ್ತದೆ. ತನಗೆ ತಾನೇ ಬೆಳೆದ ಗಿಡದ ಮೇಲ್ಭಾಗಗಳನ್ನು ಕತ್ತರಿಸಿ, ಅವರಿಂದ ಭಂಗಿ, ಆಯ್ದ ಗಿಡಗಳ ಹೂವು ಮತ್ತು ಎಲೆಗಳಿಂದ ಗಾಂಜಾ, ಬಲಿತ ಗಿಡಗಳ ಮೇಲ್ಭಾಗದಿಂದ ಬರುವ ಹೊಂಬಣ್ಣದ ಅಂಟಿನಿಂದ ಚರಸ್ ಹಶೀಶ್ ತಯಾರಿಸುತ್ತಾರೆ. ಅಂದರೆ ಭಂಗಿ ಸೊಪ್ಪು ಕಡಿಮೆ ಬೆಲೆಗೂ, ಚರಸ್ ಹಶೀಶ್ ಹೆಚ್ಚಿನ ಬೆಲೆಗೂ ಮಾರಾಟವಾಗುತ್ತದೆ. ಕೆನಾಬಿಸ್‌ನಲ್ಲಿ ನೋವು ನಿವಾರಕ ಹಾಗೂ ಮಾಂಸಖಂಡಗಳನ್ನು ವಿರಮಿಸುವ ಗುಣಗಳಿವೆ. ಅದರ ಸೇವನೆಯಿಂದ ವ್ಯಕ್ತಿಯು ಕಾಲ, ಸ್ಥಳದ ಪರಿವೆಯನ್ನು ಕಳೆದುಕೊಳ್ಳುತ್ತಾನೆ. ಸಾಮಾನ್ಯ ದೃಶ್ಯ, ಧ್ವನಿ, ಸ್ಪರ್ಶಗಳು ಅಸಾಮಾನ್ಯವೆಂಬಂತೆ ಹೆಚ್ಚು ತೀವ್ರವಾಗಿ, ರೋಮಾಂಚಕವಾಗಿ ಭಾಸವಾಗುತ್ತವೆ. ತನ್ನ ಕಲ್ಪನೆಗಳು ಸಾಕಾರಗೊಂಡಂತೆ ಭ್ರಮಿಸಿ, ಪರಿಸರದ ವಾಸ್ತವಿಕತೆಯನ್ನು ಮರೆಯುತ್ತಾನೆ. ಖುಷಿಪಡುತ್ತಾನೆ. ಈ ಪ್ರಾರಂಭಿಕ ಪರಿಣಾಮಕ್ಕಾಗಿ ವ್ಯಕ್ತಿಗಳು ಗಾಂಜಾ ಸೇವನೆಯ ವ್ಯಾಮೋಹಕ್ಕೆ ಬೀಳುತ್ತಾರೆ. ಭಂಗಿ ಸೊಪ್ಪು ಹೊರ ದೇಶದಲ್ಲಿ ಮಾರಿಹೋನ ಎಂದು ಮಾರಾಟವಾಗುತ್ತದೆ. ಗಾಂಜಾ ಗಿಡದಿಂದ ಅಂಟನ್ನು ತೆಗೆದು, ಅದರಿಂದ ಮಾದಕ ವಸ್ತುವನ್ನು ಪ್ರತ್ಯೇಕಿಸಿ ಶುದ್ಧ ರೂಪದಲ್ಲಿ ಚರಸ್, ಹಶೀಶ್ ಎಂದು ಮಾರಾಟವಾಗುತ್ತದೆ. ಇದನ್ನು ಹೆಚ್ಚಾಗಿ ಹೊಗೆ ಬತ್ತಿ ಮೂಲಕ ಸೇದುತ್ತಾರೆ. ಕೆಲವು ಸಲ ತಿಂಡಿಯೊಂದಿಗೆ ಸೇರಿಸಿ ತಿನ್ನುತ್ತಾರೆ. ಈ ವಸ್ತು ದೈಹಿಕ ಅವಲಂಬನೆಯನ್ನುಂಟುಮಾಡದಿದ್ದರೂ ದೀರ್ಘ ಕಾಲದ ಸೇವನೆಯಿಂದ ತೀವ್ರ ಮಾನಸಿಕ ಕಾಯಿಲೆಯಾದ 'ಸ್ಕಿಜೋಫ್ರೀನಿಯಾ' ವನ್ನು ಹೋಲುವ ಕೆನಾಬಿಸ್ ಸೈಕೋಸಿಸ್ ಕಾಯಿಲೆ ಕಾಣಿಸಿಕೊಳ್ಳುತ್ತದೆ.

ಮುಂದುವರಿಯುವುದು...

ಪ್ರಾಕೃತಿಕ ಆಹಾರದ ಮಹತ್ವ

ಡಾ. ವಸುಂಧರಾ ಭೂಪತಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಸುಸ್ಥಿರ ಆಹಾರ : ಬಹುತೇಕ ವೈದ್ಯರು ಇದೀಗ ಕಾರ್ಬೋಹೈಡ್ರೇಟ್‌ಗಳ ತಪ್ಪು ಆಯ್ಕೆ ನಿಮಗೆ ರೋಗಗಳನ್ನು ತರಬಹುದು ಎನ್ನುವುದನ್ನು ಒಪ್ಪುತ್ತಾರೆ. ಇದಕ್ಕಾಗಿ ಸಾಮಾನ್ಯವಾಗಿ ಕಾರ್ಬೋಹೈಡ್ರೇಟ್‌ಗಳು ಕಡಿಮೆ ಇರುವ ಅಥವಾ ಪ್ರೋಟಿನ್ ಅಧಿಕವಿರುವ ಆಹಾರ ಸೇವನೆಯೇ ಉತ್ತಮ ಎನ್ನುತ್ತಾರೆ. ಆದರೆ ಉನ್ನತ ಪ್ರೋಟಿನ್ ಇರುವ ಡಯಟ್‌ನಲ್ಲಿ ಕಾರ್ಬೋಹೈಡ್ರೇಟ್‌ಗಳು ಅತಿಯಾಗಿ ಕಡಿಮೆಯಾಗಿರುತ್ತವೆ. ತಾಜಾ ಹಣ್ಣುಗಳು, ತರಕಾರಿಗಳು ಮತ್ತು ಧವಸ ಧಾನ್ಯಗಳು ಕೂಡ ಈ ಆಹಾರದಿಂದ ಹೊರಗೆಯೇ ಇರುತ್ತವೆ. ಇದಕ್ಕೆ ಬದಲಾಗಿ ಸ್ಯಾಚುರೇಟೆಡ್ ಕೊಬ್ಬಿರುವ ಆಹಾರ ಸೇವಿಸುವುದರಿಂದ ಕೊಲೆಸ್ಟರಾಲ್ ಪ್ರಮಾಣ ಅಧಿಕವಾಗಿಬಿಡುತ್ತದೆ. ಉತ್ತಮ ಕಾರ್ಬೋಹೈಡ್ರೇಟ್‌ಗಳನ್ನು ನಿಮ್ಮ ಆಹಾರದಿಂದ ಹೊರಗಿಡುವುದರಿಂದ ರೋಗದ ವಿರುದ್ಧ ಹೋರಾಡುವ ಪ್ರಭಾವೀ ಅಂಶಗಳನ್ನು ನೀವು ಕಳೆದುಕೊಳ್ಳುತ್ತೀರಿ. ಹಾಗಾಗಿ ಕಾರ್ಬೋಹೈಡ್ರೇಟ್‌ಗಳನ್ನು ಸಂಪೂರ್ಣವಾಗಿ ಹೊರಗಿಡಬೇಡಿ. ಉತ್ತಮ ಅಂಶಗಳನ್ನು ಆಹಾರದಲ್ಲಿ ಸೇರಿಸಿಕೊಂಡು ಅನಗತ್ಯವಾದುವನ್ನು ಬಿಟ್ಟುಬಿಡಿ.

ಧವಸ ಧಾನ್ಯಗಳ ಕುರಿತ ವಾಸ್ತವಾಂಶ

ಊಟದ ಪ್ರಮಾಣವೂ ಮುಖ್ಯವೇ!

"ಮಿತಿಮೀರಿ ತಿನ್ನುವವನು ಹಂದಿಯಂತೆ

ಸ್ಥೂಲದೇಹದ ಸುಖದಲ್ಲಿ ಹಿಗ್ಗಿದವನು ಸೂಕರದ ಹಾಗೆ"

ಎಂದು ಅಲ್ಲಪ್ರಭು ಹೊಟ್ಟೆಬಾಕರನ್ನು ಲೇವಡಿ ಮಾಡುತ್ತಾರೆ!

ಬೆಳಗಿನ ಉಪಾಹಾರವಾಗಿ ನಾವು ಕಾರ್ಬೋಹೈಡ್ರೇಟ್ ಅಂಶಗಳಿರುವ ಆಹಾರವನ್ನು ಸೇವಿಸಬೇಕು ಎಂದುಕೊಂಡಾಗ ಬಿಳಿ ಬ್ರೆಡ್, ಸಕ್ಕರೆ ಅಂಶವಿರುವ ಉಪಾಹಾರದ ಧಾನ್ಯಗಳು(ಸಿರೆಲ್ಸ್) ಅಥವಾ ಇತರ ಅತಿಯಾಗಿ ಸಂಸ್ಕರಿಸಿದ ಆಹಾರವನ್ನೇ ಬಳಸಿಕೊಳ್ಳುತ್ತೇವೆ. ಸಕ್ಕರೆ ಮತ್ತು ಬಿಳಿ ಹಿಟ್ಟಿನಲ್ಲಿ ಸಿದ್ಧವಾದ ಆಹಾರಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇರುತ್ತದೆ. ಆದರೆ ವೈಜ್ಞಾನಿಕ ಅಧ್ಯಯನಗಳ ಪ್ರಕಾರ ಬೆಳಗಿನ ಉಪಾಹಾರವಾಗಿ ಪೂರ್ಣ ಪ್ರಮಾಣದ ಧಾನ್ಯಗಳನ್ನು ಸೇವಿಸುವುದೇ ಉತ್ತಮ ಉಪಾಯವಾಗಿದೆ.

17ನೇ ಶತಮಾನದಲ್ಲಿ ಆದ ಹಲವಾರು ಆವಿಷ್ಕಾರಗಳ ಪರಿಣಾಮವಾಗಿ ನಾವಿಂದು ಇಡೀ ಧಾನ್ಯವನ್ನು ಸೇವಿಸುವುದನ್ನು ಬಿಟ್ಟಿದ್ದೇವೆ. ಧಾನ್ಯಗಳನ್ನು ಹಿಟ್ಟಿನ ರೂಪಕ್ಕೆ ತರುತ್ತಿದ್ದೇವೆ. ಅದರಿಂದ ತಯಾರಾದ ಕಾಯ್ಬ್ರೆಡ್ ಅನೇಕರಿಗೆ ಬೆಳಗಿನ ಆಹಾರದಲ್ಲಿ ಅತ್ಯಗತ್ಯವಾಗಿಬಿಟ್ಟಿದೆ. ಕಪ್ಪು ಬ್ರೆಡ್ ಬಡವರ ಆಹಾರವಾಗಿದೆ. ಆದರೆ ಶ್ರೀಮಂತರು ಆ ಮೂಲಕ ತಾವು ಉತ್ತಮ ಆಹಾರವನ್ನು ತೊರೆಯುತ್ತಿದ್ದೇವೆ ಎನ್ನುವುದನ್ನು ಮರೆಯುತ್ತಿದ್ದಾರೆ. ಕಾರ್ಖಾನೆಗಳಲ್ಲಿ ಅಕ್ಕಿ ಹುಡಿ ಮಾಡುವಾಗ ಅದರ ಹೊಟ್ಟನ್ನು ನಿವಾರಿಸಲಾಗುತ್ತದೆ. ಯಾವುದೇ ಧಾನ್ಯವಾದರೂ ಅದರ ಹೊರಗಿನ ಪದರವನ್ನು ನಿವಾರಿಸಿ ಒಳಗಿನ ತಿರುಳನ್ನು ಮಾತ್ರ ನಯವಾಗಿ ಹುಡಿ ಮಾಡಿಕೊಡಲಾಗುತ್ತದೆ. ಹೀಗೆ ಮಾಡುವುದರಿಂದ ಸಂಪೂರ್ಣ ಧಾನ್ಯದಿಂದ ಅದರ ಪೌಷ್ಟಿಕ ಅಂಶಗಳನ್ನೇ ನಾವು ನಿವಾರಿಸುತ್ತಿದ್ದೇವೆ. ಮುಖ್ಯವಾಗಿ ವಿಟಮಿನ್ ಬಿ ಮತ್ತು ಲವಣಗಳು ಹಾಗೂ ಪ್ರೋಟಿನ್ ಅಂಶಗಳನ್ನು ನಿವಾರಿಸಿಕೊಂಡು ಸೇವಿಸುತ್ತಿದ್ದೇವೆ.

ಮುಂದುವರಿಯುವುದು...

ಕೀಲುನೋವು / ಸಂಧಿವಾತ ಮತ್ತು ಪರಿಹಾರಗಳು

– ಡಾ. ಸಂದೀಪ್ : "ಆರೋಗ್ಯ ಧಾಮ" ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರಗಳು

ಇತ್ತೀಚಿನ ದಿನಗಳಲ್ಲಿ ಎಡಬಿಡದೇ ಕಾಡುತ್ತಿರುವ ತೊಂದರೆ ಕೀಲುನೋವು. ಇದರಿಂದ ದೈನಂದಿನ ಚಟುವಟಿಕೆಗಳಲ್ಲಿ ನೋವಿನಿಂದ ಬಳಲುವಂತಾಗುತ್ತದೆ.

ಕೀಲು ನೋವಿನ ಪ್ರಕಾರಗಳು:

- **ಆರ್ಥರೈಟಿಸ್** : ಸಾಮಾನ್ಯ ಕೀಲುನೋವು.
- **ಆಸ್ಟಿಯೋ ಆರ್ಥರೈಟಿಸ್** : ಸಂಧಿಗಳಲ್ಲಿನ ಎಲುಬುಗಳು ಸವಕಳಿ ಯಾಗುವುದು. ಎಲುಬುಗಳು ಒಂದಕ್ಕೊಂದು ಕೂಡುವುದು.
- **ರುಮಾಟಾಯ್ಡ್ ಆರ್ಥರೈಟಿಸ್** : ಕೀಲುಗಳ ನಡುವೆ ಎಣ್ಣೆಯಂಥಹ ವಸ್ತು ಕಡಿಮೆಯಾಗಿ ಸಣ್ಣ ಕೀಲುಗಳು ನಂತರ ದೊಡ್ಡ ಕೀಲುಗಳಲ್ಲಿ ನೋವು ಬರುವ ಸಾಧ್ಯತೆ ಇದೆ.
- **ಗೌಟ ಆರ್ಥರೈಟಿಸ್** : ಶರೀರದಲ್ಲಿ ಪ್ರೋಟೀನ್ ಅಂಶದಿಂದ ಕಾಲಿನ ಗಂಟುಗಳಲ್ಲಿ ನೋವು ಕಾಣಿಸಿಕೊಂಡು ನಡೆಯಲು ಕಷ್ಟಸಾಧ್ಯವಾಗುತ್ತದೆ.

ಸಂಧಿ ನೋವಿನ ಕಾರಣಗಳು :

- ವ್ಯಾಯಾಮ ರಹಿತ ಜೀವನ ಕ್ರಮ.
- ಅತಿಯಾಗಿ ಕರಿದ ಪದಾರ್ಥಗಳ ಸೇವನೆ. ಅತಿಯಾಗಿ ಮಾಂಸಾಹಾರ ಸೇವನೆ. ದುಶ್ಚಟಗಳಾದ ತಂಬಾಕು ಮತ್ತು ಅತಿಯಾದ ಮದ್ಯಪಾನ ಸೇವನೆ. ಸರಿಯಾದ ಆಹಾರ ಕ್ರಮ ಮತ್ತು ವ್ಯಾಯಾಮಗಳಿಲ್ಲದೆ ಶರೀರವು ಸ್ಥೂಲತೆಗೆ ಒಳಗಾಗಿ ಕೀಲುಗಳ ಮೇಲೆ ಪರಿಣಾಮ ಬೀಳಬಹುದು.
- ಅತಿಯಾಗಿ ಸ್ಟಿರಾಯ್ಡ್, ಹಾರ್ಮೋನ್ಸ್ ಮತ್ತು ನಿದ್ರೆ ಮಾತ್ರೆಗಳ ಸೇವನೆ.
- ಅತಿಯಾದ ವ್ಯಾಯಾಮಗಳು ಕೂಡ ಕೀಲು ನೋವುಗಳನ್ನು ತರಬಹುದು.

ಪರಿಹಾರಗಳು:

ಈ ಮೇಲಿನ ಎಲ್ಲಾ ಕಾರಣಗಳು ಇವತ್ತಿನ ದಿನಮಾನಗಳಲ್ಲಿ ಬಹಳ ಜನರಲ್ಲಿ ಕಾಣಿಸುತ್ತದೆ. ಗೃಹ ಚಿಕಿತ್ಸೆಗಳು ಸಂಧಿವಾತಗಳಿಗೆ ತಾತ್ಕಾಲಿಕವಾಗಿ ನೋವನ್ನು ಕಡಿಮೆ ಮಾಡುತ್ತದೆ. ಅದರ ಬದಲು 10–15 ದಿನಗಳ ಕಾಲ ಒಳರೋಗಿಗಳ ಅಥವಾ ಹೊರರೋಗಿಗಳ ವಿಭಾಗದಲ್ಲಿ ಯೋಗ ಮತ್ತು ಪ್ರಕೃತಿ ಚಿಕಿತ್ಸೆ ತೆಗೆದುಕೊಂಡಾಗ ಪರಿಣಾಮಕಾರಿಯಾಗುತ್ತದೆ. ಕೆಳಗಿನ ನಿಯಮಗಳು ಪಾಲಿಸಿದಲ್ಲಿ ನಿಮಗೆ ಬರುವ ಸಂಧಿವಾತ ಗಳನ್ನು ತಡೆಗಟ್ಟಲು ಕೂಡ ಸಹಾಯವಾಗುತ್ತದೆ.

- ಎಣ್ಣೆ, ಜಿಡ್ಡು ರಹಿತ ಆಹಾರ, ಮಾಂಸಹಾರಗಳನ್ನು ತ್ಯಜಿಸಬೇಕು.
- ಸಕ್ಕರೆ ಅಂಶ ಕಡಿಮೆ ಮಾಡಿ, ತರಕಾರಿಗಳ ಸೇವನೆ.
- ನೋವುನಿವಾರಕ ಮಾತ್ರೆಗಳ ಬಳಕೆ ಕಡಿಮೆ ಮಾಡಿ.
- ನೋವಿರುವ ಅಂಗಗಳ ಎಣ್ಣೆ ಮಸಾಜು ಮಾಡುವುದು.
- 10–15 ದಿನಗಳ ಅಕ್ಯುಪಂಚರ್ ಚಿಕಿತ್ಸೆ ಪರಿಣಾಮಕಾರಿ.
- ಎಕ್ಕದ ಎಲೆಗೆ ಹರಳೆಣ್ಣೆಯನ್ನು ಹಚ್ಚಿ ಬಿಸಿ ಮಾಡಿ ನೋವಿನ ಸಂಧಿಗಳಿಗೆ ಲೇಪಿಸಿ 30 ನಿಮಿಷಗಳ ಕಾಲ ಅದರ ಮೇಲೆ ಬಟ್ಟೆ ಕಟ್ಟಬೇಕು.
- ಸಾಸಿವೆಯನ್ನು ಪುಡಿಮಾಡಿ ಬಿಸಿ ನೀರಿನಲ್ಲಿ ಕುದಿಸಿ ಹದ ಬಿಸಿ ಇರುವ ಈ ಸಾಸಿವೆ ಮಿಶ್ರಣವನ್ನು ನೋವಿನ ಸಂಧಿಗಳಿಗೆ ಲೇಪಿಸಬೇಕು.
- ರಾತ್ರಿ ಮಲಗುವ ಮುನ್ನ ಕಾಲನ್ನು ಬಿಸಿನೀರಿನಲ್ಲಿ ಕಲ್ಲುಪ್ಪನ್ನು ಬೆರಸಿ ಹತ್ತರಿಂದ ಹದಿನೈದು ನಿಮಿಷ ಇಟ್ಟುಕೊಳ್ಳಬೇಕು.
- ಜೀರ್ಣಕ್ರಿಯೆ ಸರಿಯಾಗುವಂತೆ ನೋಡಿಕೊಳ್ಳಬೇಕು.
- ಯೋಗ, ಫಿಸಿಯೋತೆರಪಿ ಚಿಕಿತ್ಸೆಗಳು ಬಹಳ ಫಲಕಾರಿ.
- ಶುದ್ಧ ಆಹಾರ ಕ್ರಮ, ನಿದ್ರೆ ಹಾಗೂ ನಿಯಮಿತ ವ್ಯಾಯಾಮವನ್ನು ಒಗ್ಗೂಡಿಸಿಕೊಳ್ಳಬೇಕು.

Chronology of events of personal & Public life of Mahatma Gandhi

(year wise - from 1869)

1896 February 2, 3, 4. Addressed letters to the Press appealing for aid to Indian Famine Relief Fund and issued circulars in English and some Indian languages for the purpose.

February 6. Appealed to the clergymen of Durban for rallying support or Famine relief.

March 26. Presented to the Natal legislatures petitions against anti-Indian Bills pending before them.

May 7. Informed Chairman of Central Famine Relief Committee, Calcutta, of the collection by Natal Indians of £1,539-1-9 for famine relief.

June 9. Cabled Hunter regarding the enactment of the Quarantine, Dealer's Licences, Immigration Restriction and Uncovenanted Indians Protection Bills.

July 2. Petitioned Mr Chamberlain regarding the four anti-Indian measures.

July 10. Addressed circular letter to public men in Britain and India regarding the discriminatory laws.

September 11. Appeared in defence of Indians charged with being prohibited immigrants, and had them discharged.

September 14. Indian hospital opened in Durban with Parsi Rustomji's munificence and under Dr Booth's supervision, in which, later, Gandhi served for two hours a day as an assistant.

1898 February 28. Wrote to the British Agent at Pretoria, informing him of the Transvaal Indians' intention to file a Test Case in regard to Law 3 of 1885.

March 2. Appeared in the Somnath Maharaj's case for a retail licence in respect of trading premises.

August 8. The Transvaal High Court ruled in Test Case that no distinction could be made between places of residence and business premises, and that Indians must reside as well as trade only in Locations specified by the Government.

September 14. Gandhi pleaded unsuccessfully in Dada Osman's case before Durban Town Council against refusal of trading licences to Indians on racial grounds.

To be continued...

Courtesy : Mahatma Gandhi A Chronology
Published by : Ministry of Information & Broadcasting, Govt. of India
Collection by : Dr. Poornima Jogi, N.S.S.

ದಕ್ಷಿಣ ಆಫ್ರಿಕಾದಲ್ಲಿ ಮೋಹನದಾಸ ಕರಮಚಂದ ಗಾಂಧಿ

– ಸಂಗ್ರಹ : ಮಹೇಶ್




ಸೌತ್ ಆಫ್ರಿಕಾದ ಟಾಲ್‌ಸ್ಟಾಯ್ ಫಾರ್ಮ್‌ನಲ್ಲಿ (1910) ಭಾರತೀಯರೊಂದಿಗೆ ಗಾಂಧೀಜಿ



1899–1900ರ ದಕ್ಷಿಣ ಆಫ್ರಿಕಾ ಬೋರ್ ಯುದ್ಧದ ಸಂದರ್ಭದಲ್ಲಿ ಇಂಡಿಯನ್ ಅಂಬ್ಯುಲೆನ್ಸ್ ಸೇನೆಯಲ್ಲಿ ಗಾಂಧಿ



ದಕ್ಷಿಣ ಆಫ್ರಿಕಾದಲ್ಲಿನ ಭಾರತೀಯರ ಜೊತೆ ಗಾಂಧಿ



ಸೌತ್ ಆಫ್ರಿಕಾದ ಟಾಲ್‌ಸ್ಟಾಯ್ ಫಾರ್ಮ್‌ನ ಸತ್ಯಾಗ್ರಹ ಕಟ್ಟಡದಲ್ಲಿ ಗಾಂಧೀಜಿ



ಗಾಂಧೀಜಿ ಅವರ ದಕ್ಷಿಣ ಆಫ್ರಿಕಾದಲ್ಲಿನ ಕಚೇರಿ



ಸೌತ್ ಆಫ್ರಿಕ ಹಾಗೂ ಭಾರತೀಯ ಸತ್ಯಾಗ್ರಹಿಗಳೊಂದಿಗೆ ಗಾಂಧೀಜಿ



ದಕ್ಷಿಣ ಆಫ್ರಿಕಾದ ಜೋಹನ್ಸ್‌ಬರ್ಗ್‌ನಲ್ಲಿನ ಸಹೋದ್ಯೋಗಿ ಮಿತ್ರರೊಂದಿಗೆ ಗಾಂಧಿ

ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ನುಡಿಗಳು

- ಡಾ. ವೂಡೇ ಪಿ. ಕೃಷ್ಣ

ಕರ್ನಾಟಕದ ಗಡಿಭಾಗವಾದ ರಾಯದುರ್ಗದಲ್ಲಿ ಆಯೋಜಿಸಿದ್ದ ಆಂಧ್ರ ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರ ಅಧ್ಯಕ್ಷೀಯ ಭಾಷಣದ ಆಯ್ದ ಭಾಗಗಳು. ಕನ್ನಡ ಸಾಹಿತ್ಯ ಪರಿಷತ್ತು ಆರಯೋಜಿಸಿದ 4ನೇ ಕನ್ನಡ ಸಾಹಿತ್ಯ ಸಮ್ಮೇಳನವು ಫೆಬ್ರವರಿ 2014ರಲ್ಲಿ ನಡೆದಿತ್ತು.

ಕನ್ನಡ ಹಾಗೂ ತೆಲುಗು ಭಾಷೆಗಳ ಬಾಂಧವ್ಯ ಪ್ರಾಚೀನವಾಗಿದ್ದು ಈ ಭಾಷೆಗಳ ಅಂತರ್‌ಶಿಸ್ತೀಯ ಅಧ್ಯಯನ ಹಾಗೂ ಸಂಶೋಧನೆಗೆ ಭಾಷಾ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಬೇಕಾಗಿದೆ. ಪ್ರಾದೇಶಿಕ ಅಸಮತೋಲನವನ್ನು ಹೋಗಲಾಡಿಸಲು ಬರಗೂರು ರಾಮಚಂದ್ರಪ್ಪನವರ ವರದಿಯನ್ನು ಅನುಷ್ಠಾನಗೊಳಿಸಿ ಗಡಿನಾಡ/ ಹೊರನಾಡ ಕನ್ನಡಿಗರು ನೆಮ್ಮದಿಯಿಂದ ಬದುಕುವ ವಾತಾವರಣ ಸೃಷ್ಟಿಸಬೇಕಾದ ಅಗತ್ಯವಿದೆ. ಈ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ಆಂಧ್ರ ಗಡಿನಾಡ ಘಟಕ ಕ.ಸಾ.ಪ. ಅಧ್ಯಕ್ಷರಾದ ಪ್ರೊ. ಅಗ್ರಹಾರ ಎಚ್.ಬಿ. ಶಿವಕುಮಾರ್‌ರವರು ದಿನಾಂಕ 12-12-2013ರಂದು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿ ಗಡಿನಾಡ ಸಮಸ್ಯೆಗಳ ಕಡೆ ಸರ್ಕಾರದ ಗಮನ ಸೆಳೆಯುವ ಪ್ರಯತ್ನ ಮಾಡಿದ್ದಾರೆ. ಇಂದು ಕೇರಳಕ್ಕೆ ಸೇರಿರುವ ಹಿಂದೊಮ್ಮೆ ನಮ್ಮ ಕರ್ನಾಟಕದ ಭಾಗವೇ ಆಗಿದ್ದ, ಕನ್ನಡಿಗರೇ ಹೆಚ್ಚಿಗೆ ವಾಸಿಸುವ ಕಾಸರಗೋಡನ್ನು ಕರ್ನಾಟಕಕ್ಕೆ ಸೇರಸಬೇಕೆಂದು, ಆ ಗಡಿಭಾಗದ ಕನ್ನಡ ಉಳಿಸುವಲ್ಲಿ ಹೋರಾಟ ಮಾಡುತ್ತಾ ಬಂದಿರುವ ಕನ್ನಡದ ಕಟ್ಟಾಳು, ಕನ್ನಡದ ಹಿರಿಯ ಸಾಹಿತಿ ಕೈಯಾರ ಕಿಞ್ಞಣ್ಣ ರೈ ರವರ ಹೆಸರಿನಲ್ಲಿ ಪ್ರಶಸ್ತಿ ನೀಡಿ ಕನ್ನಡಪರ ಹೋರಾಟಗಾರರನ್ನು ಗೌರವಿಸಬೇಕಾಗಿದೆ. ಅಲ್ಲದೆ ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಔದ್ಯೋಗಿಕ ಪದವಿ ತರಗತಿಗಳಲ್ಲಿ (ಎಂ.ಬಿ.ಬಿ.ಎಸ್., ಬಿ.ಇ. ಮುಂತಾದವು) ಕನ್ನಡ ಒಂದು ಕಡ್ಡಾಯ ಪರೀಕ್ಷಾ ವಿಷಯವಾಗಿ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಜಾರಿಗೆ ತರಬೇಕಾಗಿದೆ.

ಗಾಂಧೀಜಿಯವರ ಆಶಯದಂತೆ ಬಹುಸಂಖ್ಯಾತ ಜನರು ವಾಸಿಸುವ ಹಳ್ಳಿಗಳನ್ನು ಉದ್ಧಾರ ಮಾಡುವ ಮೂಲಕ ದೇಶದ ಉದ್ಧಾರವನ್ನು ಮಾಡಬೇಕಾಗಿದೆ. ರೈತರ ಉದ್ಧಾರವಾಗಬೇಕಾದರೆ ಯಾವುದಾದರೂ ಜಲಮೂಲದಿಂದ ರೈತರ ಬಾಳಿನಲ್ಲಿ ಹಸಿರು ಮೂಡಿಸಬೇಕಿದೆ. ನಾನು ಭಾರತೀಯ ಇಂಜಿನಿಯರುಗಳ ಸಂಘದ ರಾಷ್ಟ್ರಾಧ್ಯಕ್ಷನಾಗಿದ್ದಾಗ ಗಂಗಾ ಕಾವೇರಿ ನದಿಯ ಅತಿವೃಷ್ಟಿಯಿಂದ ಕೂಡಿದ ಜೋಡಣೆಯ ವಿಷಯವನ್ನು ಪ್ರಸ್ತಾಪಿಸಿದ್ದೆ. ನದಿಗಳ ನೀರನ್ನು ಅನಾವೃಷ್ಟಿ, ಕ್ಷಾಮದ ನದಿಗಳ ಕಡೆ ಹಾಯಿಸುವುದರಿಂದ ನೀರು ಸಮುದ್ರದ ಪಾಲಾಗುವುದು ತಪ್ಪುವುದಲ್ಲದೇ ದೇಶದ ಸಂಪತ್ತು ಸಮೃದ್ಧಗೊಳ್ಳುತ್ತದೆ. ಪ್ರಪಂಚದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಾದ ಅಮೇರಿಕ, ರಷ್ಯಾ, ಚೈನಾ ಮತ್ತು ಇತರ ದೇಶಗಳು 2000 ದಿಂದ 3500 ಕಿ.ಮೀ. ನಾಲೆಗಳನ್ನು ನಿರ್ಮಿಸಿ ಜೀವನದಿಗಳ ಜಲಸಂಪತ್ತನ್ನು ಉಪಯೋಗಿಸಿರುವುದರಿಂದ ಇಂದು ಆ ರಾಷ್ಟ್ರಗಳು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಾಗಿವೆ. ಹಾಗೆಯೇ ನಮ್ಮ ದೇಶದಲ್ಲಿ ಗಂಗಾ-ಕಾವೇರಿ ನದಿಗಳ ಜೋಡಣೆಯನ್ನು ಮಾಡಿ ರೈತರ ಉದ್ಧಾರ ತನ್ಮೂಲಕ ದೇಶದ ಉದ್ಧಾರವನ್ನು ಮಾಡುವ ನಿಟ್ಟಿನಲ್ಲಿ ನಮ್ಮ ರಾಜಕೀಯ ನಾಯಕರು ತಮ್ಮ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕಿದೆ. ಕನ್ನಡ ಭಾಷೆಯನ್ನು ಪ್ರೀತಿಸುವುದು ಕನ್ನಡಿಗರಾದ ನಮ್ಮೆಲ್ಲರ ಕರ್ತವ್ಯ. ತಾಯಿ ಭಾಷೆ ರಕ್ಷಣೆ ನಮ್ಮ ನೈತಿಕ ಹೊಣೆ. ಭಾಷೆಯ ಸಾರ್ವಭೌಮತ್ವಕ್ಕೆ ಧಕ್ಕೆ ಬಾರದಂತೆ ಕನ್ನಡಪರ ಸಂಘಟನೆಗಳು ಕಾವಲು ನಾಯಿಯಂತೆ ದುಡಿಯಬೇಕಾದ ಅನಿವಾರ್ಯತೆಯಿದೆ. ಇಂದು ಭ್ರಷ್ಟಾಚಾರ. ತನ್ನ ಕಬಂಧ ಬಾಹುವನ್ನು ಇಡೀ ದೇಶದ ತುಂಬೆಲ್ಲಾ ಚಾಚುತ್ತಿರುವ ಈ ಸಂದರ್ಭವಲ್ಲಿ ದೇಶವನ್ನು ದುರ್ಬಲ ಮಾಡುತ್ತಿರುವ ಭ್ರಷ್ಟಾಚಾರದ ವಿರುದ್ಧ ಕನ್ನಡಿಗರು ಎದ್ದು ನಿಲ್ಲಬೇಕಿದೆ. ಕನ್ನಡದ ಕೆಲಸ ಮಾಡುವ ಹಾಗೂ ಕನ್ನಡದ ಯುವ ಉದಯೋನ್ಮುಖ ಬರಹಗಾರರನ್ನು ಶಾಲೆ ಕಾಲೇಜು ಹಂತಗಳಲ್ಲೇ ಗುರುತಿಸಿ ಪ್ರೋತ್ಸಾಹಿಸುವ ಕೆಲಸವನ್ನು ಕರ್ನಾಟಕ ಮತ್ತು ಆಂಧ್ರಪ್ರದೇಶ ಸರ್ಕಾರಗಳು ಮಾಡಬೇಕಿದೆ. ನನ್ನೆಲ್ಲ ಸಮಾಜಸೇವೆ, ಶಿಕ್ಷಣ, ಸಾಹಿತ್ಯ ಚಟುವಟಿಕೆಗಳಿಗೆ ಒತ್ತಾಸೆಯಾಗಿರುವ ಕೆಲವರನ್ನಾದರೂ ಇಂತಹ ಸಂತಸದ ಸಂದರ್ಭದಲ್ಲಿ ನೆನೆಯದಿದ್ದರೆ ಕ್ರಿಯಾಲೋಪವಾಗುತ್ತದೆ. ನನ್ನೆಲ್ಲ ಚಟುವಟಿಕೆಗಳಿಗೆ ನೈತಿಕ ಬೆಂಬಲವಾಗಿ ನಿಂತಿರುವ ಬಾಳಸಂಗಾತಿ ಶ್ರೀಮತಿ ಸವಿತಾ ನನ್ನೆಲ್ಲ ಉಪಾಧ್ಯಾಪಗಳನ್ನು ಸಹಿಸಿಕೊಂಡು ಸಹಕರಿಸಿದ್ದಾರೆ. ನಮ್ಮ ವಂಶದ ಹಿರೀಕರಾದ ಡಬ್ಲ್ಯೂ ಎಚ್. ಹನುಮಂತಪ್ಪ (ಸೀನಿಯರ್), ಡಬ್ಲ್ಯೂ ಎಚ್. ಹನುಮಂತಪ್ಪ (ಜೂನಿಯರ್), ತ0ದೆಯವರಾದ ಡಬ್ಲ್ಯೂ.ಎಚ್. ಪುಟ್ಟಯ್ಯ, ತಾಯಿಯವರಾದ ದೊಡ್ಡಮ್ಮಯ್ಯ, ಅಣ್ಣತಮ್ಮಂದಿರು- ಅಕ್ಕಂದಿರನ್ನು ಪ್ರೀತಿಯಿಂದ ನೆನೆಯುತ್ತೇನೆ. ಹಾಗೇ ಸ್ವಾಮಿ ಸುರೇಶಾನಂದರು, ಸ್ವಾಮಿ ಜಗದಾತ್ಮಾನಂದರು, ಸ್ವಾಮಿ ಮುಕ್ತಿದಾನಂದರು, ಸ್ವಾಮಿ ವೀರೇಶಾನಂದ ಸರಸ್ವತಿ, ಸ್ವಾಮಿ ಓಂಕಾರನಂದ, ಎಚ್.ಎಸ್. ದೊರೆಸ್ವಾಮಿ, ಕೆ.ಎಸ್. ನಾರಾಯಣಸ್ವಾಮಿ, ಡಾ. ಎಚ್. ಶ್ರೀನಿವಾಸಯ್ಯ, ಐ.ಎನ್.ಎ. ರಾಮರಾವ್, ಕೆ.ಸಿ. ಪುಟ್ಟನರಸಯ್ಯ, ಕೆ.ಎಂ. ನಂಜಪ್ಪ, ಸಿ.ಎನ್.ಎಸ್. ರಾಜು, ಯು.ಆರ್. ಸಭಾಪತಿ, ಎಂ.ಪಿ. ಚೌಡಯ್ಯ, ಡಿ.ವಿ. ನಾಗಭೂಷಣ, ಡಾ. ಗೋಪಾಲನ್ ಜಗದೀಶ್, ಡಾ. ಎಲ್.ಎ. ಮುರಳಿಕೃಷ್ಣ ರೆಡ್ಡಿ, ಕೆ. ಗೋಪಾಲಕೃಷ್ಣನ್, ಡಾ. ಮಲ್ಲೇಪುರಂ ಜಿ. ವೆಂಕಟೇಶ್, ಪ್ರೊ. ಜಿ.ಬಿ. ಶಿವರಾಜು, ಡಿ.ಕೆ. ಕೋದಂಡರಾಮ್, ಎನ್. ಆರ್. ಪಂಡಿತಾರಾಧ್ಯ ಮತ್ತು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಧರ್ಮದರ್ಶಿ ವರ್ಗ ರೆಡ್ ಕ್ರಾಸ್‌ನ ರಾಜು ಚಂದ್ರಶೇಖರ್, ಡಾ. ಎನ್.ಜಿ. ನಾರಾಯಣ, ಕೆ. ಎಂ. ನಾಗರಾಜ್, ಎ. ಆರ್. ಶ್ರೀನಿವಾಸಯ್ಯ, ಡಾ. ಹೆಚ್. ಎನ್. ಮುರಳೀಧರ್, ಪ್ರೊ. ಕೆ. ನರಹರಿ, ಡಾ. ಜೀವನ್ ಕುಮಾರ್, ಸಿದ್ದಾರ್ಥ ಶರ್ಮ, ಸಾಹಿತ್ಯವಲಯದ ಆಪ್ತರಾದ ಡಾ. ದೊಡ್ಡರಂಗೇಗೌಡ, ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಪ್ರೊ. ನೋಟಕಾರ್ ಸತೀಶ್, ಡಾ. ಕೆ.ವಿ. ಮುದ್ದವೀರಪ್ಪ, ಡಾ. ಕೆ. ನಾಗಭೂಷಣ, ಪ್ರೊ. ರಾಮಲಿಂಗೇಶ್ವರ, ಗೋವಿಂದಹಳ್ಳಿ ದೇವೇಗೌಡ, ವಿನಯ್ ಭಟ್, ರು. ಬಸಪ್ಪ, ರಾಣಿ ಗೋವಿಂದರಾಜು, ಕೆ. ಟಿ. ಸತೀಶ್‌ರೆಡ್ಡಿ, ಪ್ರೊ. ಪ್ರತಾಪಲಿಂಗಯ್ಯ ಮುಂತಾದವರನ್ನು ಹೃತೂರ್ವಕವಾಗಿ ನೆನೆಯುತ್ತೇನೆ. ಹಾಗೆಯೇ ಸಮ್ಮೇಳನ ಯಶಸ್ವಿಯಾಗಲು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಕಾರಣರಾದ ಎಲ್ಲರಿಗೂ ಹಾಗೂ ಈ ನೆಲದ ಎಲ್ಲ ನನ್ನ ಕನ್ನಡದ ಸಹೃದಯ ಬಂಧುಗಳಿಗೂ ವಂದಿಸುತ್ತಾ ನನ್ನ ಮಾತು ಮುಗಿಸುತ್ತೇನೆ.

ಗಾಂಧೀವಾದಿ : ಡಾ. ಎಸ್. ಎನ್. ಸುಬ್ಬರಾವ್ (07.02.1929)

– ಇಂದಿರಾ ಕೃಷ್ಣಪ್ಪ

ಹಿರಿಯ ಗಾಂಧಿವಾದಿಗಳು, ಗಾಂಧಿ ಸೇವಾ ಪ್ರಶಸ್ತಿ ಪುರಸ್ಕೃತರಾದ ಶ್ರೀ ಸೇಲಂ ನಂಜುಂಡಯ್ಯ ಸುಬ್ಬರಾವ್ ಅವರು ಬೆಂಗಳೂರಿನಲ್ಲಿ ಜನಿಸಿದರು. ವಕೀಲಿ ವೃತ್ತಿಯಲ್ಲಿದ್ದ ತಂದೆ ಶ್ರೀ ನಂಜುಂಡಯ್ಯನವರಿಗೆ ನಾಲ್ಕು ಜನ ಮಕ್ಕಳಲ್ಲಿ ಇವರೂ ಒಬ್ಬರು. ತಮ್ಮ ಶಾಲಾ ಅವಧಿಯಲ್ಲೇ ಗಾಂಧಿ ತತ್ವಕ್ಕೆ ಮಾರುಹೋದ ಸುಬ್ಬಾರಾವ್ ಆ ದಿನಗಳಿಂದಲೇ ಖಾದಿ ಬಟ್ಟೆಗೆ ಮಾರು ಹೋದವರು. ಚಿತ್ರಕೂಟ – ಪೋರ್ಟ್ ಬ್ಲೇರ್ ಇರಲಿ, ಚಳಿ–ಸುರಿಯುವ ಮಳೆ ಏನೇ ಇರಲಿ... ಅವರ ಜೀವನದ ಕೊನೆ ಘಳಿಗೆಯವರೆಗೂ ಸುಬ್ಬಾರಾವ್ ಅವರ ಖಾದಿ ಅಂಗಿ ಮತ್ತು ಚಡ್ಡಿಯ ಗಾಂಧಿ ದಿರಿಸು ಬದಲಾಗಲಿಲ್ಲ. ತಮ್ಮ ಹದಿಮೂರನೆಯ ವಯಸ್ಸಿನಲ್ಲೇ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುತ್ತಾ 1942ರಲ್ಲಿ ತಮ್ಮ ಗೆಳೆಯರೊಡಗೂಡಿ "ಭಾರತ ಬಿಟ್ಟು ತೊಲಗಿ" ಎಂದು ಗೋಡೆ ಬರಹಗಳನ್ನು ಬರೆದು ಪೋಲಿಸರ ಕಂಗೆಣ್ಣಿಗೆ ಗುರಿಯಾಗಿ ಬಂಧನಕ್ಕೊಳಪಟ್ಟರು. ಆನಂತರದ ದಿನಗಳಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯರಾದ ಇವರು ವಿದ್ಯಾರ್ಥಿ ಕಾಂಗ್ರೆಸ್ ಮತ್ತು ಸೇವಾದಳದಲ್ಲಿ ಸೇರ್ಪಡೆಯಾದರು. 'ಗಾಂಧಿ ಸಾಹಿತ್ಯ ಸಂಘ'ದ ಅಡಿಯಲ್ಲಿ ಕಾರ್ಮಿಕರ ಕಾಲೋನಿಗಳಲ್ಲಿ ದುಡಿಯುವ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡುತ್ತಾ ಅವರನ್ನು ಶಿಕ್ಷಿತರಾಗಿಸಿದರು. ವಕೀಲಿ ಪದವಿಯ ನಂತರ ಚಿತ್ರದುರ್ಗದಲ್ಲಿ ನಡೆದ ರಾಷ್ಟ್ರೀಯ ಸೇವಾದಳದ ಶಿಬಿರದಲ್ಲಿ ಭೇಟಿಯಾದ ಡಾ. ಎನ್.ಎಸ್. ಹರ್ಡೀಕರ್, ಸುಬ್ಬಾರಾವ್ ಅವರ ಜೀವನದ ಗತಿಯನ್ನೇ ಬದಲಿಸಿ ಬಿಟ್ಟರು. ಡಾ. ಹರ್ಡೀಕರ್ ಅವರಿಂದ ದೀಕ್ಷೆ ಪಡೆದು ಗಾಂಧಿತತ್ವ ಪ್ರಚಾರ ಯಾತ್ರೆ ಪ್ರಾರಂಭಿಸಿದ್ದ ಸುಬ್ಬಾರಾವ್ ನಂತರ ವಿರಮಿಸಿದ್ದೇ ಇಲ್ಲ. ಹಲವಾರು ಯುವ ಸಮಾವೇಶವನ್ನು ಆಯೋಜಿಸುತ್ತಿದ್ದ ಇವರ ಸೇವಾ ಮನೋಭಾವವನ್ನು ಜವಹರಲಾಲ್ ನೆಹರು, ಕಾಮರಾಜ್‌ರಂತಹ ಅನೇಕ ಗಣ್ಯರು ಶ್ಲಾಘಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಅಂದಿನ ಕೇಂದ್ರ ಸಚಿವರಾಗಿದ್ದ ಆರ್.ಆರ್. ದಿವಾಕರ ಅವರ ಸಲಹೆಯ ಮೇರೆಗೆ 'ಗಾಂಧಿ ಶಾಂತಿ ಪ್ರತಿಷ್ಠಾನ'ದ ಸದಸ್ಯರಾದರು. 1954ರಲ್ಲಿ ಕಗ್ರಾಸವಾಗಿದ್ದ ಚಂಬಲ್ ಕಣಿವೆಗೆ ಭೇಟಿ ನೀಡಿ ಅಲ್ಲಿನ ಯುವಕರಿಗೆ ಶಿಕ್ಷಣದ ಅರಿವು ಮೂಡಿಸಿದರು. ಸುಬ್ಬರಾವ್ ಅವರು ಮಧ್ಯಪ್ರದೇಶದ ಚಂಬಲ್‌ನಲ್ಲಿ ದೇಶದ ನಾನಾ ಭಾಗಗಳಿಂದ ಯುವಕ – ಯುವತಿಯರನ್ನು ಒಗ್ಗೂಡಿಸಿ 10 ತಿಂಗಳ ದೀರ್ಘಾವಧಿ 'ಆಶ್ರಮ ಶಿಬಿರ'ಗಳನ್ನು ಆಯೋಜಿಸಿದ್ದರು. ದೇಶದೆಲ್ಲೆಡೆ ಸಂಚರಿಸಿ ಅನೇಕ ಯುವ ಸಮಾವೇಶಗಳನ್ನು, ಅಧ್ಯಯನ ಶಿಬಿರಗಳನ್ನು ಆಯೋಜಿಸುತ್ತಾ ಗಾಂಧಿ ತತ್ವಗಳನ್ನು, ಶಿಕ್ಷಣದ ಮಹತ್ವವನ್ನು ಸಾರಿದರು.

ಲೋಕವನ್ನು ಕವಿದಿರುವ ಹಿಂಸಾಚಾರದ ಕತ್ತಲಲ್ಲಿ ಮುನ್ನಡೆಯ ಹಾದಿ ಕಾಣಲಾಗದವರ ಮುಂದೆ ಆಸೆಯ ದೀಪ ಹಿಡಿದು ಅವರು ಹೊರಟಿದ್ದರು. ಚಂಬಲ್ ಕಣಿವೆಯ ನಿರ್ದಯಿ ಡಕಾಯಿತರ ಮನದಲ್ಲಿ ಅಹಿಂಸೆಯ ಬೆಳಕು ಮೂಡಿಸಿದ್ದು ಇದೇ 'ಆಸೆಯ ದೀಪ'. ಚಂಬಲ್‌ನಲ್ಲಿ 'ಗಾಂಧಿ ಸೇವಾಶ್ರಮ' ಸ್ಥಾಪಿಸಿ, ಹಲವು ಪ್ರದೇಶಗಳಲ್ಲಿದ್ದ 654 ಡಾಕಾಯಿತರ ಮನವೊಲಿಸಿ ಮನಪರಿವರ್ತಿಸಿ, ಅವರ ನಾಯಕ ಮಾನ್ ಸಿಂಗ್ ಕಾನೂನಿಗೆ ಶರಣಾಗಿಸಿ ಅವರನ್ನು ಸಮಾಜಮುಖಿಯಾಗಿಸುವಲ್ಲಿ ಇವರ ಶ್ರಮ ಅಪಾರವಾದುದಾಗಿದೆ.




ನಂತರದ ದಿನಗಳಲ್ಲಿ ಚಂಬಲ್‌ನ ಸೇವಾಶ್ರಮದ ವತಿಯಿಂದ 47 ಹಳ್ಳಿಗಳ ನಾಗರಿಕರಿಗೆ ಖಾದಿ ಗ್ರಾಮೋದ್ಯೋಗದ ಶಿಬಿರಗಳು ಮತ್ತು ಗ್ರಾಮೀಣ ಜನತೆಯ ಶ್ರೇಯೋಭಿವೃದ್ಧಿಗೆ ಅನೇಕ ಶಿಬಿರಗಳನ್ನು ಹಮ್ಮಿಕೊಂಡು ಮೂರು ಸಾವಿರ ಕುಟುಂಬಗಳಿಗೆ ಚರಕಗಳನ್ನು ನೀಡಿ 5000ಕ್ಕೂ ಹೆಚ್ಚು ಜನರಿಗೆ ಸ್ವಯಂ ಉದ್ಯೋಗ ಕಲ್ಪಿಸಿದರು.

'ನ್ಯಾಷನಲ್ ಯೂಥ್ ಪ್ರಾಜೆಕ್ಟ್' ಸಂಸ್ಥೆಯನ್ನು ಸ್ಥಾಪಿಸಿ ಯುವಜನರ ಶ್ರೇಯೋಭಿವೃದ್ಧಿಗೆ ಸದಾ ತುಡಿಯುತ್ತ, ಯುವಜನಾಂಗಕ್ಕೆ ಮಾರ್ಗದರ್ಶಕರಾಗಿದ್ದರು. "ಈ ಹಿಂಸಾಚಾರ, ಭಯೋತ್ಪಾದನೆ, ಕೋಮುಗಲಭೆ ಸಂದರ್ಭದಲ್ಲಿ ಗಾಂಧಿವಾದದ ಪ್ರಸ್ತುತತೆಯ ಬಗ್ಗೆ ಚರ್ಚೆ ಮಾಡಬಹುದಾಗಿದೆ. ಭಾರತ ಮಾತ್ರವಲ್ಲ ಇಡೀ ವಿಶ್ವ ಎದುರಿಸುತ್ತಿರುವ ಸಂಕಷ್ಟಗಳ ಸರಮಾಲೆಯಿಂದ ಪಾರಾಗಲು ಗಾಂಧಿ ವಾದವೇ ಕೊನೆಯ ಆಸರೆ. ಈ ಬಗ್ಗೆ ಸಂಶಯ ಬೇಡ" ಎನ್ನುತ್ತಾರೆ ಸುಬ್ಬಾರಾವ್.

ಗಾಂಧಿವಾದದ ಕುಲುಮೆಯಲ್ಲಿ ಪುಟಗೊಂಡ ನಾಯಕರ ಪೀಳಿಗೆಯ ಕೊನೆಯ ಕೊಂಡಿಯಂತೆ ಕಾಣಿಸುತ್ತಿದ್ದಾರೆ ಸೇಲಂ ನಂಜುಂಡಯ್ಯ ಸುಬ್ಬಾರಾವ್. ಅದೇ ಖಾದಿ ಅಂಗಿ ಮತ್ತು ಚಡ್ಡಿ ಮಲಗಲೊಂದು ಚಾಪೆ, ಚಕ್ಕಳಬಕ್ಕಳ ಹಾಕಿಕೊಂಡು ಬರೆಯುವ ರೂಢಿ. ಸಂಪರ್ಕಕ್ಕಾಗಿ ಬಳಸುತ್ತಿರುವ ಪೋಸ್ಟ್‌ಕಾರ್ಡ್, ಪ್ರವಾಸ ಕಾಲದಲ್ಲಿ ಹೋಟೆಲ್ – ಗೆಸ್ಟ್‌ಹೌಸ್‌ಗಳಿಗೆ ಕಾಲಿಡದೆ ಸದಾ ಶಿಷ್ಯರು, ಸ್ನೇಹಿತರ ಮನೆಯಲ್ಲಿ ವಾಸ. ತನ್ನ ಬಟ್ಟೆ ತಾನೇ ಒಗೆಯುವ ಪರಿಪಾಠ, ಎಲ್ಲವೂ ಅಪ್ಪಟ ಗಾಂಧಿ ಜೀವನಶೈಲಿ. ಇದೇ ರೀತಿ ಎಲೆ ಮರೆಯ ಕಾಯಿಯಂತೆ ಸಮಾಜ ಸೇವೆಯ ಕಾಯಕದಲ್ಲಿ ತೊಡಗಿದ್ದರು ಸುಬ್ಬಾರಾವ್. ರಾಷ್ಟ್ರೀಯ ಯುವ ಯೋಜನೆಗೆ ರಾಷ್ಟ್ರೀಯ ಯುವ ಪ್ರಶಸ್ತಿ ಡಿ.ಲಿಟ್ ಪದವಿ ಕಾಶಿ ವಿದ್ಯಾಪೀಠ ಭಾರತೀಯ ಏಕತಾ ಪುರಸ್ಕಾರ, ವಿಶ್ವ ಮಾನವಾಧಿಕಾರಿ ಪ್ರೋತ್ಸಾಹ ಪುರಸ್ಕಾರ ರಾಜೀವ್ ಗಾಂಧಿ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ ರಾಷ್ಟ್ರೀಯ ಸಂಪ್ರದಾಯಿಕ ಸದ್ಭಾವನಾ ಪುರಸ್ಕಾರ, ಜಮನಲಾಲ್ ಬಜಾಜ್ ಪುರಸ್ಕಾರ ಮಹಾತ್ಮ ಗಾಂಧಿ ಪುರಸ್ಕಾರ, ಅನುವರ್ತ್ ಅಹಿಂಸಾ ಪ್ರಶಸ್ತಿ ಭಾರತೀಯ ಸತಿ ಸಂಘಟನೆ ದೆಹಲಿಯಿಂದ ಜೀವಮಾನ ಸಾಧನೆ ಪ್ರಶಸ್ತಿ, ಕರ್ನಾಟಕ ಸರ್ಕಾರದಿಂದ ಮಹಾತ್ಮ ಗಾಂಧಿ ಪ್ರೇರಣಾ ಸೇವಾ ಪುರಸ್ಕಾರ, ರಾಷ್ಟ್ರೀಯ ಸದ್ಭಾವನಾ ಏಕತಾ ಪ್ರಶಸ್ತಿ, ನಾಗ್ಪುರ, ಮಹಾರಾಷ್ಟ್ರ, ಇವರ ಗಣನೀಯ ಸೇವೆಗೆ ಸಂದ ಗೌರವಗಳಾಗಿವೆ.

ವಿಶೇಷ - ಸುದ್ದಿ ಸಮಾಚಾರಗಳು

ಮಹರ್ಷಿ ವಾಲ್ಮೀಕಿ



ವಾಲ್ಮೀಕಿ ಒಬ್ಬ ಋಷಿ ಹಾಗೂ ಸಂಸ್ಕೃತ ಕವಿ; ರಾಮಾಯಣ ಮಹಾಕಾವ್ಯದ ಕರ್ತೃ. ಇವರನ್ನು ಆದಿಕವಿ ಎಂದೂ ಕರೆಯಲಾಗಿದೆ. ವಾಲ್ಮೀಕಿಯ ಜೀವನದ ಕುರಿತಾಗಿ ಅನೇಕ ದಂತಕಥೆಗಳಿವೆ. ಅವರ ಮೂಲ ಹೆಸರು ರತ್ನಾಕರ. ನಾರದನ ಉಪದೇಶದಿಂದ ರತ್ನಾಕರನಿಗೆ ಜ್ಞಾನೋದಯವಾಗಿ ಋಷಿಯಾದರೆಂದು ಹೇಳಲಾಗುತ್ತದೆ. ವಾಲ್ಮೀಕಿ ಮಹರ್ಷಿಗಳು ಪ್ರಚೇತಸ ಮುನಿಯ ಮಗ. ಹೀಗಾಗಿ ಅವರಿಗೆ 'ಪ್ರಾಚೇತಸ' ಎಂಬ ಹೆಸರಿದೆ. ಪರಮಾತ್ಮನನ್ನು ಕುರಿತು ಬಹಳ ವರ್ಷಗಳ ಕಾಲ ತಪಸ್ಸು ಮಾಡುತ್ತಿದ್ದಾಗ ಅವರ ಸುತ್ತ ಹುತ್ತ ಬೆಳೆದಿತ್ತು. ಹುತ್ತ (ಸಂಸ್ಕೃತದಲ್ಲಿ–ವಲ್ಮೀಕ)ವನ್ನು ಭೇದಿಸಿಕೊಂಡು ಹೊರಗೆ ಬಂದಿದ್ದರಿಂದ 'ವಾಲ್ಮೀಕಿ' ಎಂಬ ಹೆಸರು ಬಂತು. ವಾಲ್ಮೀಕಿ ಮಹರ್ಷಿಗಳು ತಮಸಾ ನದಿ ತೀರದಲ್ಲಿ ಸಂತೋಷವಾಗಿ ಹಾರಾಡುತ್ತಿದ್ದ ಕ್ರೌಂಚಪಕ್ಷಿ ಜೋಡಿಯನ್ನು ನೋಡುತ್ತಿದ್ದಾಗ, ಬೇಡನೊಬ್ಬನು ಬಂದು ಬಾಣ ಹೂಡಿ ಅವುಗಳಲ್ಲಿ ಗಂಡು ಹಕ್ಕಿಯನ್ನು ಕೊಂದು ಬಿಡುತ್ತಾನೆ. ಅದರ ಸಂಗಾತಿ ಹೆಣ್ಣು ಹಕ್ಕಿಯು ಸಂಕಟದಿಂದ ಕೂಗಲಾರಂಭಿಸುತ್ತದೆ. ಈ ಹೃದಯ ವಿದ್ರಾವಕ ಸನ್ನಿವೇಶವನ್ನು ನೋಡಿ, ಕರುಣೆ, ದುಃಖ, ಕೋಪದಿಂದ ಮಹರ್ಷಿಗಳು ಬೇಡನನ್ನು ಶಪಿಸುವಾಗ, ಶೋಕದಿಂದ ಶ್ಲೋಕ ರೂಪದಲ್ಲಿ ಉದ್ಗರಿಸುತ್ತಾರೆ.

ಈ ಶ್ಲೋಕವು ಗದ್ಯರೂಪದಲ್ಲಿರದೆ, ಪ್ರಾಸಬದ್ಧವಾಗಿ, ಲಯ–ಛಂದಸ್ಸುಗಳಿಂದ ಕೂಡಿತ್ತು.

ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ । ಯತ್ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಮ್ ॥

ಇದು ರಾಮಾಯಣ ರಚನೆಗೆ ಪ್ರೇರಣೆಯಾದ ಘಟನೆ ಹಾಗೂ ಆ ಸಂದರ್ಭಕ್ಕೆ ಪ್ರತಿಕ್ರಿಯೆಯಾಗಿ ಶ್ಲೋಕ ರೂಪದಲ್ಲಿ ವಾಲ್ಮೀಕಿಯವರ ಬಾಯಿಂದ ಹೊರಹೊಮ್ಮಿದ ಮಾತುಗಳು. ಈ ಶ್ಲೋಕದ ಅರ್ಥ ಹೀಗಿದೆ :

ಅಕಾರಣವಾಗಿ ಹಕ್ಕಿಯನ್ನು ಕೊಂದ ಹೇ ಅನ್ಯಾಯಿ । ನಿನ್ನ ಪಾಪದ ಫಲವಾಗಿ ನೀ ಈ ಕೂಡಲೇ ಸಾಯಿ ॥

ಆ ವೇಳೆಗೆ ಬ್ರಹ್ಮದೇವ ಮಹರ್ಷಿಗಳ ಆಶ್ರಮಕ್ಕೆ ಬಂದು ಇದೇ ಶ್ಲೋಕರೂಪದಲ್ಲಿ ರಾಮಾಯಣ ಕಾವ್ಯ ರಚಿಸಲು ಹೇಳುತ್ತಾರೆ. ನಾರದರು ತಮಗೆ ಸಂಗ್ರಹವಾಗಿ ಹೇಳಿದ್ದ ರಾಮನ ಕಥೆಯನ್ನು ವಾಲ್ಮೀಕಿ ಮಹರ್ಷಿಗಳು 24,000 ಶ್ಲೋಕಗಳನ್ನೊಳಗೊಂಡ ಮಹಾಕಾವ್ಯವಾಗಿ ರಚಿಸಿದರು. ಉತ್ತರ ರಾಮಾಯಣದಲ್ಲಿ ರಾಮನು, ಅಯೋಧ್ಯೆಯ ಕೆಲವು ಸಾಮಾನ್ಯ ಜನರು ಸೀತೆಯ ಬಗೆಗೆ ಅರೋಪ ಮಾಡುತ್ತಿರುವುದನ್ನು ಗೂಢಚಾರರ ಮೂಲಕ ತಿಳಿದು (ಅಗಸನ ಆರೋಪಣೆಗೆ ಎಂದು ಕನ್ನಡ ಜೈಮಿನಿ ಭಾರತದಲ್ಲಿ ಲಕ್ಷೀಶ ಕವಿಯು (ಮೂಲವನ್ನು ಬದಲಾಯಿಸಿ ಸೇರಿಸಿದ್ದಾನೆ–ಅಥವಾ ಜೈಮಿನಿ ಋಷಿಯು ತನ್ನ ಸಂಸ್ಕೃತದ ಜೈಮಿನಿ ಭಾರತದಲ್ಲಿ ಮೂಲವನ್ನು ಬದಲಾಯಿಸಿದ್ದಾನೆ) ನೊಂದ ತುಂಬು ಗರ್ಭಿಣಿ ಸೀತೆಯನ್ನು ಪರಿತ್ಯಾಗ ಮಾಡುತ್ತಾನೆ. ರಾಮನ ಆಜ್ಞೆಯಂತೆ ಲಕ್ಷಣನು ಸೀತೆಯನ್ನು (ಲಕ್ಷ್ಮಣ ತನ್ನ ವಿವೇಕವನ್ನು ಉಪಯೋಗಿಸಿ ವಾಲ್ಮೀಕಿ ಮುನಿಯ ಆಶ್ರಮದ ಹತ್ತಿರ) ಕಾಡಿನಲ್ಲಿ ಬಿಟ್ಟು ಹೋಗುತ್ತಾನೆ. ಅರಣ್ಯದಲ್ಲಿ ಶೋಕತಪ್ತಳಾಗಿದ್ದ ಸೀತೆಯನ್ನು ವಾಲ್ಮೀಕಿ ಮಹರ್ಷಿಗಳು ತಮ್ಮ ಆಶ್ರಮಕ್ಕೆ ಕರೆತಂದು, ಋಷಿಪತ್ನಿಯರ ಮೂಲಕ ಆಕೆಯನ್ನು ಉಪಚರಿಸಿ, ಆದರಿಸುತ್ತಾರೆ. ಅಲ್ಲೇ ಲವ–ಕುಶರ ಜನನವಾಗುತ್ತದೆ. ಆ ಅವಳಿ ಮಕ್ಕಳಿಗೆ ವಾಲ್ಮೀಕಿ ಮಹರ್ಷಿಗಳೇ ರಾಮಾಯಣ ಮಹಾಕಾವ್ಯದ ಗಾಯನವನ್ನು ಕಲಿಸಿಕೊಡುತ್ತಾರೆ. ವಾಲ್ಮೀಕಿ ಮಹರ್ಷಿಗಳು ಲವ–ಕುಶ ರಾಮನಲ್ಲಿಗೆ ಬಂದು ರಾಮಾಯಣವನ್ನು ಹಾಡಿಸುತ್ತಾರೆ. ರಾಮನಲ್ಲಿಗೆ ಸೀತೆಯನ್ನೂ ವಾಲ್ಮೀಕಿ ಮಹರ್ಷಿಗಳೇ ಕರೆತರುತ್ತಾರೆ.

ಕೂಜಂತಂ ರಾಮ ರಾಮೇತಿ । ಮಧುರ ಮಧುರಾಕ್ಷರಮ್ ॥

ಆರುಹ್ಯ ಕವಿತಾಶಾಖಾಂ । ವಂದೇ ವಾಲ್ಮೀಕಿ ಕೋಕಿಲಮ್ ॥

ಈ ಸುಂದರವಾದ ರೂಪಕಾಲಂಕಾರದಿಂದ ಕೂಡಿದ ವಾಲ್ಮೀಕಿ ಮುನಿಯನ್ನು ವಂದಿಸುವ ಶ್ಲೋಕವು, ಬುಧಕೌಶಿಕ ಮುನಿಯು ರಚಿಸಿರುವ ಶ್ರೀರಾಮರಕ್ಷಾ ಸ್ತೋತ್ರದಲ್ಲಿದೆ. 'ಕಾವ್ಯವೆಂಬ ಮರದ ಮೇಲೆ ಕುಳಿತು, 'ರಾಮ ರಾಮಾ' ಎಂದು ಹಾಡುತ್ತಿರುವ ವಾಲ್ಮೀಕಿ ಎಂಬ ಕೋಗಿಲೆಗೆ ವಂದೇ–ನಮಸ್ಕಾರ. ಚೆನ್ನೈ ಸಮೀಪದ ತಿರುವಣ್ಣೆಯೂರಿನಲ್ಲಿ 1300 ವರ್ಷಗಳ ಹಿಂದೆ ನಿರ್ಮಿಸಿದ ವಾಲ್ಮೀಕಿಯ ದೇವಾಲಯ ಇದೆ.

ಸಾದರ ಸ್ವೀಕಾರ

	ಶೀರ್ಷಿಕೆ	ಪ್ರಕಾಶಕರು	ಲೇಖಕರು
1.	ಕನ್ನಡದ ತೇರು ಎಳೆದವರ ನೋಡೋಣ ಬಾರಾ	ಐಬಿಎಚ್ ಪ್ರಕಾಶನ	ಕೆ. ನಟರಾಜ್
2.	ಅಂದಿನ ಮೈಸೂರು	ಸುನೀಲ್ ಪ್ರಕಾಶನ	ಮೂಲ : ಎಂ.ಎಲ್. ಕೃಷ್ಣಸ್ವಾಮಿ ಅನು : ಸೋಮಶೇಖರ ಮಂದಗೆರೆ
3.	ಬದುಕಿರುವುದೇ ಕಥೆ ಹೇಳಲಿಕ್ಕೆ	ಸೃಷ್ಟಿ ಪ್ರಕಾಶನ, ಬೆಂಗಳೂರು	ಅನು : ಟಿ.ಎಸ್. ರಘುನಾಥ್
4.	ಬೆಂಗಳೂರು ಇತಿಹಾಸ	ಅಂಕಿತ ಪ್ರಕಾಶನ	ಬಾ.ನಾ. ಸುಂದರ ರಾವ್
5.	ಹೊಸ ವಿಚಾರಗಳು	ಪುಸ್ತಕ ಪ್ರಕಾಶನ	ಕೆ.ಪಿ. ಪೂರ್ಣಚಂದ್ರ ತೇಜಸ್ವಿ
6.	Womens of the Records	Penguin	Vikram Sampath
7.	Art Is Everywhere	Pratham Books	Pratham
8.	Teenage Diary of Razia Sulta	Talking Cub	Anitha Murthy

Collection by Naveenkumar

ಅಂತರರಾಷ್ಟ್ರೀಯ ಸುದ್ದಿ ಸಮಾಚಾರಗಳು

ಸಂಗ್ರಹ : ಕೃಷ್ಣ ಹಾನ್‌ಬಾಳ್

ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಗೆ ಭಾರತ ಮರು ಆಯ್ಕೆ!

2022-24ರ ಅವಧಿಗೆ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿ (ಯುಎನ್‌ಎಚ್‌ಆರ್‌ಸಿ) 2022-24ರ ಅವಧಿಗೆ ಭಾರತವು ಆರನೇ ಬಾರಿಗೆ ಬಹುಮತದೊಂದಿಗೆ ಆಯ್ಕೆಯಾಗಿದೆ ಎಂದು ಟ್ವೀಟ್‌ನಲ್ಲಿ ಹೇಳಲಾಗಿದೆ. ಚುನಾವಣೆಯ ನಂತರ, ಗೌರವ, ಮಾತುಕತೆ ಮತ್ತು ಸಹಕಾರದ ಮೂಲಕ ಮಾನವ ಹಕ್ಕುಗಳನ್ನು ಉತ್ತೇಜಿಸಲು ಮತ್ತು ರಕ್ಷಿಸಲು ಭಾರತವು ತನ್ನ ಬದ್ಧತೆಯನ್ನು ವ್ಯಕ್ತಪಡಿಸಿತು. ವಿಶ್ವಸಂಸ್ಥೆಗೆ ಭಾರತದ ಖಾಯಂ ಮಿಷನ್ ಟ್ವೀಟ್ ಮಾಡುವ ಮೂಲಕ ಭಾರತದ ಈ ಸಾಧನೆಯ ಬಗ್ಗೆ ಮಾಹಿತಿ ನೀಡಿದೆ. ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಅರ್ಜೆಂಟೀನಾ, ಬೆನಿನ್, ಕ್ಯಾಮರೂನ್, ಎರಿಟ್ರಿಯಾ, ಫಿನ್ಲ್ಯಾಂಡ್, ಜಾಂಬಿಯಾ, ಹೊಂಡುರಾಸ್, ಭಾರತ, ಕಜಕಿಸ್ತಾನ್, ಲಿಥುವೇನಿಯಾ, ಲಕ್ಸೆಂಬರ್ಗ್, ಮಲೇಷಿಯಾ, ಮಾಂಟೆನೆಗ್ರೊ, ಪರಾಗ್ವೆ, ಕತಾರ್, ಸೊಮಾಲಿಯಾ, ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ಯುನೈಟೆಡ್ ಸ್ಟೇಟ್ಸ್ ಅನ್ನು ರಹಸ್ಯವಾಗಿ ಆಯ್ಕೆ ಮಾಡಿತು.



ಹವಾಮಾನ ಬದಲಾವಣೆ ಜಾಗೃತಿಗೆ ಭಾರತೀಯ ಮೂಲದ ಬಾಲಕಿಗೆ ಬ್ರಿಟನ್ ಪ್ರಧಾನಿ ಪ್ರಶಸ್ತಿ



ಭಾರತೀಯ ಮೂಲದ 6 ವರ್ಷದ ಅಲೀಶಾ ಗದಿಯಾ ಹವಾಮಾನ ಬದಲಾವಣೆ ಜಾಗೃತಿ ಕಾರ್ಯಕ್ರಮಗಳಲ್ಲಿ ಸಕ್ರಿಯಳಾಗಿದ್ದಾಳೆ. ಆಟವಾಡುವ ಸಮಯದಲ್ಲಿ ಪರಿಸರ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವ ಕೆಲಸದಲ್ಲಿ ನಿರತವಾಗಿರುವ ಅಲೀಶಾ ಸಾಧನೆಗೆ ಎಲ್ಲೆಡೆಯಿಂದ ಮೆಚ್ಚುಗೆ ವ್ಯಕ್ತವಾಗಿದೆ. ಬಾಲಕಿ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಕೊಡಮಾಡುವ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದಾಳೆ. ಜಾಗತಿಕ ತಾಪಮಾನ ಏರಿಕೆ, ಅರಣ್ಯ ನಾಶ ಸೇರಿದಂತೆ ಹಲವು ವಿಷಯಗಳ ಕುರಿತಾಗಿ ಜಾಗೃತಿ ಮೂಡಿಸುವ ಕೆಲಸದಲ್ಲಿ ನಿರತವಾಗಿರುವ ಎನ್ ಜಿ ಒ ಕೂಲ್ ಅರ್ಥ್ ನಲ್ಲಿ ಆಕೆ ಸದಸ್ಯೆಯಾಗಿದ್ದಾಳೆ. ಜಾಗೃತಿ ಅಭಿಯಾನದಲ್ಲಿ ಪಾಲ್ಗೊಂಡ ಅಲೀಶ 3 ಲಕ್ಷ ರೂ.ಗಳಷ್ಟು ದೇಣಿಗೆ ಸಂಗ್ರಹಿಸಿದ್ದಳು. ಕಾರ್ಖಾನೆಗಳು ಯಾವ ರೀತಿ ಜಗತಿನಾದ್ಯಂತ ಲಾಬಿ ಮಾಡಿ ಪರಿಸರಕ್ಕೆ ಹಾನಿಯುಂಟು ಮಾಡುತ್ತಿವೆ ಎಂಬುದರ ಕುರಿತಾಗಿ ಅಲೀಶಾ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದಾಳೆ. ಈ ಹಿಂದೆ ಅರಣ್ಯನಾಶ ಕುರಿತಾಗಿ ಗಮನ ಸೆಳೆಯಲು 80 ಕಿ.ಮೀ ಸೈಕಲ್ ರೈಡ್ ಜಾಥಾ ಹಮ್ಮಿಕೊಂಡಿದ್ದಳು. ಬ್ರಿಟನ್ ರಾಣಿ ಮತ್ತು ಜಗತ್ಪ್ರಸಿದ್ಧ ಸಿನಿಮಾ ನಿರ್ದೇಶಕ ಡೇವಿಡ್ ಅಟೆನ್ ಬರೊ ಬೆಂಬಲ ಸೂಚಿಸಿದ್ದರು ಎನ್ನುವುದು ವಿಶೇಷ.

ವಿಶ್ವ ಜಲವಾರ



ಹವಾಮಾನ ಬಿಕ್ಕಟ್ಟು ನಿಜಕ್ಕೂ ಚಿಂತಿಸಬೇಕಾದ ವಿಚಾರ. ಜಗತ್ತಿನಲ್ಲಿ ಈಗಾಗಲೇ ಕಾಡ್ಗಿಚ್ಚು, ಪ್ರವಾಹಗಳಿಂದ ಹಲವಾರು ಸಮಸ್ಯೆಗಳು ಉಂಟಾಗಿದೆ. ಹವಾಮಾನ ವೈಪರಿತ್ಯ ಜಾಗತಿಕವಾಗಿ ನೀರಿನ ಸಮಸ್ಯೆಗಳ ಮೇಲೆ ಪರಿಣಾಮ ಬೀರುತ್ತಿದೆ. ಈ ನಿಟ್ಟಿನಲ್ಲಿ ಸ್ಟಾಕ್‌ಹೋಮ್ ಇಂಟರ್‌ನ್ಯಾಷನಲ್ ವಾಟರ್ ಇನ್‌ಸ್ಟಿಟ್ಯೂಟ್ (SIWI) 1991ರಿಂದ ಆಗಸ್ಟ್ 23 ರಿಂದ 27ರವರೆಗೆ ಸ್ಟಾಕ್‌ಹೋಮ್‌ನಲ್ಲಿ ವಿಶ್ವ ಜಲ ವಾರವನ್ನು ಆಚರಿಸಲು ಪ್ರಾರಂಭಿಸಿತು. ಐದು ದಿನಗಳ ಕಾರ್ಯಕ್ರಮದಲ್ಲಿ ನೀರು, ಅಭಿವೃದ್ಧಿ ಮತ್ತು ನೀರಿನ ಸಮಸ್ಯೆಗಳು ಮತ್ತು ಅಂತರಾಷ್ಟ್ರೀಯ ಅಭಿವೃದ್ಧಿಯ ಸಂಬಂಧಿತ ಮಾಹಿತಿಗಳನ್ನು ತಿಳಿಸಿ ಅರಿವು ಮೂಡಿಸಲಾಗುತ್ತದೆ. ಭಾರತದಲ್ಲಿ ನೀರಿನ ಹಲವು ಸಮಸ್ಯೆಗಳಿವೆ. ವಾಟರ್ ಏಡ್‌ನ ನೀರಿನ ಗುಣಮಟ್ಟ ಸೂಚ್ಯಂಕದ ಪ್ರಕಾರ, ಭಾರತವು ಪ್ರಪಂಚದಾದ್ಯಂತ ನೀರಿನ ಗುಣಮಟ್ಟದಲ್ಲಿ 122 ದೇಶಗಳ ಪಟ್ಟಿಯಲ್ಲಿ 120ನೇ ಸ್ಥಾನದಲ್ಲಿದೆ. ಇದು ಭಾರತದಲ್ಲಿ ನೀರಿನ ಗುಣಮಟ್ಟ ಎಷ್ಟು ಕಳಪೆಯಾಗಿದೆ ಎಂಬುದನ್ನ ತೋರಿಸುತ್ತದೆ. ಇನ್ನು ಭಾರತದಲ್ಲಿ ಗಂಗಾ, ಯಮುನಾ, ಬ್ರಹ್ಮಪುತ್ರ, ದಾಮೋದರ, ಬಾಗಮತಿ ಇನ್ನೂ ಹಲವು ನದಿಗಳನ್ನು ಪವಿತ್ರ ಮತ್ತು ಧಾರ್ಮಿಕ ಎಂದು ಪರಿಗಣಿಸಲಾಗಿದೆ. ಆದರೆ ಅದರ ಪರಿಣಾಮವಾಗಿ, ಲಕ್ಷ, ಲಕ್ಷ ಜನರು ಪವಿತ್ರ ನೀರಿನಲ್ಲಿ ಸ್ನಾನ ಮಾಡಲು ಮತ್ತು ಪ್ರಾರ್ಥನೆ ಮಾಡಲು ಹೋಗುತ್ತಾರೆ. ಇದು ನೀರು ಕಲುಷಿತಗೊಳ್ಳಲು ಕಾರಣವಾಗಿದೆ. ಸರಿಸುಮಾರು 1100 ಕೈಗಾರಿಕಾ ಸಂಸ್ಥೆಗಳು ಚರಂಡಿ ತ್ಯಾಜ್ಯ ಮತ್ತು ಮಾಲಿನ್ಯಕಾರಕಗಳನ್ನು ಈ ನದಿಗೆ ಎಸೆಯುತ್ತವೆ. ಈ ನದಿ ಹೊರಹಾಕುವ 25% ಮಾಲಿನ್ಯಕಾರಕಗಳು ನದಿ ಹರಿಯುವ ಸ್ಥಳಗಳಲ್ಲಿ ಒಂದಾದ ವಾರಣಾಸಿಯಲ್ಲಿ ಮಾತ್ರ ಸಿಗುತ್ತದೆ. ಅಷ್ಟರ ಮಟ್ಟಿಗೆ ಈ ನದಿ ಕಲುಷಿತಗೊಂಡಿದೆ. ಸಂಸ್ಕರಿಸದ ಮನೆಯ ತ್ಯಾಜ್ಯ, ಕೈಗಾರಿಕಾ ರಾಸಾಯನಿಕಗಳು ಮತ್ತು ಬೂದಿಗಳು, ರಾಸಾಯನಿಕ ಮತ್ತು ವಿವಿಧ ಮಾಲಿನ್ಯಕಾರಕ ವಸ್ತುಗಳಿಂದ, ನದಿಯ ದಡದಲ್ಲಿ ಸ್ಥಾಪಿಸಲಾಗಿರುವ ಬಹು ಕಲ್ಲಿದ್ದಲು ಕೈಗಾರಿಕೆಗಳು ಅಲ್ಲದೆ ಧಾರ್ಮಿಕ ನಂಬಿಕೆಯ ಕಾರಣದಿಂದ ಜನರು ನದಿಗೆ ವಸ್ತುಗಳನ್ನು ಹಾಕುತ್ತಿರುವುದು ಕೂಡ ನದಿ ಕಲುಷಿತಗೊಳ್ಳಲು ಮತ್ತೊಂದು ಮುಖ್ಯ ಕಾರಣ.

ಸೌಜನ್ಯ : ನ್ಯೂಸ್‌ಹಂಟ್

ಅಂತರರಾಷ್ಟ್ರೀಯ ಸುದ್ದಿ ಸಮಾಚಾರಗಳು


ಪ್ರಚಂಡ ಪುಟಾಣಿಗಳಿಗೆ ನೊಬೆಲ್ !



ವಿಜ್ಞಾನ ಮೇಳ (ಸೈನ್ಸ್ ಫೇರ್, ಸೈನ್ಸ್ ಒಲಂಪಿಯಾಡ್‌ಗಳ ಬಗ್ಗೆ ಕೇಳಿರುತ್ತೀರಿ. ಇಂತಹುದೇ ವಿಶೇಷ ಸ್ಪರ್ಧೆಯೊಂದು ಅಮೆರಿಕದಲ್ಲಿ ಪ್ರತಿ ವರ್ಷ ನಡೆಯುತ್ತದೆ. ಈ ಸ್ಪರ್ಧೆಯ ಹೆಸರು ವಿಜ್ಞಾನ ಪ್ರತಿಭಾನ್ವೇಷಣೆ' (ಸೈನ್ಸ್ ಟ್ಯಾಲೆಂಟ್ ಸರ್ಚ್). ಇದರ ವಿಶೇಷವೇನೆಂದರೆ ಪ್ರಶಸ್ತಿ ಗೆದ್ದವರಿಗೆ ಜೂನಿಯರ್ ನೊಬೆಲ್ ಪುರಸ್ಕಾರ ದೊರೆಯುತ್ತದೆ. ವಿಜ್ಞಾನ ಪ್ರತಿಭಾನ್ವೇಷಣೆ ಎಂದರೆ ಜಗತ್ತಿಗೆ ಒಳಿತಾಗುವಂತಹ ಹೊಸ ವಿಜ್ಞಾನ ಪ್ರಯೋಗಗಳನ್ನು ಮಾಡುವುದು ಮತ್ತು ಹೊಸ ವಸ್ತು ಉಪಕರಣಗಳನ್ನು ತಯಾರಿಸುವುದು. ಪ್ರೌಢಶಾಲಾ ವಿದ್ಯಾರ್ಥಿಗಳು (12ನೇ ತರಗತಿಯವರೆಗೆ ಮಾತ್ರ ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಅಮೆರಿಕದ 'ಸೊಸೈಟಿ ಫಾರ್ ದಿ ಸೈನ್ಸ್ ಅಂಡ್ ಪಬ್ಲಿಕ್' ಸಂಸ್ಥೆ 1942ರಿಂದ ಈ ಸ್ಪರ್ಧೆ ಆಯೋಜಿಸುತ್ತಿದೆ. ಈ ಸ್ಪರ್ಧೆಯಲ್ಲಿ ೀರ್ಪುಗಾರರು ನೊಬೆಲ್ ಪುರಸ್ಕೃತರಾಗಿರುತ್ತಾರೆ. ಸಂಶೋಧನೆಗಳ ವಿಷಯಗಳನ್ನು ಕೂಲಂಕಷವಾಗಿ ಪರಿಶೀಲಿಸಿ 300 ಮಂದಿಗೆ ಅವಕಾಶ ನೀಡುತ್ತದೆ. ಅವರಲ್ಲಿ 40 ಮಂದಿ ಆಯ್ಕೆ ಮಾಡಿ ಸಂದರ್ಶನ ನಡೆಸಿ 10 ಮಂದಿಯನ್ನು ಫೈನಲ್ ಹಂತಕ್ಕೆ ಕಳುಹಿಸುತ್ತಾರೆ. ಈ 10 ವಿದ್ಯಾರ್ಥಿಗಳು ತಮ್ಮ ಪ್ರಯೋಗಗಳನ್ನು ಪ್ರದರ್ಶಿಸಿದ ನಂತರ, ತೀರ್ಪುಗಾರರ ಮೆಚ್ಚುಗೆ ಗಳಿಸಿದ ಪ್ರತಿ ವಿದ್ಯಾರ್ಥಿಗೆ 5 ಲಕ್ಷದಿಂದ 64 ಲಕ್ಷದವರೆಗೆ ನಗದು ಒಳಗೊಂಡ ಜೂನಿಯರ್ ನೊಬೆಲ್ ಪ್ರಶಸ್ತಿ ನೀಡುತ್ತಾರೆ. ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಭಾರತ ಸಂಜಾತೆ ಇಂದ್ರಾಣಿ ದಾಸ್ 2017ರಲ್ಲಿ ಜೂನಿಯರ್ ನೊಬೆಲ್ ಪುರಸ್ಕಾರ ಪಡೆದಿದ್ದಾರೆ. ಅವರು ನ್ಯೂಜೆರ್ಸಿಯ ಆಕಾಡೆಮಿ ಆಫ್ ಮೆಡಿಕಲ್ ಸೈನ್ಸ್ ತಂತ್ರಜ್ಞಾನದಲ್ಲಿ ಪಿಯುಸಿ ಓದುತ್ತಿದ್ದರು. ಅವರ 'ಆಸ್ಟ್ರೊಗ್ಲಿಯೋಸ್' ಪ್ರಯೋಗಕ್ಕೆ ಜೂನಿಯರ್ ನೊಬೆಲ್ ಪಡೆದರು. ಇಂಡಿಯಾನಾ ರಾಜ್ಯದ ಅರ್ಜುನ್ ಕರನಂ ಕಂಪ್ಯೂಟರ್ ಪ್ರೋಗ್ರಾಮಿಂಗ್ ಬಗ್ಗೆ ತಿಳಿಸಿ – 96 ಲಕ್ಷ ಬಹುಮಾನ ಪಡೆದಿದ್ದಾರೆ. ವರ್ಜೀನಿಯಾದ ಪ್ರತೀಕ್ ನಾಯ್ಡು, ಜೆನೆಟಿಕ್ಸ್‌ನ 3ಡಿ ಮಾದರಿ ತಿಳಿಯುವುದಕ್ಕೆ ಕಂಪ್ಯೂಟರ್ ಪ್ರೋಗ್ರಾಮಿಂಗ್ ಮಾಡಿ 45 ಲಕ್ಷ, ನ್ಯೂಯಾರ್ಕ್‌ನ ಅರ್ಚನಾ ಸೌರ ವಿದ್ಯುತ್ ಕಿಟಕಿಗಳನ್ನು ತಯಾರಿಸಿ 58 ಲಕ್ಷ ನಗದು ಪಡೆದಿದ್ದಾರೆ. ಪೊರ್ಲಾರ್ಂಡೊ ರಾಜ್ಯದ ವೃಂದಾ ಮದನ್ 32 ಲಕ್ಷ ಬಹುಮಾನ ಪಡಿದ್ದಾರೆ. ಈ ಸ್ಪರ್ಧೆಯಲ್ಲಿ ಭಾಗವಹಿಸವ ವಿವರಗಳಿಗೆ: **student societyforscience.org** ಭೇಟಿ ನೀಡಿ.

ಸೌಜನ್ಯ : ಸುಧಾ ವಾರಪತ್ರಿಕೆ

ವೃಕ್ಷಮಾತೆ ತುಳಸಿ ಗೌಡ



ಹೊನ್ನಳ್ಳಿ ಗ್ರಾಮದ ನಾರಾಯಣ ಹಾಗೂ ನೀಲಿ ದಂಪತಿಗೆ 1944 ರಲ್ಲಿ ತುಳಸಿ ಗೌಡ ಅವರು ಜನಿಸಿದವರು. ಜಾನಪದ ಕಲಾವಿದೆ, ಪರಿಸರ ಪ್ರೇಮಿ. ಅಂಕೋಲಾ ತಾಲೂಕಿನ ಹೊನ್ನಳ್ಳಿ ಗ್ರಾಮದ ತುಳಸಿ ಗೌಡರ ಸಾಧನೆ ಅಪಾರ. ತುಳಸಿ ಚಿಕ್ಕ ವಯಸ್ಸಿನಲ್ಲಿಯೇ ಗೋವಿಂದ ಗೌಡ ಅವರನ್ನು ವಿವಾಹವಾದರು. ಆದರೆ ಅವರು ಕೆಲವೇ ವರ್ಷಗಳಲ್ಲಿ ನಿಧನರಾದರು. ಎಲ್ಲ ದುರ್ಘಟನೆಗಳನ್ನು ಧೈರ್ಯದಿಂದ ಎದುರಿಸಿ ವೃಕ್ಷಮಾತೆ ಎಂದೆನಿಸಿಕೊಂಡಿರುವ ಈಕೆ ಬೆಳೆಸಿದ ಮರಗಳು ಒಂದಲ್ಲಾ, ಎರಡಲ್ಲಾ.. ಲಕ್ಷಗಟ್ಟಲೇ! .ಮತ್ತಿಘಟ್ಟ ಅರಣ್ಯ ನರ್ಸರಿಯಲ್ಲಿ ಸೇವೆ ಮಾಡಿ ನಿವೃತ್ತರಾದರೂ ಈಗಲೂ ಅಲ್ಲಿಗೆ ಹೋಗಿ ಯುವಕರಿಗೆ ತರಬೇತಿ, ಮಾರ್ಗದರ್ಶನ ನೀಡುತ್ತಾರೆ. ತುಳಸಿ ಕಳೆದ ಆರು ದಶಕಗಳಿಂದ ಈ ಕೆಲಸವನ್ನು ಯಾವುದೇ ಪ್ರತಿಫಲ ನಿರೀಕ್ಷೆ ಇಲ್ಲದೆ ಮಾಡುತ್ತಿದ್ದಾರೆ. ಇವರ ದಿನನಿತ್ಯದ ಬದುಕು ಆರಂಭವಾಗುವುದೇ ಕೈಯಲ್ಲೊಂದು ಮಡಕೆ ಹಿಡಿದುಕೊಂಡು ಬರಿಗಾಲಿನಲ್ಲಿ ಮನೆಯಿಂದ ಹೊರಡುವ ಮೂಲಕ. ಅಲ್ಲಿಂದ ನೇರವಾಗಿ ನೀರು ಇರುವ ಜಾಗಕ್ಕೆ ಹೋಗುತ್ತಾರೆ. ಅಲ್ಲಿ ಮಡಕೆಗೆ ಮಣ್ಣು, ನೀರು ಸೇರಿಸಿ ಗಿಡ ನೆಡುತ್ತಾರೆ. ಊರಿನವರ ಜೊತೆ ಕಟ್ಟಿಗೆ ತರುವ ಕೆಲಸವನ್ನು ಹಾಗೂ ಅರಣ್ಯ ಇಲಾಖೆ ಬೀಜಗಳನ್ನು ಶೇಖರಣೆ ಮಾಡಿ ಸಸಿಗಳನ್ನಾಗಿ ಮಾಡಿಕೊಡುವ ಕೆಲಸವನ್ನು ಮಾಡುತ್ತಿದ್ದರು. ಪರಿಸರದ ಮೇಲೆ ಕಾಳಜಿ ಇದ್ದುದರಿಂದ ಬೀಜಗಳನ್ನು ತಂದು ಸಸಿ ಮಾಡುವ ಕೆಲಸ ಪ್ರಾರಂಭಿಸಿದರು. ಜಮುನ್, ಗೋಡಂಬಿ, ಜಾಯಿಕಾಯಿ, ಮಾವು, ಹಲಸು, ಕೊಕುಮ್‌ನಂತಹ ಹಣ್ಣಿನ ಮರಗಳನ್ನು ಬೆಳೆಸಿದ್ದಾರೆ. ಗ್ರಾಮಸ್ಥರಿಗೆ ತುಳಸಜ್ಜಿ ಎಂದೇ ಜನಪ್ರಿಯ. ಇಂದಿನ ಯುವಜನರು ಅವರ ಬಳಿ ಹೋಗಿ ಗಿಡ, ಬಳ್ಳಿ, ಬೀಜಗಳ ಬಗ್ಗೆ ಮಾಹಿತಿ ಪಡೆಯುತ್ತಾರೆ. 72 ವರ್ಷದ ತುಳಸಿ ಗೌಡ ಅವರು ಕಳೆದ 57 ವರ್ಷಗಳಿಂದ ಅರಣ್ಯ ಇಲಾಖೆಯಲ್ಲಿ ದಿನಗೂಲಿ ನೌಕರಿ ಮಾಡಿಕೊಂಡಿದ್ದಾರೆ

ಕಾಡೆಲ್ಲ ಸುತ್ತಿ ಅಪರೂಪದ ಬೀಜ, ಗಿಡಗಳನ್ನು ಸಂಗ್ರಹಿಸುತ್ತಿದ್ದರು. ನಂತರ ಅರಣ್ಯ ಇಲಾಖೆ ಹೊನ್ನಾಳಿ, ಮಸ್ತಿಗಟ್ಟ, ಹೆಗ್ಗೂರು, ಹೊಲಿಗೆ, ವಜ್ರಹಳ್ಳಿ, ದೊಂಗ್ರಿ, ಕಲ್ಲೇಶ್ವರ, ಅಡಗೂರು, ಅಗಸೂರು, ಸಿರಗುಂಜಿ, ಎಲೊಗಡ್ಡೆಗಳಲ್ಲಿ ಖಾಲಿ ಭೂಮಿಯಲ್ಲಿ ಇವರಿಂದ ಗಿಡಗಳನ್ನು ನೆಡಿಸಿದರು. ಇಂದು 30 ಸಾವಿರಕ್ಕೂ ಅಧಿಕ ಮರಗಳಿವೆ. ಇದಲ್ಲದೆ ಹೊನ್ನಳ್ಳಿ ಭಾಗದ ಅರಣ್ಯ ಪ್ರದೇಶದಲ್ಲಿ, ಸರ್ಕಾರಿ ಕಚೇರಿ, ಶಾಲೆ, ಮನೆಗಳ ಆವರಣ, ರಸ್ತೆಗಳ ಪಕ್ಕದಲ್ಲಿ ಗಿಡ ನೆಡಲು ಪ್ರಾರಂಭಿಸಿದ್ದರು. ಈಕೆ ನೆಟ್ಟು ಪೋಷಿಸಿದ ಸಸಿಗಳು ಇಂದು ಬೆಳೆದು ಹೆಮ್ಮರವಾಗಿ ಸಾವಿರಾರು ಜನರಿಗೆ ಗಾಳಿ, ನೆರಳನ್ನು ಕೊಡುವ ಕೆಲಸ ಮಾಡುತ್ತಿವೆ. 72 ವರ್ಷದಲ್ಲೂ ಪರಿಸರ ಪ್ರೇಮವನ್ನು ತೋರುತ್ತಿರುವ ಇವರು ಯಾವ ಸಸಿಯನ್ನು ಯಾವ ಸಮಯದಲ್ಲಿ ನೆಡಬೇಕು. ಯಾವ ಸಂದರ್ಭದಲ್ಲಿ ಹೂವು ಹಣ್ಣು ಬಿಡುತ್ತವೆ ಎಂಬುದು ಇವರ ಜ್ಞಾನ ಭಂಡಾರದಲ್ಲಿದೆ. 300ಕ್ಕೂ ಹೆಚ್ಚು ಕಾಡು ಮರಗಳ ಬಗ್ಗೆ ಮಾಹಿತಿ ಇರುವ 'ಸಸ್ಯ ವಿಜ್ಞಾನಿ' ಎಂದೇ ಪ್ರಸಿದ್ಧಿ ಪಡೆದಿದ್ದಾರೆ. ಇವರಿಗೆ ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಸರ್ಕಾರದ ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ, ಕೇಂದ್ರ ಸರ್ಕಾರದ ಪದ್ಮ ಶ್ರೀ ಪ್ರಶಸ್ತಿಗಳು ಸಂದಿವೆ.

ಪರಿಸರದೊಂದಿಗೆ ನಾವು


ಸಂಗ್ರಹ : ಡಾ. ಮುನಿಯಪ್ಪ

ಬಂಡೀಪುರದಲ್ಲಿ ಹೆದ್ದಾರಿ ಅಗಲೀಕರಣದಿಂದಾಗುವ ಅನಾಹುತ



ಪರಿಸರ ಸೂಕ್ಷ್ಮ ಪ್ರದೇಶವಾದ ಹುಲಿ ಸಂರಕ್ಷಿತ ಪ್ರದೇಶ ಮೈಸೂರು–ಊಟಿ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ 181 ಅನ್ನು 12 ಕಿ. ಮೀ. ವಿಸ್ತರಣೆ ಮಾಡುವ ಪ್ರಸ್ತಾವನೆಯನ್ನು ಸಿದ್ಧಗೊಳಿಸಲಾಗಿದೆ. ಬಂಡೀಪುರದಲ್ಲಿ ಎರಡು ವರ್ಷಗಳ ಹಿಂದೆ ಕೇಂದ್ರ ಹೆದ್ದಾರಿ ಸಚಿವಾಲಯವು ಕೇರಳಕ್ಕೆ ರಾತ್ರಿ ವಾಹನಗಳ ಸಂಚಾರ ನಡೆಸಲು ಅವಕಾಶ ನೀಡಬಾರದು ಹಾಗೂ ಕೇರಳ ಸಂಪರ್ಕಿಸಲು ಹೊಸ ರಸ್ತೆ ನಿರ್ಮಾಣ ಮಾಡುವ ಪ್ರಸ್ತಾಪವನ್ನು ಸಹ ತಿರಸ್ಕರಿಸಲಾಗಿತ್ತು. ಕರ್ನಾಟಕ ಲೋಕೋಪಯೋಗಿ ಇಲಾಖೆಯ ರಾಷ್ಟ್ರೀಯ ಹೆದ್ದಾರಿ ವಿಭಾಗ 12 ಕಿ. ಮೀ. ರಾಷ್ಟ್ರೀಯ ಹೆದ್ದಾರಿ ವಿಸ್ತರಣೆ ಮಾಡುವ ಪ್ರಸ್ತಾವನೆ ಸಿದ್ಧಗೊಳಿಸಿದೆ. ಹೊಸದಾಗಿ ಈಗ ಇರುವ ರಸ್ತೆಯನ್ನೇ ವಿಸ್ತರಣೆ ಮಾಡುವ ಚಿಂತನೆ ಆರಂಭವಾಗಿದೆ. 2012ರಲ್ಲಿ ಹೊರಡಿಸಲಾದ ಅಧಿಸೂಚನೆ ಅನ್ವಯ ಬಂಡೀಪುರದಲ್ಲಿ ರಸ್ತೆಯ ವಿಸ್ತರಣೆಗೆ ಕಠಿಣ ನಿಯಮಗಳಿವೆ. ವನ್ಯ ಜೀವಿ ರಾಷ್ಟ್ರೀಯ ಮಂಡಳಿಯ ಉಪಸಮಿತಿ 2014ರಲ್ಲಿ ಯಥಾಸ್ಥಿತಿ ಕಾಪಾಡಿಕೊಳ್ಳಬೇಕು ಎಂದು ಸೂಚನೆ ನೀಡಿದೆ. ಆದರೆ ಈಗ ರಸ್ತೆ ವಿಸ್ತರಣೆಯ ಹೊಸ ಪ್ರಸ್ತಾಪ ಸಿದ್ಧವಾಗಿದೆ. ವನ್ಯ ಜೀವಿಗಳಿಗೆ ಕಾಡಿನಲ್ಲಿ ಆಹಾರ ಬೆಳೆಸಲು ಮುಂದಾದ ಅರಣ್ಯ ಇಲಾಖೆ, ರಸ್ತೆ ಅಗಲೀಕರಣ ಪ್ರಸ್ತಾಪಕ್ಕೆ ಯಾವುದೇ ಕಾರಣಕ್ಕೂ ಅವಕಾಶ ನೀಡಬಾರದು ಎಂದು ವನ್ಯಜೀವಿ ತಜ್ಞರು ಒತ್ತಾಯಿಸಿದ್ದಾರೆ. ವನ್ಯ ಜೀವಿಗಳ ಆವಾಸ ಸ್ಥಾನದಲ್ಲಿ ರಸ್ತೆ ಅಗಲೀಕರಣ ಮಾಡುವುದಕ್ಕೆ ಪರಿಸರವಾದಿಗಳು ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ರಾಷ್ಟ್ರೀಯ ಹೆದ್ದಾರಿ 181 ಮತ್ತು 766 ಬಂಡೀಪುರ ಮೂಲಕ ಹಾದು ಹೋಗುತ್ತದೆ. ಹೆದ್ದಾರಿಗಳಲ್ಲಿ ಸಂಚರಿಸುವ ವಾಹನಗಳಿಂದ ವನ್ಯ ಜೀವಿಗಳಿಗೆ ತೊಂದರೆಯಾಗುತ್ತಿದೆ. ವಾಹನಗಳ ಓಡಾಟದಿಂದ ಶಬ್ದ ಮತ್ತು ವಾಯು ಮಾಲಿನ್ಯ ವಾಗುತ್ತಿದೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಆನೆ, ಜಿಂಕೆ, ಚಿರತೆ, ಕಡವೆ ಸೇರಿದಂತೆ ವಿವಿಧ ಜಾತಿಯ ಪ್ರಾಣಿಗಳಿವೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ತಮಿಳುನಾಡಿನ ಮಧುಮಲೈ ಹುಲಿ ಸಂರಕ್ಷಣಾ ಧಾಮಕ್ಕೆ ಹೊಂದಿಕೊಂಡಿದೆ. ರಾಷ್ಟ್ರೀಯ ಉದ್ಯಾನದ ಮೂಲಕ ಹಾದು ಹೋಗುವ ರಸ್ತೆಗಳ ವಿಸ್ತರಣೆ, ಕ್ರಾಂಕೀಟ್ ಹಾಕುವುದು ಮುಂತಾದ ಕಾಮಗಾರಿ ಮಾಡುವಂತಿಲ್ಲ ಎಂಬ ನಿಯಮವಿದೆ. ಇಂತಹ ಪ್ರದೇಶದಲ್ಲಿ ಹೊಸ ಕಾಮಗಾರಿ ಕೈಗೊಳ್ಳುವ ಮೂಲಕ ವನ್ಯಜೀವಿಗಳಿಗೆ ಧಕ್ಕೆ ತರಬಾರದು ಎಂಬುದು ವನ್ಯಜೀವಿ ತಜ್ಞರ ವಾದವಾಗಿದೆ.

ಹಿಮದ ಹೊದಿಕೆಗೆ ಮಹಾಮಳೆಯಿಂದಾಗಿ ಗಂಡಾಂತರ




ಎಲ್ಲಾ ವಿಚಾರದಲ್ಲೂ ಹಿಡಿತ ಸಾಧಿಸಿರುವ ಮನುಷ್ಯ, ಪ್ರಕೃತಿಯ ಆಳ–ಅಗಲ ಅಳೆಯುವಲ್ಲಿ ಎಡವಿ ಬೀಳುತ್ತಿದ್ದಾನೆ. ಮನಷ್ಯರು ವಿಜ್ಞಾನ ಹಾಗೂ ತಂತ್ರಜ್ಞಾನದಲ್ಲಿ ಅದೆಷ್ಟೇ ಮುಂದುವರಿದರೂ ಭೂತಾಯಿ ಹಾಗೂ ಭೂಮಿಯ ವಾತಾವರಣ ರಕ್ಷಣೆಯಲ್ಲಿ ಪದೇಪದೆ ಸೋಲುತ್ತಿದ್ದಾನೆ. ಈಗ ಮತ್ತೊಮ್ಮೆ ಮನುಷ್ಯನ ಸೋಲು ನಿಖರವಾಗಿದೆ. ಅಭಿವೃದ್ಧಿಯ ದಾವಂತದಲ್ಲಿ ಮನುಷ್ಯ ಮಾಡಿದ ಮಹಾತಪ್ಪಿಗೆ ಗ್ರೀನ್ ಲ್ಯಾಂಡ್‌ನಲ್ಲಿ ಭೀಕರ ಮಳೆ ಬಿದ್ದಿದೆ..! ಅಯ್ಯೋ ಮಳೆಬಿದ್ದರೆ ಸಮಸ್ಯೆ ಏನು ಅನ್ನಬೇಡಿ, ಏಕೆಂದರೆ ಈಗ ಮಳೆ ಬಿದ್ದಿರುವುದು ಮರುಭೂಮಿಯಲ್ಲಲ್ಲ. ಅಪಾರ ಪ್ರಮಾಣದ ಹಿಮದ ಹೊದಿಕೆ ಹೊಂದಿರುವ ಗ್ರೀನ್ ಲ್ಯಾಂಡ್‌ನಲ್ಲಿ. ಜಗತ್ತಲ್ಲೇ ಅತಿದೊಡ್ಡ ದ್ವೀಪ ಈ ಗ್ರೀನ್ ಲ್ಯಾಂಡ್. ಸುಮಾರು 21 ಲಕ್ಷ ಚದರ ಕಿಲೋಮೀಟರ್ ಭೂಪ್ರದೇಶ ಹೊಂದಿರುವ ಗ್ರೀನ್ ಲ್ಯಾಂಡ್ ಮುಕ್ಕಾಲು ಭಾಗ ಶಾಶ್ವತವಾದ ಹಿಮದ ಹೊದಿಕೆ ಹೊಂದಿದೆ. ಗ್ರೀನ್ ಲ್ಯಾಂಡ್‌ನ ಇತಿಹಾಸದಲ್ಲೇ ಈವರೆಗೂ ಮಳೆ ಬಿದ್ದಿರಲಿಲ್ಲ. ಆದರೆ ವಾತಾವರಣ ವೈಪರೀತ್ಯದಿಂದಾಗಿ ಆರ್ಕ್ಟಿಕ್ ಹಾಗೂ ಅಟ್ಲಾಂಟಿಕ್ ಸಾಗರಗಳ ನಡುವೆ ಇರುವ ಜಗತ್ತಿನ ಅತಿದೊಡ್ಡ ದ್ವೀಪ ಗ್ರೀನ್ ಲ್ಯಾಂಡ್‌ನಲ್ಲಿ ಭೀಕರ ಮಳೆ ಬಿದ್ದಿದೆ. ಗ್ರೀನ್ ಲ್ಯಾಂಡ್‌ನಲ್ಲಿ ಗಟ್ಟಿಯಾಗಿ ಲಕ್ಷಾಂತರ ವರ್ಷಗಳಿಂದ ನೆಲೆ ನಿಂತಿರುವ ಹಿಮ ಕರಗುತ್ತಿದೆ. ಅದರಲ್ಲೂ ಮಳೆಯ ಆರ್ಭಟದ ನಂತರ ಹಿಮ ಕರಗುವಿಕೆ ಪ್ರಮಾಣ 7 ಪಟ್ಟು ಹೆಚ್ಚಾಗಿದೆಯಂತೆ. ಜಾಗತಿಕ ತಾಪಮಾನದ ಪರಿಣಾಮದಿಂದಾಗಿ ಹಿಮದ ಹೊದಿಕೆ ಕರಗಿ ನೀರಾಗಿ ಸಮುದ್ರ ಸೇರುತ್ತಿದೆ. 1950ರಲ್ಲಿ ಗ್ರೀನ್ ಲ್ಯಾಂಡ್ ದಾಖಲೆ ಪ್ರಮಾಣದ ಹಿಮದ ಹೊದಿಕೆ ಕಂಡಿತ್ತು. ಹೀಗೆ ಸಮುದ್ರಕ್ಕೆ ಸೇರುತ್ತಿರುವ ಹಿಮದ ನೀರು, ಸಮುದ್ರದಲ್ಲಿ ನೀರಿನ ಮಟ್ಟ ಏರಲು ಕಾರಣವಾಗುತ್ತದೆ. 2019 ರಲ್ಲಿ ಗ್ರೀನ್ ಲ್ಯಾಂಡ್ ದ್ವೀಪ ಸುಮಾರು 532 ಬಿಲಿಯನ್ ಟನ್ ಮಂಜುಗಡ್ಡೆ ಕಳೆದುಕೊಂಡಿತ್ತು. ಇದೇ ರೀತಿ ಗ್ರೀನ್ ಲ್ಯಾಂಡ್‌ನಲ್ಲಿ ಹಿಮ ಕರಗುತ್ತಾ ಸಾಗಿದರೆ ಮಾನವನ ವಿನಾಶಕ್ಕೆ ಮುನ್ನುಡಿ ಬರೆಯಲಿದೆ. ಇಂತಹ ಭೀಕರ ಸನ್ನಿವೇಶ ಎದರಾದರೆ 2050ರ ವೇಳೆಗೆ ಸಮುದ್ರ ಮಟ್ಟವು 20 ಅಡಿಗಳಷ್ಟು ಹೆಚ್ಚಾಗಬಹುದು, ಇದು ಮುಂಬೈ, ನ್ಯೂಯಾರ್ಕ್ ಸೇರಿದಂತೆ ಹಲವು ಮಹಾನಗರಗಳನ್ನೇ ಬಲಿಪಡೆಯಲಿದೆ. ಭಾರತಕ್ಕೆ ದೊಡ್ಡ ಗಂಡಾಂತರ ತರಲಿದೆ ಎದುರಾಗಲಿದೆ ಎನ್ನುತ್ತಿವೆ ವರದಿಗಳು. ಕ್ಲೈಮೇಟ್ ಚೇಂಜ್ ಎಫೆಕ್ಟ್ ಭೂ ವಾತಾವರಣ ವಿಪರೀತ ಬದಲಾಗುತ್ತಿದೆ. ಮಾನವನ ದುರಾಸೆಯಿಂದಾಗಿ ಮಾಲಿನ್ಯ ಸೃಷ್ಟಿಯಾಗಿದೆ. ಮಾಲಿನ್ಯದ ಪರಿಣಾಮ ಭೂಮಿ ಮೇಲಿನ ವಾತಾವರಣ ನಾಶವಾಗುತ್ತಿದೆ. ಇದು ಪರಿಸ್ಥಿತಿಯನ್ನ ಮತ್ತಷ್ಟು ಕಠಿಣಗೊಳಿಸಿದೆ. ಇದು ವಿಶ್ವದಾದ್ಯಂತ ಅಕಾಲಿಕ ಮಳೆ ನೂರಾರು ಅವಾಂತರ ಸೃಷ್ಟಿಸುತ್ತಿದೆ. ಪ್ರಸ್ತುತ ಉತ್ತರಾಖಂಡ, ಯು.ಪಿ. ಮಹಾರಾಷ್ಟ್ರ, ಕರ್ನಾಟಕ, ಕೇರಳ, ಅಸ್ಸಾಂ, ಬಿಹಾರಗಳಲ್ಲಿನ ಮಳೆ ವಿಕೋಪ ಇದಕ್ಕೆ ಸಾಕ್ಷಿಯಾಗಿದೆ.

ಸೌಜನ್ಯ : ಪ್ರಜಾವಾಣಿ

ಸಂಗ್ರಹ : ಡಾ. ವಸುಂಧರಾ ಭೂಪತಿ

ತಮಿಳು ನಾಡಿನ ಶಾಲೆಗೆ ಲೈಬ್ರರಿ ಸೌಲಭ್ಯ ಕಲ್ಪಿಸಿದ ಯುಎಇ ಶಾಲೆಯ ವಿದ್ಯಾರ್ಥಿನಿ



ದುಬೈನ ಕಿಂಗ್ಸ್‌ಸ್ಕೂಲ್ ನಡ್ ಅಲ್ ಶೆಬಾದ ವಿದ್ಯಾರ್ಥಿನಿ ಇಶಾ ರಾಜೀವ್ ನಾಯರ್ ಎಳೆಯ ವಯಸ್ಸಿನಲ್ಲಿಯೇ ಸಮಾಜ ಸೇವೆಯಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದಳು. 2020ರಲ್ಲಿ ಕೊರೋನ ಸೋಂಕಿನ ಸಮಸ್ಯೆಯಿಂದ ಶಾಲೆಗಳು ಆನ್‌ಲೈನ್ ಕಲಿಕಾ ವಿಧಾನವನ್ನು ಬಳಸುವ ಅನಿವಾರ್ಯತೆಗೆ ಸಿಲುಕಿದಾಗ ಬಡ ಕುಟುಂಬದ ಮಕ್ಕಳಿಗೆ ತನ್ನಿಂದಾಗುವ ನೆರವು ಒದಗಿಸಲು ನಿರ್ಧರಿಸಿದ್ದಳು. ಅದರಂತೆ ಆನ್‌ಲೈನ್ ಮೂಲಕ ಬಡ ಮಕ್ಕಳಿಗೆ ಪಾಠ, ಕತೆ, ಕವಿತೆ ಹೇಳ ತೊಡಗಿದಳು. ಯುಎಇನ ತನ್ನ ಸ್ನೇಹಿತರ ದೇಣಿಗೆ ಪಡೆದು ತಮಿಳುನಾಡಿನ ಕಾರೈಕುಡಿಯ ಗ್ರಾಮವೊಂದರ ಸಣ್ಣ ಶಾಲೆಯಲ್ಲಿ 200 ಪುಸ್ತಕಗಳುಳ್ಳ ಲೈಬ್ರರಿ ಆರಂಭಿಸುವ ಮೂಲಕ ಭಾರತದ 75ನೇ ಸ್ವಾತಂತ್ರ್ಯೋತ್ಸವದ ಸಂಭ್ರಮ ಆಚರಿಸಿದ್ದಾಳೆ. ಭಾರತ ಮೂಲದ ಸ್ಟೋರಿ ಟೈಮ್ ಎಂಬ ಎನ್.ಜಿ.ಒ. ನೆರವಿನಿಂದ ಇಶಾ "ಫ್ರಂ ಒನ್ ಚೈಲ್ಡ್ ಟು ಅನದರ್ ಚೈಲ್ಡ್ – ಎವ್ರಿ ಬುಕ್ ಮ್ಯಾಟರ್ಸ್" ಎಂಬ ಅಭಿಯಾನ ಆರಂಭಿಸಿ ಸಹಾಯದ ಅಗತ್ಯವಿರುವ ಶಾಲೆಗಳನ್ನು ಸಂಪರ್ಕಿಸಿ ಈ ಅಭಿಯಾನದ ಮೂಲಕ 4 ರಿಂದ 14 ವರ್ಷದ ಮಕ್ಕಳಿಗೆ ಸೂಕ್ತವಾದ ಕತೆ ಪುಸ್ತಕ ಸಂಗ್ರಹಿಸಿದ್ದಾಳೆ. ಈ ಅಭಿಯಾನದ ಯಶಸ್ಸಿನಿಂದ ಪ್ರೇರಣೆಗೊಂಡಿರುವ ಇಶಾ ಮುಂದಿನ ದಿನಗಳಲ್ಲಿ ಅಸ್ಸಾಂ ಮತ್ತು ಡಾರ್ಜಿಲಿಂಗ್‌ನ ಕುಗ್ರಾಮಗಳಲ್ಲಿ 500 ಪುಸ್ತಕಗಳುಳ್ಳ ಲೈಬ್ರರಿ ಆರಂಭಿಸುವ ಯೋಜನೆ ರೂಪಿಸಿದ್ದಾಳೆ. ದೇಣಿಗೆ ರೂಪದಲ್ಲಿ ಬಂದ ಹಣದಿಂದ ರಿಕ್ಷಾವೊಂದನ್ನು ಖರೀದಿಸಿ ಅದರ ಮೂಲಕ ಅಲ್ಲಿನ ವಿದ್ಯಾರ್ಥಿಗಳ ಮನೆಬಾಗಿಲಿಗೆ ಪುಸ್ತಕ ತಲುಪಿಸುವ ಮತ್ತೊಂದು ಯೋಜನೆಯೂ ರೂಪುಗೊಂಡಿದೆ.

ಸೌಜನ್ಯ : ವಾರ್ತಾಭಾರತಿ

ಅಕ್ಷರಸಂತ ಹರೇಕಳ ಹಾಜಬ್ಬ!



ದಕ್ಷಿಣ ಕನ್ನಡ ಜಿಲ್ಲೆಯ ಅಕ್ಷರಸಂತ ಹರೇಕಳ ಹಾಜಬ್ಬ ನವೆಂಬರ್ 8, 2021ರಂದು ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರಿಂದ ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸಿದರು. ಪ್ರಶಸ್ತಿ ಪ್ರದಾನ ಸಭಾಂಗಣ ದರ್ಬಾರ್ ಹಾಲ್‌ನಲ್ಲಿ ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸಲು ಹರೇಕಳ ಹಾಜಬ್ಬ ಹೆಸರು ಕರೆಯುತ್ತಿದ್ದಂತೆ ಬರಿಗಾಲಿನಲ್ಲಿ ಆಗಮಿಸಿದರು. 2020ರ ಗಣರಾಜ್ಯೋತ್ಸವ ಸಂದರ್ಭದಲ್ಲಿ ಹರೇಕಳ ಹಾಜಬ್ಬರಿಗೆ ಪದ್ಮಶ್ರೀ ಪ್ರಶಸ್ತಿ ಘೋಷಣೆಯಾಗಿತ್ತು. ಮಾರ್ಚ್ ತಿಂಗಳಿನಲ್ಲಿ ಪದ್ಮಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಬೇಕಾಗಿತ್ತು, ಆದರೆ ಕೊರೊನಾ ಲಾಕ್‌ಡೌನ್ ಕಾರಣದಿಂದ ಕಾರ್ಯಕ್ರಮ ಮುಂದೂಡಲ್ಪಟ್ಟಿತ್ತು. ಗ್ರಾಮೀಣ ಮಕ್ಕಳಿಗೆ ಉಚಿತ ಶಿಕ್ಷಣ ಹರೇಕಳ ಹಾಜಬ್ಬರು ಕಳೆದ 21 ವರ್ಷಗಳಿಂದ ತನ್ನೂರು ಹರೇಕಳದ ನ್ಯೂ ಪಡ್ಪು ಗ್ರಾಮದಲ್ಲಿ ಗ್ರಾಮೀಣ ಮಕ್ಕಳಿಗೆ ಉಚಿತ ಶಿಕ್ಷಣ ನೀಡುತ್ತಿದ್ದಾರೆ. ಇದಕ್ಕಾಗಿ ಮಂಗಳೂರು ನಗರದಲ್ಲಿ ಕಿತ್ತಳೆ ಹಣ್ಣನ್ನು ಮಾರಿ, ಶಾಲೆಯ ಖರ್ಚನ್ನು ನೋಡಿಕೊಳ್ಳುತ್ತಿದ್ದಾರೆ. ಹಾಜಬ್ಬರ ವ್ಯಕ್ತಿತ್ವಕ್ಕೆ ಎಲ್ಲರೂ ಮಾರುಹೋಗಿದ್ದಾರೆ. ರಾಷ್ಟ್ರದ ವಿವಿಧ ಮಾಧ್ಯಮಗಳು ಹರೇಕಳ ಹಾಜಬ್ಬರನ್ನು ಗುರುತಿಸಿ ಗೌರವಿಸಿದೆ. 2020ರ ಗಣರಾಜ್ಯೋತ್ಸವದಂದು ಕರೆ ಮಾಡಿದ ವ್ಯಕ್ತಿ ಹಿಂದಿಯಲ್ಲಿ ಪದ್ಮಶ್ರೀ ಪ್ರಶಸ್ತಿಗೆ ಆಯ್ಕೆಯಾಗಿರುವ ಬಗ್ಗೆ ಮಾಹಿತಿ ಹೇಳಿದ್ದರು. ಆದರೆ ಹಿಂದಿ ಅರ್ಥವಾಗದ ಹಾಜಬ್ಬರಿಗೆ ಸಂಜೆಯವರೆಗೂ ಪದ್ಮಶ್ರೀ ಪ್ರಶಸ್ತಿಗೆ ಆಯ್ಕೆಯಾಗಿರುವ ವಿಚಾರವೇ ಗೊತ್ತಾಗಿಲ್ಲ. ಆ ಬಳಿಕ ಮಾಧ್ಯಮದ ಪ್ರತಿನಿಧಿಗಳು ಹಾಜಬ್ಬರಿಗೆ ಶುಭಾಶಯ ಸಲ್ಲಿಸಿದಾಗ ಹಾಜಬ್ಬರಿಗೆ ತನಗೆ ದೇಶದ ಅತ್ಯುನ್ನತ ಪ್ರಶಸ್ತಿಗಳಲ್ಲಿ ಒಂದಾದ ಪದ್ಮಶ್ರೀ ಪ್ರಶಸ್ತಿ ಬಂದಿರುವುದು ತಿಳಿದುಬಂದಿತ್ತು. 2004ರಲ್ಲಿ ಕನ್ನಡ ಪತ್ರಿಕೆಯೊಂದು ಹಾಜಬ್ಬರನ್ನು ವರ್ಷದ ವ್ಯಕ್ತಿ ಎಂದು ಪ್ರಶಸ್ತಿ ನೀಡಿ ಗುರುತಿಸುವ ಮೂಲಕ ಹಾಜಬ್ಬ ಬೆಳಕಿಗೆ ಬಂದಿದ್ದರು. ಬಳಿಕ ದೆಹಲಿಯ ಸಿಎನ್‌ಎನ್– ಐಬಿಎನ್ ರಿಯಲ್ ಹೀರೋ ಪ್ರಶಸ್ತಿ ನೀಡಿ ಗೌರವಿಸಿತ್ತು. ಕಿತ್ತಳೆ ಹಣ್ಣು ಮಾರಾಟ ಮಾಡುವ ಕಾಯಕ ಮಾಡುತ್ತಿದ್ದ ಹಾಜಬ್ಬ ತಾವೇ ಶಾಲೆಯೊಂದನ್ನು ತನ್ನೂರಿನಲ್ಲಿ ನಿರ್ಮಿಸಿದ್ದರು. ಕಿತ್ತಳೆ ಮಾರಾಟ ಮಾಡುತ್ತಿದ್ದಾಗ ವಿದೇಶಿ ಮಹಿಳೆಯ ಆಂಗ್ಲ ಭಾಷೆಯ ಪ್ರಶ್ನೆಗೆ ಉತ್ತರ ನೀಡಲಾಗದ ಹಾಜಬ್ಬರಿಗೆ ಶಿಕ್ಷಣದ ಮಹತ್ವ ಅರಿವಾಗಿತ್ತು. ಅಂದೇ ಶಾಲೆ ಕಟ್ಟುವ ನಿರ್ಣಯ ಮಾಡಿದರು ಹಾಜಬ್ಬ. ನಿಸ್ವಾರ್ಥ ಸಮಾಜ ಸೇವಕ, ಶಿಕ್ಷಣ ಪ್ರೇಮಿ, ಅಕ್ಷರಸಂತ ಹರೇಕಳ ಹಾಜಬ್ಬರ ಮಡಿಲಿಗೆ ಪದ್ಮಶ್ರೀ ಪ್ರಶಸ್ತಿ ಸೇರಿದೆ.

ಸೌಜನ್ಯ : ಒನ್ ಇಂಡಿಯಾ



'ಟೈಮ್' ಮಕ್ಕಳ ವರ್ಷದ ವ್ಯಕ್ತಿ ಗೀತಾಂಜಲಿ ರಾವ್

ವಿಶ್ವದ ಪ್ರತಿಷ್ಠಿತ 'ಟೈಮ್' ನಿಯತಕಾಲಿಕೆ ಭಾರತೀಯ ಮೂಲದ 15 ವರ್ಷದ ಬಾಲಕಿ ಗೀತಾಂಜಲಿ ರಾವ್ ಅವರನ್ನು ಮಕ್ಕಳ ವಿಭಾಗದಲ್ಲಿ ವರ್ಷದ ವ್ಯಕ್ತಿ ಪ್ರಶಸ್ತಿಗೆ ಆಯ್ಕೆ ಮಾಡಿದೆ. ತಂತ್ರಜ್ಞಾನದ ಸಹಾಯದಿಂದ ಸೈಬರ್ ಬೆದರಿಕೆ, ಅಶುದ್ಧ ಕುಡಿಯುವ ನೀರಿನಂತಹ ಸಮಸ್ಯೆಗೆ ಪರಿಹಾರ ಕಂಡು ಹಿಡಿದ ಕಾರಣಕ್ಕೆ ಗೀತಾಂಜಲಿ ರಾವ್ ಈ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಸಾಮಾಜಿಕ ಮತ್ತು ಸಾಂಸ್ಕೃತಿಕ ಪುಟಗಳು

ಸಂಗ್ರಹ : ಅಖಿಲಾ ವಿದ್ಯಾಸಂದ್ರ

ಕೃತಕ ಅರಣ್ಯ ನಿರ್ಮಿಸಿದ ಲೈನ್‌ಮ್ಯಾನ್ ದುರ್ಗಾಸಿಂಗ್



ಪ್ರಕೃತಿ ಮುನಿದಾಗ, ಪ್ರಕೃತಿಯ ರಕ್ಷಣೆಯ ನೆನಪಾಗುತ್ತದೆ. ಬಿಸಿಲಿನ ತಾಪಕ್ಕೆ ಬಳಲಿ ಬೆಂಡಾದಾಗ ಮರದ ಮಹತ್ವ ಅರಿವಾಗುತ್ತದೆ. ಮಳೆ ಬಾರದೇ ಭೂಮಿ ಬರಡಾದಾಗ ಕಾಡಿನ ಮಹತ್ವ ತಿಳಿಯುತ್ತದೆ. ಇದರ ಪರಿಣಾಮವಾಗಿ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ನಾವೆಲ್ಲಾ ಒಂದೊಂದು ಗಿಡ ನೆಟ್ಟು, ಫೋಟೋಗೆ ಪೋಸ್ ನೀಡಿ ಮನೆಗೆ ಮರಳುತ್ತೇವೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲೂಕಿನ ಲೈನ್‌ಮ್ಯಾನ್ ದುರ್ಗಾಸಿಂಗ್, ಅಪ್ರತಿಮ ಪರಿಸರ ಪ್ರೇಮಿ, ಸಾವಿರಾರು ಗಿಡಗಳನ್ನು ಸಾಕಿ ಪೋಷಿಸಿ, ಮಿನಿ ಅರಣ್ಯವನ್ನೇ ನಿರ್ಮಿಸಿದ್ದಾರೆ. ಪರಿಸರದ ಕತ್ತಲನ್ನು ಹೋಗಲಾಡಿಸುವ ಲೈನ್‌ಮ್ಯಾನ್ ದುರ್ಗಾಸಿಂಗ್ ಈಗ ಮರಗಳಿಗೂ ಬೆಳಕಾಗಿ ಉಸಿರಾಗಿದ್ದಾರೆ. ವಿದ್ಯುತ್ ತಂತಿಗೆ ಅಡ್ಡಿಯಾದ ಮರಗಳ ಕೊಂಬೆಗಳನ್ನು ಕಡಿದಿರುವುದಕ್ಕೆ ಪಶ್ಚಾತ್ತಾಪವಾಗಿ ಪ್ರತಿ ಮರದ ಕೊಂಬೆ ಕಡಿದಾಗ ಒಂದೊಂದು ಗಿಡ ನೆಟ್ಟು ಈಗ ಮಿನಿ ಅರಣ್ಯವನ್ನೇ ನಿರ್ಮಿಸಿದ್ದಾರೆ. ಇವರು ಸುಮಾರು ಐದು ಕಡೆಗಳಲ್ಲಿ ಕೃತಕ ಅರಣ್ಯವನ್ನು ನಿರ್ಮಿಸಿದ್ದಾರೆ. ಜಪಾನ್ ವಿಜ್ಞಾನಿ ಮಿಯಾ ವಾಕಿ ಅವರ ಕಡಿಮೆ ಜಾಗದಲ್ಲಿ ದಟ್ಟ ಕಾಡು ಬೆಳೆಸುವುದು ಹೇಗೆ ಎನ್ನುವ ವಿಧಾನವನ್ನು ಅನುಸರಿಸಿ ಕಾಡು ಬೆಳೆಸಲು ಮುಂದಾಗಿದ್ದಾರೆ. ಈ ಪ್ರಯೋಗವನ್ನು ತನ್ನ ಮನೆಯಿಂದಲೇ ಆರಂಭಿಸಿದ ದುರ್ಗಾಸಿಂಗ್, ಕೇವಲ 1000 ಚದರಡಿಯ ಜಾಗದಲ್ಲಿ 400ಕ್ಕೂ ಮಿಕ್ಕಿದ ಗಿಡಗಳನ್ನು ನೆಟ್ಟಿದ್ದಾರೆ. ಕೇವಲ ಒಂದು ವರ್ಷದಲ್ಲೇ ಆಳೆತ್ತರಕ್ಕೆ ಏರಿರುವ ಈ ಗಿಡಗಳು ಇನ್ನು ಎರಡು ವರ್ಷಗಳಲ್ಲಿ ಬೆಳೆದು ದಟ್ಟ ಕಾಡಾಗುವ ಹಂತದಲ್ಲಿದೆ. ಆಧುನಿಕ ತಂತ್ರಜ್ಞಾನ ಬಳಸಿ ಕೃತಕ ಕಾಡು ನಿರ್ಮಿಸುವ ಆಲೋಚನೆ ಇದೀಗ ಶಾಲಾ–ಕಾಲೇಜುಗಳಿಗೂ ತಲುಪಿದೆ. ಈಗಾಗಲೇ ಗೋಳಿತೊಟ್ಟು, ಆಲಂತಾಯ ಗ್ರಾಮದ ಶಾಲೆಗಳಲ್ಲಿ ಈ ಕೃತಕ ಅರಣ್ಯವನ್ನು ನಿರ್ಮಿಸಿರುವ ದುರ್ಗಾಸಿಂಗ್, ಆಸಕ್ತಿಯಿರುವವರ ಖಾಸಗಿ ಜಮೀನಿನಲ್ಲೂ ಕಾಡು ಬೆಳೆಸಿದ್ದಾರೆ. ದುರ್ಗಾಸಿಂಗ್‌ರ ಈ ಪರಿಸರ ಸಂರಕ್ಷಣೆ ಮತ್ತು ಕರ್ತವ್ಯದ ನಡುವೆಯೇ ಪರಿಸರದ ಉಳಿವಿಗಾಗಿ ದುಡಿಯುತ್ತಿರುವುದು ನಿಜಕ್ಕೂ ಶ್ಲಾಘನೀಯವಾದುದಾಗಿದೆ.

ಸೌಜನ್ಯ : ಪ್ರಜಾವಾಣಿ

ಆಕ್ವಾಮ್ಯಾನ್ ಈಶ್ವರ್ ಮಲ್ಪೆ



ಆಕ್ವಾಮ್ಯಾನ್ ಎನ್ನುವ ಹಾಲಿವುಡ್ ಸಿನಿಮಾ ಕೆಲ ವರ್ಷಗಳ ಹಿಂದೆ ಬಿಡುಗಡೆ ಕಂಡು ಯಶಸ್ವಿಯಾಗಿತ್ತು. ಅದೇ ರೀತಿ ಮನುಷ್ಯ ಸಹಜ ಸಾಮರ್ಥ್ಯದಿಂದಲೇ ಆಕ್ವಾ ಮ್ಯಾನ್ ಎನ್ನಿಸಿಕೊಂಡವರು ಉಡುಪಿಯ ಮುಳುಗುತಜ್ಞ ಈಶ್ವರ್ ಮಲ್ಪೆ. ಕಡಲ ತೀರದ ನಗರವಾದ ಉಡುಪಿಯಲ್ಲಿ ಇದುವರೆಗೂ 20 ಮಂದಿಯನ್ನು ಸಮುದ್ರದಿಂದ ಮೇಲೆತ್ತಿ ಬದುಕಿಸಿದ್ದಾರೆ. ಅಲ್ಲದೆ 200ಕ್ಕೂ ಹೆಚ್ಚು ಮೃತದೇಹಗಳನ್ನು ಸಮುದ್ರದಿಂದ ಮೇಲೆತ್ತಿದ್ದಾರೆ. 45ರ ಹರೆಯದ ಈಶ್ವರ್ ಮಲ್ಪೆ ಅವರು ಪರಿಶ್ರಮ ಮತ್ತು ಕಠಿಣ ಅಭ್ಯಾಸದಿಂದ ಮುಳುಗುತಜ್ಞರಾದವರು. ದಿನದ ಯಾವುದೇ ಹೊತ್ತಿನಲ್ಲಿಯೂ ಅವರಿಗೆ ಸಮುದ್ರದಲ್ಲಿ ಅಪಾಯಕ್ಕೆ ಸಿಲುಕಿಕೊಂಡವರ ರಕ್ಷಣೆಗೆ ಕರೆ ಬರುತ್ತದೆ. ತಕ್ಷಣವೇ ಅವರು ಹೊರಟು ನಿಲ್ಲುತ್ತಾರೆ. ಮೊದಲಿಗೆ ಆಕ್ಸಿಜನ್ ಸಿಲಿಂಡರ್ ಸಹಾಯವಿಲ್ಲದೆ ಅವರು ಮುಳುಗು ಹಾಕುತ್ತಿದ್ದರು. ಮಲ್ಪೆ ಯಾಂತ್ರಿಕ ಸೊಸೈಟಿ ಅವರು ದೇಣಿಗೆಯಾಗಿ ಆಕ್ಸಿಜನ್ ಸಿಲಿಂಡರ್ ಸೂಟ್ ನೀಡಿದ್ದಾರೆ ಎಂದು ಈಶ್ವರ್ ಸ್ಮರಿಸಿಕೊಳ್ಳುತ್ತಾರೆ. ಜೀವರಕ್ಷಕ ದಳ, ಪೊಲೀಸರು ಕೂಡಾ ಇವರ ಸಹಾಯ ಕೋರಿ ಕರೆ ಮಾಡುತ್ತಾರೆ. ಯಥೇಚ್ಛ ಮಳೆ ಬೀಳುವ ಪ್ರದೇಶವಾಗಿರುವುದರಿಂದ ಎಷ್ಟೊಂದು ವೇಳೆ ನದಿ, ತೊರೆಗಳು ಮೈದುಂಬಿ ಹರಿಯುತ್ತಿರುವ ಸಮಯದಲ್ಲಿ ರಕ್ಷಣಾ ಕಾರ್ಯ ತುಂಬಾ ಸವಾಲಾಗಿ ಪರಿಣಮಿಸುತ್ತದೆ ಎಂದು ಈಶ್ವರ್ ಹೇಳುತ್ತಾರೆ. ಅಂಥಾ ಸಮಯದಲ್ಲಿ ಅಪಾಯಕ್ಕೆ ಸಿಲುಕಿಕೊಂಡವರ ರಕ್ಷಣೆಯ ಜೊತೆಗೆ ತಮ್ಮ ರಕ್ಷಣೆಯ ಸವಾಲು ಕೂಡಾ ಇರುತ್ತದೆ ಎಂದು ಮಾಹಿತಿ ಹಂಚಿಕೊಂಡಿದ್ದಾರೆ. ಕಳೆದ 20 ವರ್ಷಗಳಿಂದ ಹಲವು ಅಪಾಯಕಾರಿ ಸನ್ನಿವೇಶಗಳಲ್ಲಿಯೂ ಅವರು ತಮ್ಮ ಪ್ರಾಣ ಲೆಕ್ಕಿಸದೆ ಹಲವರ ಜೀವ ಉಳಿಸಿದ್ದಾರೆ. ಇಂದು ಸಮುದ್ರ ಹಾಗೂ ನದಿಯಲ್ಲಿ ಶವ ಪತ್ತೆಗಾಗಿ ಬಹಳ ದೂರದ ಸ್ಥಳಗಳಿಂದಲೂ ಬುಲಾವ್ ಬರುತ್ತಿದೆ. ಈಶ್ವರ್ ಆಕ್ಸಿಜನ್ ರೀಫಿಲ್ಲಿಂಗ್ ಕಿಟ್‌ಗಾಗಿ ಎದುರು ನೋಡುತ್ತಿದ್ದಾರೆ. ಅದೊಂದು ಇದ್ದುಬಿಟ್ಟರೆ ಯಾವುದೇ ತೊಡಕಿಲ್ಲದೆ ಈಶ್ವರ್ ತಮ್ಮ ಸಮಾಜ ಸೇವೆ ಮುಂದುವರಿಸಬಹುದು. ಈಶ್ವರ್ ಅವರು ಮಲ್ಪೆ ಬೀಚಿನಲ್ಲಿ ತಾಯಿ, ಪತ್ನಿ ಹಾಗೂ ಮೂವರು ಮಕ್ಕಳೊಡನೆ ವಾಸವಿದ್ದಾರೆ. ಮನೆಯಲ್ಲಿ ಆರ್ಥಿಕ ತೊಂದರೆ ಇದ್ದರೂ ತಾವು ಯಾವತ್ತೂ ಹಣಕ್ಕಾಗಿ ರಕ್ಷಣೆ ಮಾಡಿದ್ದಿಲ್ಲ ಎಂಬ ಆತ್ಮವಿಶ್ವಾಸದ ನುಡಿಗಳನ್ನಾಡುತ್ತಾರೆ.

ಸೌಜನ್ಯ : ಕನ್ನಡಪ್ರಭ

ಕತ್ತಲೆಯನ್ನು ಶಪಿಸುವುದಕ್ಕಿಂತಲೂ ದೀಪ ಹಚ್ಚುವುದು ಉತ್ತಮ. ಅಂದರೆ ಕಷ್ಟಗಳು ಬಂದಾಗ ಇತರರನ್ನು ದೂಷಿಸುವ ಬದಲು ಕಷ್ಟಕ್ಕೆ ಪರಿಹಾರ ಹುಡುಕುವುದು ಬುದ್ಧಿವಂತರ ಲಕ್ಷಣ

– ಜಾನ್ ಡ್ರೈಡನ್

ಕ್ರೀಡಾ ರಂಗ

ಸಂಗ್ರಹ : ಡಾ. ವಿ. ಪ್ರಶಾಂತ

ಒಲಿಂಪಿಕ್ ಎಂಬುದು ಅಂತರರಾಷ್ಟ್ರೀಯ ಕ್ರೀಡಾಕೂಟವಾಗಿದೆ. ಇದು ಅನೇಕ ಕ್ರೀಡೆಗಳನ್ನು ಒಳಗೊಂಡಿದೆ. ಇದರಲ್ಲಿ ಬೇಸಗೆಯ ಕ್ರೀಡಾಕೂಟ ಹಾಗೂ ಚಳಿಗಾಲದ ಕ್ರೀಡಾಕೂಟಗಳೆಂದು ವರ್ಗೀಕರಣ ಮಾಡಲಾಗಿದೆ. ಎರಡೂ ರೀತಿಯ ಕೂಟಗಳನ್ನು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಆಯೋಜಿಸಲಾಗುವುದು. ಕ್ರಿ.ಪೂ. 776ರಲ್ಲಿ ಗ್ರೀಸ್ ದೇಶದ ಒಲಿಂಪಿಯಾದಲ್ಲಿ ಮೂಲ ಒಲಿಂಪಿಕ್ ಕ್ರೀಡಾಕೂಟವನ್ನು ಆಯೋಜಿಸಲಾಗಿತ್ತು. ನಂತರ ಕ್ರಿ.ಶ. 393ರವರೆಗೆ ಇದು ಮುಂದುವರೆಯಿತು. ಕಾರಣಾಂತರಗಳಿಂದ ನಿಂತುಹೋದ ಗ್ರೀಸ್ ದೇಶದ ಕವಿ ಹಾಗೂ ಪತ್ರಿಕಾ ಸಂಪಾದಕನಾಗಿದ್ದ ಪನಾಜಿಯೋಟಿಸ್ ಸೌಟ್ಸಾಸ್ ಈ ಕ್ರೀಡಾಕೂಟವನ್ನು ಮತ್ತೆ ಪುನರಾರಂಭಿಸುವುದರಲ್ಲಿ ಆಸಕ್ತಿ ತೋರಿದನು. ಮುಂದೆ 1859ರಲ್ಲಿ ಇವಾಂಜೆಲಾಸ್ ಝಪ್ಪಾಸ್ ಎಂಬುವವನು ನವೀನಕಾಲದ ಪ್ರಪ್ರಥಮ ಅಂತರರಾಷ್ಟ್ರೀಯ ಒಲಿಂಪಿಕ್ ಕ್ರೀಡಾಕೂಟವನ್ನು ಪ್ರಾಯೋಜಿಸಿದನು. 1894ರಲ್ಲಿ ಫ್ರಾನ್ಸ್ ದೇಶದ ಗಣ್ಯನಾದ ಬ್ಯಾರನ್ ಪಿಯರಿ ದ ಕೂಬರ್ತಿಯು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯನ್ನು ಹುಟ್ಟುಹಾಕಿದನು. ಈ ಸಂಸ್ಥೆಯ ವತಿಯಿಂದ ಮೊದಲನೆಯ ಬೇಸಿಗೆ ಒಲಿಂಪಿಕ್ ಕ್ರೀಡಾಕೂಟವನ್ನು ಗ್ರೀಸ್ ದೇಶದ ಅಥೆನ್ಸ್ ನಗರದಲ್ಲಿ 1896ರಲ್ಲಿ ನಡೆಸಲಾಯಿತು. ಅಂದು ಕೆಲವೇ ರಾಷ್ಟ್ರಗಳು ಪಾಲ್ಗೊಂಡಿದ್ದ ಒಲಿಂಪಿಕ್ ಕ್ರೀಡಾಕೂಟ ಇಂದು ಹೆಚ್ಚೂ ಕಡಿಮೆ ವಿಶ್ವದ ಎಲ್ಲಾ ದೇಶಗಳೂ ಭಾಗವಹಿಸುವಷ್ಟರ ಮಟ್ಟಿಗೆ ಅಗಾಧವಾಗಿ ಬೆಳೆದಿದೆ.

ಒಲಂಪಿಕ್ ಕ್ರೀಡಾಕೂಟ ನಡೆಸಿದ ವರ್ಷಗಳು ಮತ್ತು ಆತಿಥ್ಯ ವಹಿಸಿದ ರಾಷ್ಟ್ರಗಳು

1896 ಅಥೆನ್ಸ್, ಗ್ರೀಸ್
1900 ಪ್ಯಾರಿಸ್, ಫ್ರಾನ್ಸ್
1904 ಸೇಂಟ್ ಲೂಯಿಸ್, ಯುಎಸ್‌ಎ
1906 ಅಥೆನ್ಸ್, ಗ್ರೀಸ್
1908 ಲಂಡನ್, ಯುನೈಟೆಡ್ ಕಿಂಗ್‌ಡಂ
1912 ಸ್ಟಾಕ್‌ಹೋಂ, ಸ್ವೀಡನ್
1916 ಬರ್ಲಿನ್, ಜರ್ಮನಿ (ಒಂದನೇ ಮಹಾಯುದ್ದದ ಕಾರಣ ರದ್ದಾಗಿತ್ತು)
1920 ಬೆಲ್ಜಿಯಂ ಎಂಟ್ವರ್ಪ್, ಬೆಲ್ಜಿಯಂ
1924 ಪ್ಯಾರಿಸ್, ಫ್ರಾನ್ಸ್
1928 ನೆದರ್‌ಲ್ಯಾಂಡ್ಸ್ ಆಮ್‌ಸ್ಟರ್‌ಡ್ಯಾಂ
1932 ಲಾಸ್ ಏಂಜೆಲ್ಸ್, , ಯು.ಎಸ್.ಎ
1936 ಬರ್ಲಿನ್, ಜರ್ಮನಿ
1940 ಟೋಕ್ಯೊ, ಜಪಾನ್, ಫಿನ್‌ಲ್ಯಾಂಡ್ ಹೆಲ್ಸಿಂಕಿ, (ಎರಡನೇ ಮಹಾಯುದ್ದದ ಕಾರಣ ರದ್ದಾಗಿತ್ತು)
1944 ಯುನೈಟೆಡ್ ಕಿಂಗ್ಡಂ (ಎರಡನೇ ಮಹಾಯುದ್ದದ ಕಾರಣ ರದ್ದಾಗಿತ್ತು)
1948 ಯುನೈಟೆಡ್ ಕಿಂಗ್ಡಂ ಲಂಡನ್
1952 ಫಿನ್‌ಲ್ಯಾಂಡ್ ಹೆಲ್ಸಿನ್ಕಿ, ಫಿನ್ಲೆಂಡ್
1956 ಮೆಲ್ಬೋರ್ನ್, ಆಸ್ಟ್ರೇಲಿಯ, ಸ್ವೀಡನ್, ಸ್ಟಾಕ್‌ಹೋಂ
1960 ರೋಮ್, ಇಟಲಿ
1964 ಟೋಕಿಯೋ, ಜಪಾನ್
1968 ಮೆಕ್ಸಿಕೊ
1972 ಮ್ಯೂನಿಕ್, ಪಶ್ಚಿಮ ಜರ್ಮನಿ
1976 ಕೆನಡಾ ಮಾಂಟ್ರಿಯಲ್‌ಟ, ಕೆನಡಾ
1980 ಮಾಸ್ಕೊ, ಸೋವಿಯೆಟ್ ಒಕ್ಕೂಟ
1984 ಲಾಸ್ ಏಂಜಲೀಸ್, ಯುಎಸ್‌ಎ
1988 ಸಿಯೋಲ್, ದಕ್ಷಿಣ ಕೊರಿಯ
1992 ಸ್ಪೇನ್ ಬಾರ್ಸಿಲೋನ, ಸ್ಪೇನ್
1994 ಲಿಲ್ಲ್‌ಹ್ಯಾಮರ್, ನಾರ್ವೆ
1996 ಅಟ್ಲಾಂಟ, ಯುಎಸ್‌ಎ
2000 ಸಿಡ್ನಿ, ಆಸ್ಟ್ರೇಲಿಯ
2002 ಸಾಲ್ಟ್ ಲೇಕ್ ಸಿಟಿ, ಯು ಎಸ್ ಎ
2004 ಅಥೆನ್ಸ್, ಗ್ರೀಸ್
2008 ಬೀಜಿಂಗ್, ಚೀನಾ
2012 ಯುನೈಟೆಡ್ ಕಿಂಗ್‌ಡಂ
2016 ರಿಯೊ ಡಿ ಜೆನೆರೋ, ಬ್ರೆಜಿಲ್
2020 ಟೋಕಿಯೋ, ಜಪಾನ್

2020ರ ಟೋಕಿಯೋ ಒಲಂಪಿಕ್ಸ್‌ನಲ್ಲಿ ಪದಕ ವಿಜೇತರಾದ ಭಾರತೀಯರು



ನೀರಜ್ ಚೋಪ್ರ
ಚಿನ್ನದ ಪದಕ
ಜಾವಲಿನ್




ಮೀರಾಬಾಯಿ ಚಾನು
ಬೆಳ್ಳಿ ಪದಕ
ವೈಟ್ ಲಿಫ್ಟಿಂಗ್



ಪಿ.ವಿ. ಸಿಂಧು
ಕಂಚು ಪದಕ
ಬ್ಯಾಡ್ಮಿಂಟನ್



ಬಜರಂಗ್ ಪುನಿಯಾ
ಕಂಚು ಪದಕ
ಕುಸ್ತಿ



ರವಿಕುಮಾರ್ ದಹಿಯಾ
ಬೆಳ್ಳಿ ಪದಕ
ಕುಸ್ತಿ



ಲೋವ್ಲಿನ ಬೋರ್ಗೇನ್
ಕಂಚು ಪದಕ
ಬಾಕ್ಸಿಂಗ್



ಹಾಕಿ ತಂಡ ಪುರುಷರು
ಕಂಚು ಪದಕ
ಹಾಕಿ

ಶ್ರದ್ಧಾಂಜಲಿ

ಬುದ್ಧದೇವ್ ಗುಹಾ (29.06.1936–29.08.2021)



ಕಲ್ಕತ್ತಾ ವಿಶ್ವವಿದ್ಯಾಲಯದ ಸೇಂಟ್ ಕ್ಸೇವಿಯರ್ ಕಾಲೇಜಿನಲ್ಲಿ ಗುಹಾ ಅವರು ಅಧ್ಯಯನ ಮಾಡಿದರು. ಅವರು ತಮ್ಮ ಆರಂಭಿಕ ವರ್ಷಗಳನ್ನು ಪೂರ್ವ ಬಂಗಾಳದ (ಈಗ ಬಾಂಗ್ಲಾದೇಶ) ವಿವಿಧ ಜಿಲ್ಲೆಗಳಲ್ಲಿ ಕಳೆದರು. ರಂಗಪುರ, ಜೈಪುರಹತ್ ಮತ್ತು ಬಾರಿಸಾಲ್‌ನಲ್ಲಿನ ಆ ದಿನಗಳನ್ನು ಅವರ 'ರಿವು' ಸರಣಿಯಲ್ಲಿ ಚಿತ್ರಿಸಲಾಗಿದೆ. 'ರಿವು' ಸರಣಿಯ ಕೆಲವು ಪುಸ್ತಕಗಳು ಅವರ ಸ್ನೇಹಿತರಿಗೆ ಮೀಸಲಾಗಿವೆ. 'ಸೈಡ್ ಕಿಕ್ ರುದ್ರ'ನೊಂದಿಗೆ ಕಾಡುಗಳನ್ನು ಅನ್ವೇಷಿಸುವ ಕಾಲ್ಪನಿಕ ಪಾತ್ರವಾದ 'ರಿಜುಡಾ'ದ ಸೃಷ್ಟಿಕರ್ತರೂ ಆಗಿದ್ದರು. ಗುಹಾ ಅವರು ವೃತ್ತಿಯಲ್ಲಿ ಚಾರ್ಟರ್ಡ್ ಅಕೌಂಟೆಂಟ್, ಪ್ರವೃತ್ತಿಯಲ್ಲಿ ಸಾಹಿತಿಯಾಗಿದ್ದರು. ಮಧುಕರಿ ಸೇರಿದಂತೆ ಹಲವಾರು ಮಹೋನ್ನತ ಕೃತಿಗಳನ್ನು ರಚಿಸಿ ಮನೆಮಾತಾಗಿದ್ದಾರೆ. ಬಂಗಾಳಿ ಸಾಹಿತಿ ಗುಹಾ ಅವರು ಈಶಾನ್ಯ ಭಾರತದ ಅರಣ್ಯ ಸಂಪತ್ತು ಮತ್ತು ಪ್ರಕೃತಿಯನ್ನು ಅವರ ಬರಹದಲ್ಲಿ ಒಡಮೂಡಿಸಿದ್ದಾರೆ. ಅವರು ರಚಿಸಿದ ಕೃತಿಗಳು ವಿಶ್ವದೆಲ್ಲೆಡೆ ಗಮನ ಸೆಳೆದಿದ್ದವು. ಇವರ ಸಾಹಿತ್ಯ ಸೇವೆಗೆ ಹಲವಾರು ಪ್ರಶಸ್ತಿಗಳು ಸಂದಿವೆ.

ಶಂಕರ್ ರಾವ್ (18.10.2021)



ಕನ್ನಡ ಚಿತ್ರರಂಗದಲ್ಲಿ ಪಾಪ ಪಾಂಡು ಧಾರವಾಹಿ ಮೂಲಕ ಜನಪ್ರಿಯರಾಗಿದ್ದರು. ಕಲಾವಿದ ಶಂಕರ್ ರಾವ್, ಶಾಲಾ ದಿನಗಳಿಂದಲೂ ನಟನೆಯಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿದ್ದು, ಹವ್ಯಾಸಿ ರಂಗಭೂಮಿ ಕಲಾವಿದರಾಗಿ ಪಾದಾರ್ಪಣೆ ಮಾಡಿದ್ದರು. ಕನ್ನಡದ ಪ್ರಮುಖ ನಟರುಗಳೊಂದಿಗೆ ಸಹನಟರಾಗಿ ಮತ್ತು ಹಾಸ್ಯ ಪಾತ್ರಗಳಲ್ಲಿ ನಟಿಸಿ ಸೈಎನಿಸಿಕೊಂಡಿದ್ದರು. ನಟನಾರಂಗದವರಲ್ಲೊಬ್ಬರಾಗಿ 100ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದರು. ಇವರಿಗೆ ಪ್ರಖ್ಯಾತಿ ತಂದುಕೊಟ್ಟಿದ್ದು ಪಾಪಾ ಪಾಂಡು ಟಿವಿ ಧಾರವಾಹಿ ಆಗಿತ್ತು.

ದೇವಮ್ಮ ಹೆಗ್ಡೆ (1918–21.10.2021)



ಜೋಯಿಡಾ ತಾಲ್ಲೂಕಿನ ಚಾಪಖಂಡ ಹಳ್ಳಿಯ ನಿವಾಸಿ, ಕಿರಿಯರಿಂದ 'ಅಬ್ಬೆ' ಎಂದು ಕರೆಯಿಸಿಕೊಳ್ಳುತ್ತಿದ್ದ 103 ವರ್ಷದ ದೇವಮ್ಮ ಹೆಗ್ಡೆ ಅವರು ಗುರುವಾರ ರಾತ್ರಿ ನಿಧನರಾಗಿದ್ದಾರೆ. ಅವರ ಆಸೆಯಂತೆ ಕುಟುಂಬ ಅವರ ಕಣ್ಣುಗಳನ್ನು ದಾನ ಮಾಡಿದೆ. ಈ ಪ್ರದೇಶದ ಅತ್ಯಂತ ಹಿರಿಯ ನೇತ್ರ ದಾನಿ ಎಂಬ ಗೌರವಕ್ಕೆ ಅಬ್ಬೆ ಪಾತ್ರರಾಗಿದ್ದಾರೆ. ಅಬ್ಬೆ ತನ್ನ 90ನೇ ವಯಸ್ಸಿನವರೆಗೂ ಆರೋಗ್ಯವಾಗಿದ್ದರು ಮತ್ತು ರೈತ ಮಹಿಳೆಯಾಗಿ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದರು. ಅಬ್ಬೆಗೆ ಪಶ್ಚಿಮ ಘಟ್ಟದಲ್ಲಿ ಬೆಳೆಯುವ ಗಿಡಮೂಲಿಕೆಗಳ ಬಗ್ಗೆ ಉತ್ತಮ ಜ್ಞಾನವಿತ್ತು. ಅವರು ಇತರ ಹಲವರನ್ನು "ಕಣ್ಣುಗಳನ್ನು ದಾನ" ಮಾಡಲು ಪ್ರೋತ್ಸಾಹಿಸಿದ್ದರು. ಅವರಿಗೆ 100 ವರ್ಷ ತುಂಬಿದಾಗ ಸುಮಾರು 15 ಕುಟುಂಬ ಸದಸ್ಯರು ನೇತ್ರದಾನಕ್ಕೆ ಪ್ರತಿಜ್ಞೆ ಮಾಡಿದ್ದರು. ಸಾಯುವವರೆಗೂ ಅವರ ದೃಷ್ಟಿ ಚೆನ್ನಾಗಿತ್ತು ಮತ್ತು ಅವರ ಕಿವಿ ಸ್ಪಷ್ಟವಾಗಿ ಕೇಳುತ್ತಿದ್ದವು. ಅವರ ಆರೋಗ್ಯಕರ ಆಹಾರ ಪದ್ಧತಿ ಹಾಗೂ ಜೀವನಶೈಲಿಯೇ ಅವರ ಸುದೀರ್ಘ ಬದುಕಿಗೆ ಕಾರಣವಾಗಿತ್ತು.

ಮಾರ್ಕಂಡೇಯ ಮುನಿಸ್ವಾಮೀಜಿ (1918–05.11.2021)



ಕೋಡಿಹಳ್ಳಿ ಆದಿಜಾಂಬವ ಬೃಹನ್ಮಠದ ಹಿರಿಯ ಶ್ರೀಗಳಾದ ಮಾರ್ಕಂಡೇಯ ಮುನಿಸ್ವಾಮೀಜಿ ಇವರಿಗೆ ಸಂಜೆ 5.30ರ ಸಮಯದಲ್ಲಿ ಉಸಿರಾಟದ ತೊಂದರೆ ಕಂಡು ಬಂದಿತ್ತು. ಹಿರಿಯೂರು ಸಾರ್ವಜನಿಕ ಆಸ್ಪತ್ರೆ ವೈದ್ಯರು ತಪಾಸಣೆ ನಡೆಸಿದರು. ಆದರೆ ಆ ವೇಳೆಗಾಗಲೇ ಶ್ರೀಗಳು ಕೊನೆಯುಸಿರೆಳೆದಿದ್ದರು. ಆದಿಜಾಂಬವ ಶ್ರೀಗಳು ವಂಶ ಪಾರಂಪರೆಯಿಂದ ಕಾಷಾಯ ಧರಿಸಿ ಶ್ರೀಮಠದ ಸೇವೆಯಲ್ಲಿ ತೊಡಗಿದ್ದರು. ಪ್ರತಿವರ್ಷ ಸಾಮೂಹಿಕ ವಿವಾಹ ಹಾಗೂ ಕೋಡಿಹಳ್ಳಿಯ ಶ್ರೀರೇಣುಕಾ ದೇವಿಯ ಜಾತ್ರಾ ಮಹೋತ್ಸವಕ್ಕೆ ಆಗಮಿಸುವ ಸಾವಿರಾರು ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಮಾಡುವ ಮಹಾನ್ ಕಾರ್ಯ ಮಾಡುತ್ತಿದ್ದರು.

ಬಲವಂತ ಮೊರೇಶ್ವರ "ಬಾಬಾಸಾಹೇಬ್" ಪುರಂದರೆ (29.06.1922 – 15.11.2021)



ಇತಿಹಾಸಕಾರ ಮತ್ತು ರಂಗಕರ್ಮಿ ಪುರಂದರೆ ಅವರಾಗಿದ್ದಾರೆ. ಪುರಂದರೆಯವರು ಶಿವಾಜಿಯ ಆಳ್ವಿಕೆಯ ಅವಧಿಗೆ ಸಂಬಂಧಿಸಿದ ಕಥೆಗಳನ್ನು ಚಿಕ್ಕ ವಯಸ್ಸಿನಲ್ಲಿಯೇ ಬರೆಯಲು ಪ್ರಾರಂಭಿಸಿದರು. ನಂತರ ಅವುಗಳನ್ನು ಸಂಕಲಿಸಿ "ತಿನಗ್ಯ" ಎಂಬ ಪುಸ್ತಕದಲ್ಲಿ ಪ್ರಕಟಿಸಲಾಯಿತು. ಅವರ ಇತರ ಕೃತಿಗಳಲ್ಲಿ ರಾಜಾ ಶಿವ–ಛತ್ರಪತಿ ಮತ್ತು ಕೇಸರಿ ಎಂಬ ಪುಸ್ತಕಗಳು ಮತ್ತು ನಾರಾಯಣರಾವ್ ಪೇಶ್ವೆಯವರ ಜೀವನದ ಪುಸ್ತಕ ಸೇರಿವೆ. ಅವರ ಕೃತಿಗಳಲ್ಲಿ ಅತ್ಯಂತ ಪ್ರಸಿದ್ಧವಾದ ನಾಟಕ, "ಜನತಾ ರಾಜ" ಶಿವಾಜಿಯ ಕುರಿತಾದ ವ್ಯಾಪಕ ಜನಪ್ರಿಯ ನಾಟಕವನ್ನು ಪ್ರಕಟಿಸಲಾಯಿತು. ಈ ನಾಟಕವನ್ನು ಮಹಾರಾಷ್ಟ್ರ ಆಗ್ರಾ, ದೆಹಲಿ, ಭೋಪಾಲ್, ಆಂಧ್ರ, ಗೋವಾದಲ್ಲಿ 1000 ಬಾರಿ ಪ್ರದರ್ಶಿಸಲಾಗಿದೆ. ಇವರಿಗೆ ಮಹಾರಾಷ್ಟ್ರ ಭೂಷಣ, ಭಾರತ ಸರ್ಕಾರದ ಕಾಳಿದಾಸ್ ಸಮ್ಮಾನ್, ಪದ್ಮವಿಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

FEVER!

Condensed form of 'Fever Book" - 1974 & Published by Hart Davis Macgibbos, P.O. - 9 St Albans, England : by John Fuller

continued from the previous edition...

Today the threat of plague seems unreal. Yet In January 1969 an unknown killer struck in Nigeria virus of such overwhelming power that in this age of jet travel it could trigger global calamity, In a dangerous race against time, a team of researchers risked their lives to track the virus to its source and find a vaccine that would be able to conquer it. This is the story of that quest, one of the most fascinating and Inspiring medical revelations of our time

THE FIRST CLUE

THE information reaching New York about the outbreak in Jos was fragmentary, but obviously the situation was deteriorating. Both Penny Pinneo and Jordi Casals were alerted. They were prepared to leave for Jos at a moment's notice, but with the chaotic political situation caused by the Nigerian civil war, neither had been able to obtain a visa. Meanwhile, both had been bled, their serum centrifuged and refrigerated. Jordi Casals also had some dead Lassa-virus specimens that he hoped to take directly to Ibadan so that Don Carey could make a positive, -the-spot identification of the virus. The news of Dr Jeanette's illness had not yet reached them.

The Casals/Pinneo immune plasma and samples of dead Lassa virus arrived at Ibadan on February 15. Although unaware of this, Hal White had decided the same day to fly Dr Jeanette to Ibadan. But, quite unexpectedly, her temperature dropped to normal. Dr White felt a surge of relief. After talking the matter over with Dr Jeanette, he decided that the trip would be unnecessary. he next morning, Dr Jeanette's temperature plunged to 34-8 degrees centigrade (94-6 F.), 'critically below normal.. Urine output was distressingly low, and her white blood-cell count soared.

White tried to get in touch with Ibadan, but was unsuccessful. Still knowing nothing of the Casals serum, he now faced a difficult decision: whether to give Dr Jeanette serum from the blood of Raphael, the only hospital worker to have survived the virus. Unfortunately, the presence of antibodies in Raphael's blood had not been confirmed. Moreover, the proper equipment was not available. Without a centrifuge, Dr White would simply have to let the red blood cells in Raphael's blood settle by gravity, then draw off the pale serum with a syringe.

White went to Dr Jeanette's room and told her he was going to give her the serum. She agreed weakly: "You're the doctor, Hal." He drew the blood, separated the serum-about a third of a pint-and injected it intravenously. Dr Jeanette did not respond. On February 18, her respiration became laboured, and external cardiac massage was attempted. She was still conscious, however, and in the late afternoon she reached out her hand to Comfort, a tall Nigerian nurse who had been at her bedside every chance she could get. Taking the nurse's large, strong hand in hers, she said, "You've done everything for me, Comfort. God bless you.' Comfort's face mask was wet with tears. At 4.30 p.m., Dr Jeanette was dead.

In a sad anticlimax, the visas for Jordi Casals and Penny Pinneo came through in the latter part of February. But, with the arrival of the two in Nigeria, the cases of Lassa fever began disappearing as mysteriously as they had first appeared. Only two new cases entered the hospital after Dr Jeanette's death. The vicious virus had gone back into hiding. The problem now was to find it before it came out to kill again. It was all-important to find the initial case, and through it the original source of the disease.

To be continued...

ಸದ್ಗುಣವಿಲ್ಲದ ಮಾನವ ಜನ್ಮವು ನಿರರ್ಥಕವು, ಹಾಗೂ ನಮ್ಮ ಪೂರ್ವಜರ ಮಟ್ಟಕ್ಕೆ ಬರಲು ನಾವು ಸತತವಾಗಿ ದುಡಿಯದಿದ್ದರೆ, ಅವರ ಘನತೆಯಲ್ಲಿ ಪಾಲ್ಗೊಳ್ಳಲು ನಮಗೆ ಯಾವ ಅಧಿಕಾರವೂ ಇಲ್ಲ

– ಥಾಮಸ್ ಜೆಫರ್‌ಸನ್

ಪುಸ್ತಕ ಪರಿಚಯ

– ಡಾ. ಎಸ್.ರಾಮಲಿಂಗೇಶ್ವರ (ಸಿಸಿರಾ),

ಮಳೆ ಮುಗಿಲು

ಕೃತಿಕಾರರು : ಎನ್. ವಿನೋದ ವಡ್ಡರಕುಪ್ಪೆ



ಗಾಂಧಿ ಭವನ, ಬೆಂಗಳೂರು ಇಲ್ಲಿ ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್‌ನ 12ನೇ ರಾಜ್ಯಮಟ್ಟದ ಕನ್ನಡ ಸಾಹಿತ್ಯ – ಸಾಂಸ್ಕೃತಿಕ ಸಮಾವೇಶದಲ್ಲಿ ಲೋಕಾರ್ಪಣೆಗೊಂಡ ಕೃತಿ ಇದಾಗಿದೆ. ಇದರ ಮುನ್ನುಡಿಯನ್ನು ಗಾಂಧಿ ಭವನದ ಕಾರ್ಯದರ್ಶಿಗಳು, ಸಾಹಿತಿ, ಚಿಂತಕರು ಆಗಿರುವ ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರು ಅರ್ಥಪೂರ್ಣವಾಗಿ ಬರೆದಿದ್ದಾರೆ. ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಸಂಸ್ಥೆಯು ಈ ಕೃತಿಯನ್ನು ಪ್ರಕಟಿಸಿದೆ.–

ಕವಿತೆ ಎನ್ನುವುದು ಭಾವ ತೀವ್ರತೆಯ ಮನಸ್ಸಿನೊಳಗೆ ಹೆಚ್ಚಾದಾಗ ಅದು ಹೂವಿನಂತೆ ಅರಳುತ್ತದೆ. ಎಲ್ಲೋ ಹುಟ್ಟಿ, ಎಲ್ಲೋ ಅಲೆದು ಮನ ಬೆರೆತಾಗ ಕವನ ಹೊನಲಾಗುತ್ತದೆ. ಇದು ಈ ಕಾಲದ ಗುಣವೇನಲ್ಲ, ಪರಂಪರೆಯಾಗಿ ಶತಮಾನಗಳಿಂದ ಕನ್ನಡ ಕಾವ್ಯವು ಜೀವ ಚೈತನ್ಯ ಪಡೆಯುತ್ತಾ ಬರುತ್ತಿದೆ. 'ನವನವೋನ್ಮೇಷಶಾಲಿನಿಯಾದ' ಭಾವಗೀತೆಯು ಹಾಡಿದಾಗ, ನೃತ್ಯವಾದಾಗ ಅದಕ್ಕೆ ತನ್ನದೇ ಆದ ಸ್ಪಂದನೆಯ ಗುಣದ ಶಕ್ತಿ ಹೆಚ್ಚಿ ಅದು ಸುತ್ತಲೂ ಪರಿಮಳವಾಗಿ ಸ್ಪರಿಸಿ ಪ್ರವಹಿಸುತ್ತಾ ಹೋಗುತ್ತದೆ. ಈ ಹಿನ್ನೆಲೆಯಲ್ಲಿ ಕು. ಎನ್. ವಿನೋದ ವಡ್ಡರಕುಪ್ಪೆ, ಕನಕಪುರ ಗ್ರಾಮಾಂತರ ಪದವಿ ಕಾಲೇಜಿನ ಬಿ.ಎ. ಅಂತಿಮ ವರ್ಷದ ವಿದ್ಯಾರ್ಥಿನಿ. ತನ್ನ ಮನದೊಳಗಿನ ಭಾವನೆಗಳಿಗೆಲ್ಲಾ ತನಗೆ ತಿಳಿದ ಪದಗಳನ್ನು ಜೋಡಿಸಿ, ಕವಿತೆಯಾಗಿಸಿ ಖುಷಿ ಪಟ್ಟಿದ್ದಾರೆ. ಹಸಿ–ಬಿಸಿಯ ಮನಸ್ಸು ಹಲವು ವಿಷಯ ವಿಚಾರಗಳಿಗೆ ಇಲ್ಲಿಯ ಕವಿತೆಗಳು ಧ್ವನಿಯಾಗಿವೆ. ಕು. ವಿನೋದ ಅವರು ಸಮಾಜದಲ್ಲಿಯ ಪ್ರೀತಿ, ಪ್ರೇಮ, ಭಕ್ತಿ, ದೇವರು ಸ್ನೇಹ, ಅಪ್ಪ – ಅಮ್ಮ ಅಜ್ಜ ಇನ್ನೂ ಅನೇಕ ವಿಷಯಗಳಿಗೆ ಭಾವ ತುಂಬಿದ್ದಾರೆ. ಸರಳವಾಗಿಯೂ, ಸುಂದರವಾಗಿಯೂ, ಸುಲಲಿತವಾಗಿ ಓದಿಸಿಕೊಂಡು ಹೋಗುವ ಗುಣವುಳ್ಳ ಇಲ್ಲಿನ ಕವಿತೆಯ ಸಾಲುಗಳು ಸಹೃದಯರ ಗಮನ ಸೆಳೆಯುತ್ತದೆ. ಇದು ಪ್ರಥಮ ಕವನ ಸಂಕಲನವಾಗಿದ್ದು ಓದುಗ ಮಹಾಶಯರು ಈ ಕವಿ ಮನಸ್ಸಿಗೆ ಹರಸಿ, ಹಾರೈಸಿರಿ ಎಂದು ಕೋರುತ್ತಾ ವಿನೋದ ಅವರ ಸಾಹಿತ್ಯ ಪ್ರೀತಿ ಮತ್ತು ಜೀವನ ಪ್ರೀತಿಗೆ ಶುಭಕೋರುತ್ತೇನೆ.

ಕೆಲವು ಚಿಂತನೆಗಳೇ ಪ್ರಾರ್ಥನೆಯು. ಜೀವನದ ಕೆಲವು ಕ್ಷಣಗಳಲ್ಲಿ ನಮ್ಮ ಶರೀರದ ಸ್ಥಿತಿಯು ಹೇಗೇ ಇರಲಿ, ನಮ್ಮ ಆತ್ಮವು ಮಾತ್ರ ಮಂಡಿಯೂರಿ ಭಗವಂತನ ಪ್ರಾರ್ಥನೆಯಲ್ಲಿರುವುದು.

– ಆರ್ಥರ್ ಸ್ಕೋಪೆನರ್

ಪತ್ರ ವಿಭಾಗ : ಓದುಗರ ಪ್ರತಿಸ್ಪಂದನ

ಬಾಪು ಪ್ರಪಂಚ ಆಗಸ್ಟ್ ಸಂಚಿಕೆಯು ಅರ್ಥಪೂರ್ಣ ಮಾಹಿತಿಯನ್ನು ಹೊತ್ತು ತಂದಿದೆ. ಗಾಂಧಿ ವಿಚಾರಧಾರೆಗಳು, ಸ್ವಾತಂತ್ರ್ಯ ಹೋರಾಟಗಾರ ಎಚ್. ಎಸ್. ದೊರೆಸ್ವಾಮಿ, ಅಂಬೇಡ್ಕರ್, ಜ್ಯೋತಿಬಾ ಪುಲೆ ಹಾಗೂ ಲೋಕಮಾನ್ಯ ತಿಲಕ್ ಅವರ ಕುರಿತಾದ ಲೇಖನಗಳು ಅರ್ಥಪೂರ್ಣವಾಗಿ ಮೂಡಿಬಂದಿದೆ. ಸಂಪಾದಕರಿಗೆ ಧನ್ಯವಾದಗಳು. ನಂತರದ ಎರಡು ಸಂಚಿಕೆಗಳು ತಲುಪಿಲ್ಲ, ದಯಮಾಡಿ ಸಂಚಿಕೆಯ ಪ್ರಕಟಣೆಯನ್ನು ಮುಂದುವರಿಸಿ.

ಡಾ. ವಿ.ಎಸ್. ಪಾರ್ವತಿ

ಗಾಂಧಿ ಭವನದಿಂದ ಪ್ರಕಟಗೊಳ್ಳುತ್ತಿರುವ ಬಾಪು ಪ್ರಪಂಚ ಪತ್ರಿಕೆಯಲ್ಲಿ ಗಾಂಧಿ ಅವರ ತತ್ವ ಸಿದ್ಧಾಂತ, ಆರೋಗ್ಯ ಹಗೂ ದೇಶಕ್ಕಾಗಿ ಗಣನೀಯ ಸೇವೆಸಲ್ಲಿಸಿದ ಮಹನೀಯರ ಕುರಿತಾದ ಉಪಯುಕ್ತ ಲೇಖನಗಳು ಮಹತ್ವವುಳ್ಳದ್ದಾಗಿವೆ.

ಲೀಲಾ ವಾಸುದೇವ್

ಗಾಂಧಿ ಭವನದ ಬಾಪು ಪ್ರಪಂಚ ಪತ್ರಿಕೆಯು ನಾಡು–ನುಡಿ, ದೇಶ–ವಿದೇಶ, ದೇಶಕಂಡ ಮಹನೀಯರ ಜೀವನಗಾಥೆ, ಆರೋಗ್ಯ, ಪರಿಸರ, ಇತಿಹಾಸದ ಘಟನೆಗಳು, ಅಂತರರಾಷ್ಟ್ರೀಯ ಸಮಾಚಾರಗಳು, ಸಮಾಜ ಸೇವಕರ ಪರಿಚಯ, ಪುಸ್ತಕ ವಿಮರ್ಶೆ, ಸಾಧಕರ ಕಿರು ಪರಿಚಯ ಹೀಗೆ ಹತ್ತು ಹಲವಾರು ವಿಷಯಗಳನ್ನೊತ್ತು ಪ್ರಕಟಿತಗೊಳ್ಳುತ್ತಿರುವುದು ಹೆಮ್ಮೆಯ ವಿಷಯುವಾಗಿದೆ. ಆಗಸ್ಟ್ ನಂತರದ ಸಂಚಿಕೆಗಳು ಬಾರದಿದ್ದನ್ನು ಕಂಡು ಪತ್ರಿಕೆಯ ಪ್ರಕಟಣೆ ಸ್ಥಗಿತಗೊಂಡಿತೇನೋ ಎಂಬ ಆತಂಕ ಕಾಡಿತ್ತು. ಮೂರು ವರ್ಷಗಳಿಂದ ಪ್ರಕಟಗೊಳ್ಳುತ್ತಿರುವ ಈ ಪತ್ರಿಕೆ ಎಂದೂ ನಿಲ್ಲದಿರಲಿ ಎಂದು ಆಶಿಸುವೆ.

ಅಭಿಲಾಷ್ ಹೆಗ್ಗೋಡು

ಬಾಪು ಪ್ರಪಂಚ ಆಗಸ್ಟ್ ಸಂಚಿಕೆಯಲ್ಲಿನ ಲೇಖನಗಳು ಸಂಕೀರ್ಣವಾಗಿದ್ದು ವಿಷಯಾಧಾರಿತ ಮಾಹಿತಿಯುಳ್ಳ ಲೇಖನಗಳಿಂದ ಕೂಡಿದೆ. ಇಂತಹ ಅಪೂರ್ವ ಸಂಚಿಕೆಯನ್ನು ಹೊರತಂದ ಸಂಪಾದಕರಾದ ಇಂದಿರಾ ಕೃಷ್ಣಪ್ಪ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು.

ಕೆ. ವನಜಾಕ್ಷಿ

ಬಾಪು ಪ್ರಪಂಚ ಆಗಸ್ಟ್ ಸಂಚಿಕೆಯಲ್ಲಿ ಗಾಂಧಿ ಹೆಜ್ಜೆ ಜಾಡಿನಲ್ಲಿ ಸಾಗಿದವರು, ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರ ಲೇಖನ, ಆರೋಗ್ಯ, ಹಾಗೂ ವಿಶೇಷ ಸುದ್ದಿಗಳಿಂದ ಸಂಚಿಕೆಯಿಂದ ಸಂಚಿಕೆಗೆ ವಿಭಿನ್ನವಾಗಿ ಮೂಡಿಬರುತ್ತಿರುವ ಈ ಪತ್ರಿಕೆಯು ಶ್ಲಾಘನೀಯವಾಗಿದೆ.

ವಿ.ಎನ್. ತಿಪ್ಪನಗೌಡ, ಹಾವೇರಿ

ಗಾಂಧಿ ಭವನದಿಂದ ಪ್ರಕಟವಾಗುತ್ತಿರುವ ಬಾಪು ಪ್ರಪಂಚ ಸಂಚಿಕೆಯು ಗಾಂಧಿ ಜೀವನ ಘಟನೆಗಳು, ಸಮಾಜದ ಏಳಿಗೆಗಾಗಿ ಶ್ರಮಿಸಿದ ಮಹಾನ್ ವ್ಯಕ್ತಿಗಳ ಕುರಿತಾದ ಲೇಖನ, ಆರೋಗ್ಯ, ಪರಿಸರ, ಅಂತರರಾಷ್ಟ್ರೀಯ ಸಮಾಚಾರಗಳು ಅರ್ಥಪೂರ್ಣವಾದ ಒಂದು ಸಂಚಿಕೆಗೆ ಬೇಕಾದ ಎಲ್ಲಾ ಸಂಕೀರ್ಣ ವಿಚಾರಧಾರೆಗಳನ್ನು ಹೊತ್ತು ತರುತ್ತಿದೆ. ಇಂತಹ ಮಹತ್ವಪೂರ್ಣವಾದ ಮಾಹಿತಿಯುಳ್ಳ ಪತ್ರಿಕೆ ಇನ್ನೂ ಹೊಸತನದೊಂದಿಗೆ ಹೀಗೆಯೇ ಪ್ರಕಟವಾಗುತ್ತಲೇ ಇರಲೆಂದು ಬಯಸುವೆ.

ಸತ್ಯಮಂಗಲ ಮಹದೇವ

ಆಗಸ್ಟ್ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ ಅಂಬೇಡ್ಕರ್, ಜ್ಯೋತಿಬಾ ಪುಲೆ ಹಾಗೂ ಲೋಕಮಾನ್ಯರು ಹಾಗೂ ಇನ್ನಿತರ ಮಹನೀಯರ ಹೋರಾಟ, ಸೇವಾ ಮನೋಭಾವ ಕುರಿತಾದ ಲೇಖನಗಳು ಇಂದಿನ ಪೀಳಿಗೆಯ ಓದಿನ ಆಸಕ್ತಿಯನ್ನು ಹೆಚ್ಚಿಸುತ್ತದೆ. ಗಾಂಧಿ ಭವನದ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳಿಗೆ ಧನ್ಯವಾದಗಳು.

ಅಖಿಲಾ ವಿದ್ಯಾಸಂದ್ರ, ಚನ್ನಪಟ್ಟಣ

ಬಾಪು ಸಂಚಿಕೆಯಲ್ಲಿ ಪ್ರಕಟವಾಗುತ್ತಿರುವ ಕನ್ನಡಕ್ಕಾಗಿ ಸೇವೆ ಸಲ್ಲಿಸಿದ ಮಹನೀಯರ ಕುರಿತಾದ ಲೇಖನ, ಅಧ್ಯಕ್ಷರ ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನದ ಭಾಷಣ, ಪುಸ್ತಕ ಪರಿಚಯ ಉಪಯುಕ್ತ ಮಾಹಿತಿಯನ್ನು ನೀಡುತ್ತದೆ.

ಶೋಭಾ ವಿ.ಎಂ ಕಿಶೋರ್ ಕುಮಾರ್

ಗಾಂಧಿ ಭವನದಿಂದ ಪ್ರಕಟಗೊಳ್ಳುತ್ತಿರುವ ಬಾಪು ಪ್ರಪಂಚ ಪತ್ರಿಕೆ ಭಾರತದ ಸ್ವಾತಂತ್ರ್ಯ, ನೆಲ–ಜಲ ಹೋರಾಟ, ಸಂಸ್ಕೃತಿ, ಶಿಕ್ಷಣ, ಕಲೆ, ವಿಜ್ಞಾನ, ಸಮಾಜ, ಪರಿಸರ, ಆರೋಗ್ಯ, ಸಾಧಕರು, ಸಮಾಜಸೇವಕರು, ವಿಮರ್ಶೆ ಹೀಗೆ ಹಲವು ವಿಶೇಷ ಮಾಹಿತಿಗಳೊಂದಿಗೆ ಒಂದು ಅರ್ಥಪೂರ್ಣವಾದ ಪತ್ರಿಕೆಯಾಗಿ ಹೊರಹೊಮ್ಮುತ್ತಿದ್ದು, ಸೆಪ್ಟಂಬರ್, ಅಕ್ಟೋಬರ್ ತಿಂಗಳ ಸಂಚಿಕೆಯು ತಲುಪಿಲ್ಲ. ದಯಮಾಡಿ ಕಳುಹಿಸಿಕೊಡಿ, ವಂದನೆಗಳು

ವೇಮಗಲ್ ಸೋಮಶೇಖರ್

ಬಾಪು ಪ್ರಪಂಚ ಸೆಪ್ಟೆಂಬರ್ ತಿಂಗಳ ಸಂಚಿಕೆಗಾಗಿ ಕಾದಿದ್ದೇನೆ. ಸಂಚಿಕೆಯಲ್ಲಿನ ಅರ್ಥಪೂರ್ಣ ಹಾಗೂ ಸಂದರ್ಭೋಚಿತ ಲೇಖನಗಳು ಓದಿನ ಆಸಕ್ತಿಯನ್ನು ಹೆಚ್ಚಿಸಿವೆ. ದಯಮಾಡಿ ಕಳಿಸಿ

ಎಸ್.ಎಂ. ಶ್ಯಾಮಲಾ

ಆಗಸ್ಟ್ ತಿಂಗಳ ಬಾಪು ಸಂಚಿಕೆ ನಂತರದ ಸಂಚಿಕೆ ತಲುಪಿತು. ತಮಗೆ ಧನ್ಯವಾದಗಳು. ಸವಿವರವಾದ ಸಂಕೀರ್ಣವಾದ ವಿಶೇಷ ಹಾಗೂ ವಿಭಿನ್ನತೆಯಿಂದ ಕೂಡಿದ್ದ ಈ ಪತ್ರಿಕೆಯು ಓದುಗ ಸಮುದಾಯಕ್ಕೆ ಒಂದು ಅತ್ಯಮೂಲ್ಯವಾದ ಸಂಗ್ರಹಯೋಗ್ಯವಾದುದಾಗಿದೆ. ಹಾಗೂ ನಂತರದ ಸಂಚಿಕೆಗಳು ಪ್ರಕಟವಾಗದೇ ಇರುವುದು ಬೇಸರದ ಸಂಗತಿಯಾಗಿದೆ. ಅರ್ಥಪೂರ್ಣವಾದ ಇಂಥಹ ಒಂದು ಉತ್ತಮ ಪತ್ರಿಕೆಯು ನಿರಂತರವಾಗಿ ಮೂಡಿಬರಲೆಂದು ಹಾರೈಸುವೆ. ಗಾಂಧಿ ಭವನದ ಮುಂದಿನ ಸಂಚಿಕೆಯ ನಿರೀಕ್ಷೆಯಲ್ಲಿದ್ದೇನೆ.

ಇಂದ್ರಕುಮಾರ್, ಬೆಂಗಳೂರು ಪ್ರೆಸ್

ಆಗಸ್ಟ್ ಸಂಚಿಕೆಯಲ್ಲಿನ ಗಾಂಧಿ ಹೆಜ್ಜೆಜಾಡಿನಲ್ಲಿ ಸಾಗಿದವರು, ಡಾ. ರಾಜಕುಮಾರ ಹಾಗೂ ರತನ್ ಟಾಟಾ, ವಿಶೇಷ ಸುದ್ದಿಗಳು ಹಾಗೂ ಆರೋಗ್ಯಕ್ಕೆ ಸಂಬಂಧಿಸಿದ ಡಾ. ಸಿ.ಆರ್. ಚಂದ್ರಶೇಖರ್ ಮತ್ತು ಡಾ. ವಸುಂಧರಾ ಅವರ ಲೇಖನಗಳು ಉಪಯುಕ್ತವುಗಳಾಗಿವೆ.

ವನಜಾ ರಾಜನ್, ಬೆಂಗಳೂರು

ಬಾಪು ಪ್ರಪಂಚ ಸಂಚಿಕೆಯಲ್ಲಿನ ಜ್ಯೋತಿಬಾ ಪುಲೆ, ಲೋಕಮಾನ್ಯರು, ವಿ.ಕೃ. ಗೋಕಾಕ ಸ್ವಾತಂತ್ರ್ಯ ಹೋರಾಟಗಳಲ್ಲಿ ಸಿನಿಮಾಗಳ ಪಾತ್ರ, ಕಸ್ತೂರ್‌ಬಾ ಹಾಗೂ ನಾಡಪ್ರಭು ಕೆಂಪೇಗೌಡರ ಲೇಖನಗಳು ಉಪಯುಕ್ತ ಮಾಹಿತಿಯನ್ನು ನೀಡುವಾದವುಗಳಾಗಿವೆ. ಸಂಪಾದಕ ಮಂಡಳಿಗೆ ಧನ್ಯವಾದಗಳು.

– ಶಾಲಿನಿ, ಬೆಂಗಳೂರು

2019ರ ಅಕ್ಟೋಬರ್ ತಿಂಗಳಿನಿಂದ ನಾನು ಬಾಪು ಪ್ರಪಂಚ ಪತ್ರಿಕೆಯ ಓದುಗನಾಗಿದ್ದೇನೆ. ಈ ನಡುವೆ ಕೆಲವು ವಿಶೇಷ ಸಂಚಿಕೆಗಳು, ಹಾಗೂ ಕರೋನಾ ಕಾಲದಲ್ಲಿ ಕೆಲವು ಸಂಚಿಕೆಗಳು ಪ್ರಕಟವಾಗದೆ ಇದ್ದರೂ ಗಾಂಧಿ ಭವನದ ಪ್ರತಿಷ್ಠೆಯ ಕಾರ್ಯವೆಂಬಂತೆ ಆಸ್ಥೆ ವಹಿಸಿ ಪ್ರತಿ ಸಂಚಿಕೆಯನ್ನು ಹಂತ ಹಂತವಾಗಿ ವಿಶೇಷತೆಯನ್ನೊಳಗೊಂಡಂತೆ ಈ ಪತ್ರಿಕೆಯನ್ನು ಹೊರತರುತ್ತಿದ್ದೀರಿ. ವಿಷಯಾಧಾರಿತವಾಗಿರುವ ಈ ಪತ್ರಿಕೆ ಹಲವರ ಓದಿನ ಅರಿವು ಹೆಚ್ಚಾಗಲು ಕಾರಣವಾಗಿದೆ. ಆದರೆ ಆಗಸ್ಟ್ 2021ರ ನಂತರ ಈ ಪತ್ರಿಕೆಯು ಪ್ರಕಟವಾಗಿಲ್ಲವೆಂದು ತಿಳಿದು ವಿಷಾದವಾಯಿತು. ಗಾಂಧಿ ಭವನದ ಅಧ್ಯಕ್ಷರು ಹಾಗೂ ಕಾರ್ಯದರ್ಶಿ ಅವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಪತ್ರಿಕೆಯ ಪ್ರಕಟಣೆಯು ಗಾಂಧಿ ಭವನದ ಆಶಯಗಳಲ್ಲೊಂದಂತೆ ಪ್ರಕಟಣೆಯನ್ನು ಮುಂದುವರಿಸಿ, ವಂದನೆಗಳು.

– ನಾಗರಾಜ್, ಟ್ರಸ್ಟಿ
ಪ್ರೊ. ಬಿ.ಕೆ. ಟ್ರಸ್ಟ್

ಗಾಂಧಿ ಭವನದ ಕಾರ್ಯಕ್ರಮಗಳು






ಸ್ವಾತಂತ್ರ್ಯೋತ್ಸವ 75ರ ದಿನಾಚರಣೆಯಲ್ಲಿ ಶ್ರೀ ಹೆಚ್.ಬಿ. ದಿನೇಶ್, ಗೌ. ಕೋಶಾಧ್ಯಕ್ಷರು ಮಾತನಾಡುತ್ತಿದ್ದಾರೆ. ಶ್ರೀಮತಿ ಇಂದಿರಾ ಕೃಷ್ಣಪ್ಪ, ಗೌ. ಕಾರ್ಯದರ್ಶಿ, ಸೇವಾದಳದ ಅಧ್ಯಕ್ಷರು ಮತ್ತು ಚಂದ್ರಶೇಖರ್ ದಳಪತಿ, ಡಾ. ವಿ. ಪ್ರಶಾಂತ, ಸೇವಾದಳದ ಮತ್ತು ಗಾಂಧಿ ಭವನದ ಸಿಬ್ಬಂದಿಗಳು ಮತ್ತೆಲ್ಲರೂ ಇದ್ದಾರೆ.



ಸ್ವಾತಂತ್ರ್ಯೋತ್ಸವ 75 ಕಾರ್ಯಕ್ರಮದಲ್ಲಿ ಪುಸ್ತಕ ಬಿಡುಗಡೆಯಲ್ಲಿ ರುದ್ರಪ್ಪ ಹನಗವಾಡಿ, ಪ್ರೊ.ಎಸ್.ಜಿ. ಸಿದ್ಧರಾಮಯ್ಯ, ಸ್ವಾ ಹೋರಾಟಗಾರರಾದ ಶ್ರೀ ಎನ್. ಆರ್. ಮಶದ್, ಕ.ಗಾಂ.ಸ್ಮಾ.ನಿ. ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ, ಬೈರಮಂಗಲ ರಾಮೇಗೌಡ, ವನಮಾಲ ಸಂಪನ್ನಕುಮಾರ್, ಜೇರಿಗೆ ಲೋಕೇಶ್, ಕಾರ್ಯದರ್ಶಿ ಇಂದಿರಾಕೃಷ್ಣಪ್ಪ.




ಸ್ವಾತಂತ್ರ್ಯೋತ್ಸವ 75 ಕಾರ್ಯಕ್ರಮದಲ್ಲಿ ಸ್ವಾ. ಹೋರಾಟಗಾರರಾದ ಶ್ರೀ ಎನ್. ಆರ್. ಮಶದ್ ಅವರನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ರುದ್ರಪ್ಪ ಹನಗವಾಡಿ, ಪ್ರೊ.ಎಸ್.ಜಿ. ಸಿದ್ಧರಾಮಯ್ಯ, ಕಾರ್ಯದರ್ಶಿ ಇಂದಿರಾಕೃಷ್ಣಪ್ಪ ಕ.ಗಾಂ.ಸ್ಮಾ.ನಿ. ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ, ಬೈರಮಂಗಲ ರಾಮೇಗೌಡ, ವನಮಾಲ ಸಂಪನ್ನಕುಮಾರ್, ಜೇರಿಗೆ ಲೋಕೇಶ್ ಚಿತ್ರದಲ್ಲಿದ್ದಾರೆ.



ಗಾಂಧಿ ಭವನದಲ್ಲಿ ದಿ.02.10.2021ರಂದು ನಡೆದ ಮಹಾತ್ಮ ಗಾಂಧಿ ಅವರ ಜನ್ಮ ದಿನಾಚರಣೆಯ ಉದ್ಘಾಟನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ, ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ ಶಾಸಕರಾದ ಶ್ರೀ ಹೆಚ್.ಕೆ. ಪಾಟೀಲ್, ರಾಜ್ಯಸಭಾ ಸದಸ್ಯರಾದ ಡಾ. ಎಲ್. ಹನುಮಂತಯ್ಯ, ನ್ಯಾಯಮೂರ್ತಿ ಶ್ರೀ ಅಶೋಕ್ ಬಂಗಾರೆಪ್ಪ, ಹಿಂಜಗೇರಿ, ಕಾರ್ಯದರ್ಶಿ ಶ್ರೀಮತಿ ಇಂದಿರಾ ಕೃಷ್ಣಪ್ಪ, ಮತ್ತು ಎಸ್.ಜಿ.ಸುಶೀಲಮ್ಮ ಅವರು ಇದ್ದಾರೆ.



ಮಹಾತ್ಮಾಜಿ ಅವರ ಜನ್ಮದಿನಾಚರಣೆಯ ದಿ.02.10.2021ರಂದು ಪುಸ್ತಕ ಬಿಡುಗಡೆಯಲ್ಲಿ ಇಂದಿರಾ ಕೃಷ್ಣಪ್ಪ, ಎಸ್.ಜಿ. ಸುಶೀಲಮ್ಮ, ನ್ಯಾಯಮೂರ್ತಿ ಶ್ರೀ ಅಶೋಕ್ ಬಂಗಾರೆಪ್ಪ, ಹಿಂಜಗೇರಿ, ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ, ಶ್ರೀ ಹೆಚ್.ಕೆ. ಪಾಟೀಲ್, ಶಾಸಕರು, ಮಾನ್ಯ ಸಚಿವರಾದ ಗೋವಿಂದ ಕಾರಜೋಳ ಅವರು ರಾಜ್ಯಸಭಾ ಸದಸ್ಯರಾದ ಡಾ. ಎಲ್. ಹನುಮಂತಯ್ಯ, ಲೋಕಸಭಾ ಸದಸ್ಯರಾದ, ಶ್ರೀ ಹಾಲಪ್ಪಾಚಾರ್, ಶ್ರೀ ಶಿವಕುಮಾರ್ ಉದಾಸಿ ಮತ್ತೆಲ್ಲರೂ ಇದ್ದಾರೆ.



ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಕರ್ನಾಟಕ ಸರ್ಕಾರದಿಂದ ಶ್ರೀಮತಿ ಮೀರಾತಾಯಿ ಕೊಪ್ಪಿಕರ್ ಅವರಿಗೆ ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ – 2021ನ್ನು ಅವರ ಪರವಾಗಿ ಸಚಿವರಾದ ಶ್ರೀ ಗೋವಿಂದ ಕಾರಜೋಳ ಅವರಿಗೆ ಪ್ರಧಾನ ಮಾಡಲಾಯಿತು. ಚಿತ್ರದಲ್ಲಿ ಇಂದಿರಾ ಕೃಷ್ಣಪ್ಪ, ಎಸ್.ಜಿ. ಸುಶೀಲಮ್ಮ, ನ್ಯಾಯಮೂರ್ತಿ ಅಶೋಕ್ ಬಂಗಾರೆಪ್ಪ, ಹಿಂಜಗೇರಿ, ನಾಡೋಜ ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಕ.ಗಾಂ.ಸ್ಮಾ.ನಿಧಿ., ಶ್ರೀ ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿಗಳು, ಹೆಚ್.ಕೆ. ಪಾಟೀಲ್ ಹಾಗೂ ಎಲ್. ಹನುಮಂತಯ್ಯ, ರಾಜ್ಯ ಸಭಾ ಸದಸ್ಯರು ಇದ್ದಾರೆ



ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಶ್ರೀ ಸಿದ್ಧಗಂಗಾ ಮಠದ ಪೂಜ್ಯಶ್ರೀ ಸಿದ್ಧಲಿಂಗ ಮಹಾಸ್ವಾಮಿ ಅವರಿಗೆ ಕರ್ನಾಟಕ ಸರ್ಕಾರದ ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ – 2020ನ್ನು ಅವರ ಪ್ರತಿನಿಧಿ ಡಾ. ಶಿವಪ್ಪ ಅವರಿಗೆ ಪ್ರಧಾನ ಮಾಡಲಾಯಿತು. ಚಿತ್ರದಲ್ಲಿ ನಾಡೋಜ ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಕ.ಗಾಂ.ಸ್ಮಾ.ನಿಧಿ., ಶ್ರೀ ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿಗಳು, ಹೆಚ್.ಕೆ. ಪಾಟೀಲ್, ಸಚಿವರಾದ ಗೋವಿಂದ ಕಾರಜೋಳ ಹಾಗೂ ಎಲ್. ಹನುಮಂತಯ್ಯ, ರಾಜ್ಯ ಸಭಾ ಸದಸ್ಯರು ಇದ್ದಾರೆ



ಮಹಾತ್ಮಾಜಿ ದಿನಾಚರಣೆಯಲ್ಲಿ ಪ್ರೊ. ಎಸ್. ಆರ್. ದೇವಪ್ರಕಾಶ್ ಮತ್ತು ಶಾಲಿನಿ ದೇವ ಪ್ರಕಾಶ್ ಅವರಿಗೆ ಜಯಶ್ರೀ ಟ್ರಸ್ಟ್ ದತ್ತಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಚಿತ್ರದಲ್ಲಿ ಕಾರ್ಯದರ್ಶಿ ಇಂದಿರಾಕೃಷ್ಣಪ್ಪ, ಹೆಚ್.ಕೆ. ಪಾಟೀಲ್, ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ ,ಎಲ್. ಹನುಮಂತಯ್ಯ ಅವರಿದ್ದಾರೆ.




ಗಾಂಧಿ ಜಯಂತಿಯಂದು ಶ್ರೀ ಸುರೇಶ್ ಕಲಘಟಗಿ, ಗಾಂಧಿ ಸ್ಮೃತಿ ದರ್ಶನ ಸಮಿತಿ ಸದಸ್ಯರು ಅವರಿಗೆ ಗೌರವ ಸಮರ್ಪಣೆ ಕಾರ್ಯದಲ್ಲಿ ಎಸ್.ಜಿ. ಸುಶೀಲಮ್ಮ, ನ್ಯಾ. ಅಶೋಕ್ ಬಂಗಾರೆಪ್ಪ, ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ, ಹೆಚ್.ಕೆ. ಪಾಟೀಲ್ ಅವರಿದ್ದಾರೆ.

ಗಾಂಧಿ ಭವನದ ಕಾರ್ಯಕ್ರಮಗಳು



ಗಾಂಧಿ ಜಯಂತಿದಂದು ಶ್ರೀ ಬ್ರಹ್ಮಯ್ಯ, ಸ್ವಾತಂತ್ರ್ಯ ಹೋರಾಟಗಾರರು ಅವರಿಗೆ ಗೌರವ ಸಮರ್ಪಣೆ ಕಾರ್ಯದಲ್ಲಿ ಇಂದಿರಾಕೃಷ್ಣಪ್ಪ. ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ, ಹೆಚ್.ಕೆ. ಪಾಟೀಲ್ ಹಾಗೂ ಎಲ್. ಹನುಮಂತಯ್ಯ ಅವರಿದ್ದಾರೆ.



ಗಾಂಧಿ ಜಯಂತಿಯಂದು ಶ್ರೀ ನಾಗಪ್ಪ, ಗೋವಾ ವಿಮೋಚನಾ ಹೋರಾಟಗಾರರು ಅವರಿಗೆ ಗೌರವ ಸಮರ್ಪಣೆ ಕಾರ್ಯದಲ್ಲಿ ಇಂದಿರಾಕೃಷ್ಣಪ್ಪ, ಎಸ್.ಜಿ. ಸುಶೀಲಮ್ಮ, ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ, ಹೆಚ್.ಕೆ. ಪಾಟೀಲ್ ಹಾಗೂ ಎಲ್. ಹನುಮಂತಯ್ಯ ಅವರಿದ್ದಾರೆ.



ದಿನಾಂಕ 02.10.2021 ರಂದು ಗಾಂಧಿ ಭವನದಲ್ಲಿ ಕೇಂದ್ರ ವಾರ್ತಾ ಮತ್ತು ಪ್ರಸಾರ ಇಲಾಖೆಯ ಪುಸ್ತಕ ಪ್ರದರ್ಶನ ಛಾಯಾಚಿತ್ರ ಪ್ರದರ್ಶನದಲ್ಲಿ ಡಾ. ವೂಡೇ ಪಿ. ಕೃಷ್ಣ, ಇಂದಿರಾ ಕೃಷ್ಣಪ್ಪ. ಪಿ.ಜಿ. ಪಾಟೀಲ್ ಬಿ.ಕೆ ಕಿರಣ್ಮಯಿ ಮತ್ತೆಲ್ಲರು ಇದ್ದಾರೆ.



ಗಾಂಧಿ ಜಯಂತಿ ಸಂದರ್ಭದಲ್ಲಿ ಗಾಂಧಿ ಭವನದ ಆವರಣದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಉತ್ಪನ್ನಗಳ ಮಾರಾಟ ಮತ್ತು ಪ್ರದರ್ಶನ ಏರ್ಪಡಿಸಲಾಗಿತ್ತು.



ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಶ್ರೀ ಬಸವರಾಜ ಬೊಮ್ಮಾಯಿ, ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ ಇವರು ಮಾತನಾಡುತ್ತಿರುವ ಚಿತ್ರ



ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡುತ್ತಿರುವ ಎಲ್. ಹನುಮಂತಯ್ಯ, ರಾಜ್ಯಸಭಾ ಸದಸ್ಯರು, ಚಿತ್ರದಲ್ಲಿ ಇಂದಿರಾಕೃಷ್ಣಪ್ಪ, ಎಸ್.ಜಿ. ಸುಶೀಲಮ್ಮ, ನ್ಯಾ. ಅಶೋಕ್ ಬಂಗಾರೆಪ್ಪ, ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ, ಹೆಚ್.ಕೆ. ಪಾಟೀಲ್ ಅವರಿದ್ದಾರೆ.



ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಮಾನ್ಯ ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿಗಳು ಇವರಿಗೆ ಗೌರವಾರ್ಪಣೆ ಇಂದಿರಾಕೃಷ್ಣಪ್ಪ ಅವರಿಂದ ಚಿತ್ರದಲ್ಲಿ ತಿಪ್ಪನಗೌಡ ಹಾಗೂ ಹೆಚ್.ಕೆ. ಪಾಟೀಲ್ ಅವರಿದ್ದಾರೆ.




ಸರ್ವಸೇವಾ ಸಂಘವು ಸೆಪ್ಟಂಬರ್ 20 ರಿಂದ 24ರವರೆಗೆ ವಾರ್ಧಾ ಸೇವಾಗ್ರಾಮದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಯುವ ಶಿಬಿರಕ್ಕೆ ತೆರಳುತ್ತಿರುವ ಶಿಬಿರಾರ್ಥಿಗಳಿಗೆ ಗಾಂಧಿ ಭವನದಲ್ಲಿ ಬೀಳ್ಕೊಡುಗೆ ನೀಡಲಾಯಿತು. ಕರ್ನಾಟಕ ಸರ್ವೋದಯ ಮಂಡಲ ಅಧ್ಯಕ್ಷ ಎಲ್. ನರಸಿಂಹಯ್ಯ, ಕ.ಗಾಂ.ಸ್ಮಾ.ನಿಧಿ. ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಜೀರಿಗೆ ಲೋಕೇಶ್, ರಾಜ್ಯ ಎನ್.ವೈ.ಕೆ. ನಿರ್ದೇಶಕ ಎಂ.ಎನ್. ನಟರಾಜ್, ದೆಹಲಿಯ ಗಾಂಧಿ ಸ್ಮೃತಿ ದರ್ಶನ ಸಮಿತಿ ಸದಸ್ಯ ಸುರೇಶ್ ವಿ. ಕಲಘಟಗಿ, ಕ.ಗಾಂ.ಸ್ಮಾ.ನಿಧಿ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಎನ್.ಎಸ್.ಎಸ್. ಅನುಷ್ಠಾನಾಧಿಕಾರಿ ಡಾ. ಪೂರ್ಣಿಮಾ ಜೋಗಿ, ಸರ್ವೋದಯ ಮಂಡಲ ಕಾರ್ಯದರ್ಶಿ ಡಾ. ಹೆಚ್.ಎಸ್. ಸುರೇಶ್, ವಿತ್ತಾಧಿಕಾರಿ ಡಾ. ಯು.ಜಿ. ದೊಡ್ಡಯ್ಯ ಮುಂತಾದವರು ಶುಭ ಕೋರಿದರು. ಎನ್.ವೈ.ಕೆ. ರಾಜ್ಯ ಸಂಘಟಕ ವಿಜಯಪುರದ ಡಾ. ವಿ. ಪ್ರಶಾಂತ ತಂಡದ ನೇತೃತ್ವ ವಹಿಸಿದ್ದರು.





ಗಾಂಧಿ ಭವನದಲ್ಲಿ ದಿ.15.09.2021ರಂದು ಡಾ. ಎಂ.ವಿ. ರಾಜಶೇಖರನ್ ಜನ್ಮ ದಿನಾಚರಣೆ ದತ್ತಿ ಉಪನ್ಯಾಸ ಏರ್ಪಡಿಸಲಾಗಿತ್ತು ಕಾರ್ಯಕ್ರಮದಲ್ಲಿ ಪ್ರೊ. ಜಿ.ಬಿ. ಶಿವರಾಜು, ಡಾ. ಹೆಚ್. ಹನುಮಂತಪ್ಪ, ಮಾಜಿ ರಾಜ್ಯ ಸಭಾ ಸದಸ್ಯರು, ನಾಡೋಜ ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಕ.ಗಾಂ.ಸ್ಮಾ.ನಿಧಿ., ನಾಗೇಶ್ ಹೆಗಡೆ, ಇಂದಿರಾ ಕೃಷ್ಣಪ್ಪ, ಕಾರ್ಯದರ್ಶಿ, ಡಾ. ಕೃಷ್ಣರಾಜ್, ಸಂಧ್ಯಾ ಪ್ರದೀಪ್‌ಕುಮಾರ್ ಭಾಗವಹಿಸಿದ್ದರು.








ಶ್ರೀರಂಗಪಟ್ಟಣದ ಪಶ್ಚಿಮವಾಹಿನಿಯಲ್ಲಿ ದಿ.04.10.2021ರಂದು ಸ್ವಾತಂತ್ರ್ಯ ಹೋರಾಟಗಾರ ರಾಷ್ಟ್ರೀಯ ಯುವ ಯೋಜನೆಯ ಎಸ್.ಎನ್. ಸುಬ್ಬರಾವ್ ಅವರ ಚಿತಾಭಸ್ಮವನ್ನು ಕಾವೇರಿ ನದಿಗೆ ಅರ್ಪಿಸಲಾಯಿತು. ಚಿತ್ರದಲ್ಲಿ ಡಾ. ವಿ. ಪ್ರಶಾಂತ್ ಹಾಗೂ ನಿವೃತ್ತ ನ್ಯಾಯಮೂರ್ತಿ ಡಾ. ಎಂ. ಪುಟ್ಟೇಗೌಡ, ಅರ್ಚಕರು ಕ.ಗಾಂ.ಸ್ಮಾ.ನಿ. ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಮತ್ತೆಲ್ಲರು ಇದ್ದಾರೆ.

ಗಾಂಧಿ ಭವನದ ಕಾರ್ಯಕ್ರಮಗಳು





ಗಾಂಧಿ ಭವನದಲ್ಲಿ ದಿ.16.10.2021ರಂದು ಪ್ರೊ. ಜಿ.ಕೆ. ಗೋವಿಂದರಾವ್ ಶ್ರದ್ಧಾಂಜಲಿಯಲ್ಲಿ ಇಂದಿರಾ ಕೃಷ್ಣಪ್ಪ, ಡಾ. ವಸುಂಧರಾ ಭೂಪತಿ, ಪ್ರೊ. ಎಸ್.ಜಿ. ಸಿದ್ದರಾಮಯ್ಯ, ರುದ್ರಪ್ಪ ಹನಗವಾಡಿ, ಡಾ. ಕೆ. ಮರುಳಸಿದ್ದಪ್ಪ, ಅಗ್ರಹಾರ ಕೃಷ್ಣಮೂರ್ತಿ, ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ, ಎಂ.ಎಸ್. ಆಶಾದೇವಿ,ಬಿ.ಟಿ. ಲಲಿತಾನಾಯಕ್, ವಿ. ನಾಗರಾಜ್ ಹಾಗು ಮಾವಳ್ಳಿ ಶಂಕರ್ ಮತ್ತಿತರರು ಭಾಗವಹಿಸಿದ್ದರು.





ಗಾಂಧಿ ಭವನದಲ್ಲಿ ದಿ.09.11.2021ರಂದು ಸ್ವಾತಂತ್ರ್ಯ ಹೋರಾಟಗಾರ ಎಸ್.ಎನ್. ಸುಬ್ಬರಾವ್ ಶ್ರದ್ಧಾಂಜಲಿಯಲ್ಲಿ ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಸುರೇಶ್ ಕಲಘಟಗಿ, ಎಸ್.ಜಿ. ಸುಶೀಲಮ್ಮ, ಅರುಣ್ ಕುಮಾರ್, ಹೆಚ್.ಎಸ್. ದಳಪತಿ, ಭಾರತ ಸೇವಾದಳ, ಮೇಜರ್ ಈಶ್ವರ ಜೋಯಿಸ, ಶ್ರೀಮತಿ ರಂಜನಿ ಜೋಯಿಸ, ಎಸ್.ಎನ್. ಗಣೇಶ್, ಇಂದಿರಾ ಕೃಷ್ಣಪ್ಪ, ಡಾ. ವಿ. ಪ್ರಶಾಂತ, ಡಾ. ರಾಮಲಿಂಗೇಶ್ವರ, ಸಾಕಮ್ಮ ಮತ್ತೆಲ್ಲರು.







ನವೆಂಬರ್ 13, 2021ರಂದು ಶನಿವಾರ ಗಾಂಧಿ ಭವನದಲ್ಲಿ ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ನಡೆದ ರಾಜ್ಯ ಮಟ್ಟದ 12ನೇ ಸಾಹಿತ್ಯ ಸಂಸ್ಕೃತಿ ಸಮಾವೇಶ ಹಾಗೂ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಸರ್ವಾಧ್ಯಕ್ಷರಾಗಿದ್ದ ನಿವೃತ್ತ ಕೆ.ಎ.ಎಸ್. ಅಧಿಕಾರಿ, ಲೇಖಕ ಡಾ. ಕೃಷ್ಣಪ್ಪ ಕೋಡಿಪಾಳ್ಯ, ಕೌಸಲ್ಯ ನಟರಾಜ್, ನಂಜಪ್ಪ ಕಾಳೇಗೌಡ, ನಾಡೋಜ ಡಾ. ವೂಡೇ ಪಿ. ಕೃಷ್ಣ, ಇಂದಿರಾ ಕೃಷ್ಣಪ್ಪ, ಸಚಿವರಾದ ಡಾ. ಸಿ.ಎನ್. ಅಶ್ವತ್ಥ್ ನಾರಾಯಣ, ಪ್ರೊ. ಮಲ್ಲಯ್ಯ, ಡಾ. ಪಾಸ್ಯಂ ನಟರಾಜ್, ಡಾ. ರಾಮಲಿಂಗೇಶ್ವರ, ಶ್ರೀ ಚಿಕ್ಕವೀರಯ್ಯ, ಕೃಷ್ಣ ಹಾನ್‌ಬಾಳ್ ಮುಂತಾದವರು ಭಾಗವಹಿಸಿದ್ದರು.

ಪತ್ರಿಕಾ ವರದಿಗಳು

ಸುವರ್ಣ ಪಾಲಾರ್ 12 ಅಕ್ಟೋಬರ್ 2

ಸಮಾಜದಲ್ಲಿ ಭಾವೋದ್ವೇಗ ಸೃಷ್ಟಿಸಿ ಜನರನ್ನು ಆತಂಕಕ್ಕೆ ದೂಡಿ ಸಮಾಜದ ಸ್ವಾಸ್ಥ್ಯ ಕೆಡಿಸಿದರೆ ನಾಯಕರಾಗಲ್ಲ : ರಮೇಶ್‌ಕುಮಾರ್



ಪ್ರಜಾವಾಣಿ

ಪಶ್ಚಿಮವಾಹಿನಿ; ಸುಬ್ಬರಾವ್ ಚಿತಾಭಸ್ಮ ವಿಸರ್ಜನ

ಪ್ರಜಾವಾಣಿ ವಾರ್ತೆ


ಶ್ರೀರಂಗಪಟ್ಟಣ: ಚಂಬಲ್ ಕಣಿವೆಯ ಸಂತ ಎಂದೇ ಪ್ರಸಿದ್ಧಿಯಾಗಿದ್ದ ಕರ್ನಾಟಕ ಮೂಲದ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಜಯಪ್ರಕಾಶ್ ನಾರಾಯಣ ಅವರ ಆಪ್ತ ಕಾರ್ಯದರ್ಶಿ ಎಸ್.ಎನ್. ಸುಬ್ಬರಾವ್ ಅವರ ಚಿತಾಭಸ್ಮವನ್ನು ಪಟ್ಟಣದ ಬಳಿ ಕಾವೇರಿ ನದಿಯಲ್ಲಿ ಗುರುವಾರ ವಿಸರ್ಜಿಸಲಾಯಿತು.



...ಪಟ್ಟಣ ಸಮೀಪದ ಪಶ್ಚಿಮ...

ಸಮಾಜದ ಸ್ವಾಸ್ಥ್ಯ ಕದಡಿ ನಾಯಕನಾಗಲು ಸಾಧ್ಯವಿಲ್ಲ

ಪ್ರಾಧ್ಯಾಪಕ ಡಾ. ಶಂಕರಪ್ಪನವರ ಕೃತಿ ಬಿಡುಗಡೆ ಮಾಡಿದ ಶಾಸಕ ರಮೇಶ್ ಕುಮಾರ್ | ಡಾ.ಅಂಬೇಡ್ಕರ್ ಶ್ರೇಷ್ಠ ಮಾನವತಾವಾದಿ



02 ಕೋಲಾರ ಚಿತ್ರಶೀರ್ಷಿಕೆ...

ಪ್ರಜಾ ಪ್ರಗತಿ


ರಕ್ತದಾನ ಮಾಡಿ ಇನ್ನೊಬ್ಬರ ಜೀವ ಉಳಿಸಿ

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ



...ಊರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ಊಡೇ ಕೃಷ್ಣ ಅಭಿಮತ

...ಂಧೀಜಿ ಕಲ್ಪನೆಯ ಸ್ವಾತಂತ್ರ್ಯ ಇನ್ನೂ ಸಿಕ್ಕಿಲ್ಲ



ಕನ್ನಡಪ್ರಭ

...ಂಗಳವಾರ 16.11.202

ಜನಜಾಗೃತಿ ಚಿಲುಮೆಯ ಬೆಂಕಿ ಆರದಿರ...

ಪ್ರೊ.ಸಬಿಹಾ ಭೂಮಿಗೌಡ ಅಭಿನಂದನಾ ಸಮಾರಂಭ: ದಿನೇಶ್ ಅಮೀನ್‌ಮ...



'ಅಭಿಮಾನ ಪಡುವಂತ ಕಾರ್ಯ'

ಜನಪದ

ಸಂಪುಟ-05 • ಸಂಚಿಕೆ-02 • ನವೆಂಬರ್ 2021



ಸಣ್ ಸುದ್ದಿ

...ಸ್ಟ್ರೇಲಿಯಾದಲ್ಲಿ ಗಾಂ... ...ತಿಮೆ ಮೇಲೆ ದಾಳಿ



ಮೆಲ್ಬೋರ್ನ್: ಆಸ್ಟ್ರೇಲಿಯಾದಲ್ಲಿ ಸ್ಥಾಪಿಸಲಾಗಿದ್ದ ಸಹಜ ಗಾತ್ರದ ಮಹಾತ್ಮ ಗಾಂಧಿ ಅವರ ಕಂಚಿನ ವಿಗ್ರಹವನ್ನು ದುಷ್ಕರ್ಮಿಗಳು ವಿರೂಪಗೊಳಿಸಿದ್ದಾರೆ. ಪ್ರಧಾನಿ ಸ್ಕಾಟ್ ಮಾರಿಸನ್ ಈ ಕೃತ್ಯಕ್ಕೆ ವಿಷಾದ ವ್ಯಕ್ತಪಡಿಸಿದ್ದು ಇದು ದೇಶಕ್ಕೆ ಅಪಕೀರ್ತಿ ತರುವಂತಹ ಕೆಲಸ ಎಂದು ಹೇಳಿದ್ದಾರೆ. ಭಾರತ ಸರ್ಕಾರ ಉಡುಗೊರೆಯಾಗಿ ನೀಡಿದ್ದ ಗಾಂಧಿ ಪ್ರತಿಮೆಯನ್ನು ಭಾರತದ 75ನೇ ವರ್ಷದ ಸ್ವಾತಂತ್ರ್ಯೋತ್ಸವ ಆಚರಣೆಗಾಗಿ ಆಸ್ಟ್ರೇಲಿಯಾದ ರೌವಿಲ್ಲೇಯ ಭಾರತೀಯ ಸಮುದಾಯ ಕೇಂದ್ರದಲ್ಲಿ ಸ್ಕಾಟ್ ಮಾರಿಸನ್ ಶುಕ್ರವಾರ ಉದ್ಘಾಟಿಸಿದ್ದರು. ಇದಾದ ಕೆಲವೇ ಗಂಟೆಗಳಲ್ಲಿ ದುಷ್ಕರ್ಮಿಗಳು ಈ ಪ್ರತಿಮೆಯನ್ನು ವಿರೂಪ ಮಾಡಿದ್ದಾರೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಅಭಿಮತ

ರಕ್ತದಾನದಿಂದ ಬೇರೊಬ್ಬರ ಜೀವ ಉಳಿಸಲು ಸಾಧ್ಯ

■ ವಿಜಯವಾಣಿ ಸುದ್ದಿಜಾಲ ವಿಜಯಪುರ

ರಕ್ತದಾನದಿಂದ ವ್ಯಕ್ತಿಯೊಬ್ಬರ ಜೀವ ಉಳಿಸಬಹುದು ಎಂದು ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ತಿಳಿಸಿದರು.

ಪಟ್ಟಣ ಸಮೀಪದ ಗೊಲ್ಲುಮುದ್ದೇನಹಳ್ಳಿಯ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಆವರಣದಲ್ಲಿ ... ಬೆಂಗಳೂರಿನ ಗಾಂಧಿ ಸ್ಮಾರಕ ನಿಧಿ, ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ ರಕ್ತನಿಧಿ ಆಶ್ರಯದಲ್ಲಿ ಆಯೋಜಿಸಿದ್ದ ಅಮೃತ ರಾಜ್ಯೋತ್ಸವ ಹಾಗೂ ಸ್ವಯಂ ಪ್ರೇರಿತ ರಕ್ತದಾನ ಶಿಬಿರದಲ್ಲಿ ಮಾತನಾಡಿದರು.

ಕರೊನಾ ಲಸಿಕೆ ಪಡೆದ 14 ದಿನದ ನಂತರ ಆರೋಗ್ಯವಂತರು ರಕ್ತದಾನ ಮಾಡಬಹುದು ಹಾಗೂ ರಕ್ತದಾನದಿಂದ ಹೊಸ ರಕ್ತಕಣಗಳು ಉತ್ಪತ್ತಿಯಾಗಿ ದೇಹ ಸದೃಢವಾಗುತ್ತದೆ. ಪ್ರತಿಯೊಬ್ಬರೂ ರಕ್ತದಾನ ಮಾಡಿ ಮತ್ತೊಬ್ಬರ ಜೀವ ಉಳಿಸಬೇಕು ಎಂದರು.

ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯೆ ಡಾ. ಎನ್.ವಾಣಿ ಮಾತನಾಡಿ, ಹೆಣ್ಣು-ಗಂಡೆಂಬ ಭೇದವಿಲ್ಲದೆ 18 ರಿಂದ 60 ವರ್ಷದೊಳಗಿನ ಎಲ್ಲ ಆರೋಗ್ಯವಂತರು ರಕ್ತದಾನ ಮಾಡಬಹುದು. ಆದ್ದರಿಂದ ರಕ್ತದಾನ ಮತ್ತೊಬ್ಬರಿಗೆ ಜೀವದಾನ ಎಂದರು. ಗ್ರಾಪಂ ಅಧ್ಯಕ್ಷೆ ಆನಂದಮ್ಮ ಮಾತನಾಡಿ, ರಕ್ತದಾನ ಮಾಡುವುದರಿಂದ ಅವಶ್ಯಕತೆ ಇರುವವರಿಗೆ ರಕ್ತ ನೀಡಿ ಜೀವ ಉಳಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಈ ಮಹಾನ್ ಕಾರ್ಯದಲ್ಲಿ ಭಾಗಿಯಾಗಿ ರಕ್ತದಾನ ಮಾಡಬೇಕೆಂದರು.

ರಾಷ್ಟ್ರೀಯ ಯುವ ಯೋಜನೆ ರಾಜ್ಯ ಸಂಯೋಜಕ ಡಾ. ವಿ.ಪ್ರಶಾಂತ್, ಗ್ರಾಮಸ್ಥರಾದ ದೇವರಾಜು, ಯಲುವಹಳ್ಳಿ ಗಜೇಂದ್ರ, ಕೊಮ್ಮಸಂದ್ರದ ಸುರೇಶ್, ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ ರಕ್ತನಿಧಿಯ ವೈದ್ಯಾಧಿಕಾರಿ ಡಾ.ಐಶ್ವರ್ಯ, ಡಾ.ಮಹಮ್ಮದ್ ಶೀಬ್ ಹಾಜರಿದ್ದರು.



ವಿಜಯಪುರ ಸಮೀಪದ ಗೊಲ್ಲುಮುದ್ದೇನಹಳ್ಳಿಯ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಆವರಣದಲ್ಲಿ ಏರ್ಪಡಿಸಿದ್ದ ಅಮೃತ ರಾಜ್ಯೋತ್ಸವದಲ್ಲಿ ರಾಷ್ಟ್ರೀಯ ಯುವ ಯೋಜನೆ ಸಂಯೋಜಕ ಡಾ. ವಿ.ಪ್ರಶಾಂತ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಗೊಲ್ಲುಮುದ್ದೇನಹಳ್ಳಿ ಗ್ರಾಪಂ ಅಧ್ಯಕ್ಷೆ ... ಮುರಳಿ ಮೋಹನ್, ಗ್ರಾಪಂ ಸದಸ್ಯ ಹರೀಶ್ ಹಾಜರಿದ್ದರು.

ಪುಸ್ತಕ ವಿಭಾಗ

(ಪ್ರಸಿದ್ಧ ಕೃತಿಗಳ ಸಂಕ್ಷಿಪ್ತ ಭಾಗ ನಿಯತವಾಗಿ ಬರಲಿವೆ)

ROOTS : Sold Into Slavery

Condensed form of the story by Alex Harley

Continued from previous edition...

More than a decade ago, Alex Haley began a long and arduous attempt to discover his ancestral roots. Like most black Americans, he had little to go on at first-only a few meagre clues, given to him in childhood. But as he pursued his search, the pieces of his ancient family puzzle began to fall into place. The story that finally emerged portrays not merely the agony of one man but, in a very real sense, the epic journey of the American Negro. In "By Slave Ship to America,' the first part of 'Roots, which appeared last month, Haley re-created the boyhood of his African ancestor, Kunta Kinte, Kunta's capture in 1767 by slavers and the ordeal of his passage across the Atlantic on a slave ship. 'Sold into Slavery' brings the young Kunta to the alien and cruel world of colonial America.

Speaking to Bell and the fiddler and the old gardener about such things, Kunta was astonished to learn that many white young'uns and black young'uns grew up together and became very attached to each other. The old gardener said that on his second plantation a toubo and black boy grew up together until finally the toubob young massa took the black one off with him to college.

"He say heap of times dey take dey niggers widened to classes, den day argue later on whose nigger learnt de most. Dat nigger we knowed couldn't jes' read and write, he could figger, too, an' 'cite dem poems an' stuff day has at colleges." "Lucky if he ain't dead," the fiddler said. "'Cause white folks is quick to 'spicion a nigger like first to hatch a uprisin' or revolt. Don't pay to know too much."

Sometimes Massa Waller invited a friend to ride with him, and then Kunta's rigid back believed that he heard every word. They talked as if he were not there. Whites seldom shared a buggy ride without expressing regional fears of slave conspiracies and revolts. "We should never have let them bear arms against white men during the war. Now we witness the result!"

Massa Waller went on to say that he had read that more than 200 slave outbreaks and revolts had occurred since the first slave ships came. "But beyond that," he added, "I've seen white deaths that, well, I'll not go into details-I'll just say I've thought them suspicious." Kunta, in fact, knew as much, or more, of these matters. Black men often met secretly. Right in this county he had heard of black ones. who had vowed to kill their massa or missis. He had knowledge of hidden muskets and had overheard whisperings of intended revolts.


Kunta's most consistent source of information, especially from far away places, was when the massa happened to be in the Spotsylvania county seat as a mail coach came whirling in. Minutes after the mail bags and bundles of the Virginia Gazette had been dropped off, scores of massas, shopkeepers and other toubob men were gathered in clusters, talking and exclaiming, and usually Kunta was within hearing. His ears filled with the toubob folks' fury and dismay at the increasing number of "Quakers" who, according to the Gazette, had been encouraging black ones to escape, and more recently had begun aiding, hiding and conducting such runaways to freedom in the north.

To be continued...


ಶೇಷಾದ್ರಿಪುರಂ ಶಿಕ್ಷಣ ದತ್ತಿ

ಬಾಪು ಪ್ರಪಂಚ ಕನ್ನಡ-ಇಂಗ್ಲಿಷ್ ಮಾಸ ಪತ್ರಿಕೆ
RNI NO : KARBIL/2019/77950
Registered No. : KA/BGGPO/2589/2020-2022
published 15th of every month and posted on 20th of every month at Patrikachannel, Bengaluru - 560026

ಡಾ. ಕೆ.ವಿ. ನಾರಾಯಣ :(20.10.1948)




ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ತಾಲೂಕಿನ ಕಂಪಲಾಪುರದಲ್ಲಿ ಕೆಂಚಮ್ಮ ವೀರಣ್ಣ ದಂಪತಿಗಳಿಗೆ ಕೆ.ವಿ. ನಾರಾಯಣ ಅವರು ಜನಿಸಿದರು. ಪ್ರಾಥಮಿಕ ಶಿಕ್ಷಣ ಪಿರಿಯಾಪಟ್ಟಣದಲ್ಲಿ. ಕೆ.ವಿ.ಎನ್ ಮೈಸೂರಿನ ಯುವರಾಜಾಸ್ ಕಾಲೇಜಿನಲ್ಲಿ ವಿಜ್ಞಾನದ ಪದವಿ ಹಾಗೂ ಬಿ.ಎಡ್. ಮುಗಿಸಿ ಹೈಸ್ಕೂಲಿನಲ್ಲಿ ಅಧ್ಯಾಪನ ವೃತ್ತಿ ಜೊತೆಗೆ ಬರವಣಿಗೆಯಲ್ಲೂ ತೊಡಗಿಸಿಕೊಂಡಿದ್ದ ಕೆ.ವಿ.ಎನ್ ಮುಂದಿನ ಓದಿಗೆ ಆರಿಸಿಕೊಂಡಿದ್ದು ಸಾಹಿತ್ಯವನ್ನು. ಬೆಂಗಳೂರು ವಿಶ್ವವಿದ್ಯಾಲಯದ ಜಿ.ಎಸ್.ಎಸ್ ನೇತೃತ್ವದಲ್ಲಿದ್ದ ಕನ್ನಡ ಅಧ್ಯಯನ ಕೇಂದ್ರಕ್ಕೆ ಸೇರ್ಪಡೆ. ಜಿ.ಎಸ್.ಎಸ್ ಮಾರ್ಗದರ್ಶನದಲ್ಲಿ ಆನಂದವರ್ಧನನ ಧನ್ಯಾಲೋಕ -ಒಂದು ಅಧ್ಯಯನ ಮಾಡಿ ಪಿಎಚ್ ಡಿ ಪದವಿ ಪಡೆದರು. ಬೋಧಿಸಿದ್ದು ಸಾಹಿತ್ಯ, ಸಾಹಿತ್ಯ ಮೀಮಾಂಸೆ ಮತ್ತು ಭಾಷಾಶಾಸ್ತ್ರವನ್ನು. ವಿಜ್ಞಾನದ ತಾತ್ವಿಕತೆಯನ್ನಿರಿಸಿಕೊಂಡೇ ಕೆ.ವಿ.ಎನ್ ಬೆಳೆದಿದ್ದು ವಿಮರ್ಶಕರಾಗಿ, ಭಾಷಾಶಾಸ್ತ್ರಜ್ಞರಾಗಿ, ಕನ್ನಡ ಸಂಸ್ಕೃತಿ ಚಿಂತಕರಾಗಿ. ಕೆ.ವಿ.ಎನ್ 1993ರಲ್ಲಿ ಕನ್ನಡಿಗರ ಕನಸಿನ ಸಂಸ್ಥೆಯಾಗಿದ್ದ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದ ಶುರುವಿನಲ್ಲೇ ರಿಜಿಸ್ಟ್ರಾರ್ ಆಗಿ ಅಲ್ಲಿನ ಆಡಳಿತ ನಿರ್ವಹಣೆಯೊಳಗೂ ಪ್ರವೇಶ ಪಡೆದರು. ಅಲ್ಲಿಂದ ನಿವೃತ್ತಿಯಾಗಿ ಹೊರಗೆ ಬರುವವರೆಗೆ ಆಡಳಿತ ಮತ್ತು ಅಧ್ಯಯನಗಳ ಮೂಲಕ ಕನ್ನಡ ವಿಶ್ವವಿದ್ಯಾಲಯವನ್ನು ಕಟ್ಟುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದರು. ಬೆಂಗಳೂರು ವಿಶ್ವವಿದ್ಯಾಲಯದ ತಮ್ಮ ಅಧ್ಯಾಪನ ಸಂದರ್ಭದಲ್ಲೇ ಶುರುಮಾಡಿದ್ದ ಕನ್ನಡಭಾಷೆ ಮತ್ತು ಕನ್ನಡ ಸಂಸ್ಕೃತಿಯ ಚಿಂತನೆಗಳನ್ನು ಕನ್ನಡ ಸಮಾಜದ ಬೇರುಗಳ ಮೂಲಕ ಅರಸುವ ಕೆಲಸವನ್ನು ಮತ್ತಷ್ಟು ಸ್ಪಷ್ಟವಾಗಿ ಮಂಡಿಸುತ್ತಾ ಬಂದರು. ಸಾಹಿತ್ಯ ವಿಮರ್ಶೆ, ಅನುವಾದಗಳು, ನಾಟಕಗಳು ಮತ್ತು 13 ಕೃತಿಗಳನ್ನೂ ಸಹ ರಚಿಸಿದ್ದಾರೆ.

ಅಮೃತಾ ಪ್ರೀತಮ್ (31.08.1919-31.10.2005)



ಕಾದಂಬರಿಗಾರ್ತಿ, ಪ್ರಬಂಧಗಾರ್ತಿ ಅಷ್ಟೇ ಅಲ್ಲದೇ 20ನೆಯ ಶತಮಾನದ ಮೊದಲ ಪಂಜಾಬಿ ಭಾಷೆಯ ಕವಿಯತ್ರಿ ಅಮೃತಾ ಪ್ರೀತಮ್ ಅವರು ಶಿಕ್ಷಕ, ಕವಿ, ಭಾಷಾ ವಿದ್ವಾಂಸ ಕರ್ತಾರ ಸಿಂಗ್ ಹಿತಕಾರಿ ಅವರ ಏಕೈಕ ಪುತ್ರಿ. ಅವರು ಎಳೆವಯಸ್ಸಿನಲ್ಲೇ ಬರೆಹದೆಡೆಗೆ ವಾಲಿದರು. ಅವರ ಮೊದಲ ಕವನ ಸಂಗ್ರಹ ಅಮೃತ ಲೆಹೆರಾನ್ (ಇಮ್ಮೊರ್ಟಲ್ ವೇವ್ಸ್) ಅವರು 16ನೆಯ ವಯಸ್ಸಿನವರಾದಾಗ ಪ್ರಕಟವಾಯಿತು. ಆರು ದಶಕಗಳ ಅವರ ವೃತ್ತಿ ಜೀವನದಲ್ಲಿ ಸುಮಾರು 100ಕ್ಕಿಂತ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ.ಇದರಲ್ಲಿ ಕವಿತೆ-ಕಾವ್ಯ, ಕಥಾನಕ, ಜೀವನ ಚರಿತ್ರೆಗಳು, ಪ್ರಬಂಧಗಳು, ಪಂಜಾಬಿ ಜನಪದ ಗೀತೆಗಳ ಸಂಗ್ರಹಗಳೂ ಇವೆ. ಅವರ ಜೀವನ ಚರಿತ್ರೆಯು ಹಲವು ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಮುದ್ರಣ ಕಂಡಿದೆ. ಕಾದಂಬರಿಕಾರರಾಗಿ ಅವರ ಅತ್ಯುತ್ತಮ ಕೃತಿ "ಪಿಂಜಾರ್" ದಲ್ಲಿ ಅತ್ಯುತ್ತಮ ಪಾತ್ರ "ಪುರೊ"ವನ್ನು ಸೃಷ್ಟಿಸಿದ್ದಾರೆ, ಒಟ್ಟಾರೆ ಈ ಕಥೆಯು ಮಹಿಳೆಯರ ಮೇಲೆ ನಡೆದ ಅಮಾನವೀಯ ದೌರ್ಜನ್ಯ, ಮರೆತ ಮಾನವೀಯತೆ ಅಂತಿಮವಾಗಿ ಅಸ್ತಿತ್ವಕ್ಕಾಗಿ ಶರಣಾಗತಿಯ ದುರ್ಗತಿ ಬಂದಿದ್ದನ್ನು ಕಣ್ಣೀರಿನ ಕಥೆಯಾಗಿ ಚಿತ್ರಿಸಿದ್ದಾರೆ. ಪಂಜಾಬಿ ಸಾರಸ್ವತ ಲೋಕದಲ್ಲಿ ಅವರು ಮಹಿಳೆಯರ ಪರ ಧ್ವನಿಯಾಗಿದ್ದರು. 'ಕಾಗಜ್ ತೆ ಕ್ಯಾನ್ವಾಸ್' ಎಂಬ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿದೆ. ಅವರ ಸಾಹಿತ್ಯ ಕೃಷಿಗೆ ಪದ್ಮಶ್ರೀ, ಪದ್ಮ ವಿಭೂಷಣ ಪ್ರಶಸ್ತಿ, ಸಾಹಿತ್ಯ ಅಕಾಡಮಿ ಪ್ರಶಸ್ತಿ ಇನ್ನೂ ಹಲವಾರು ಗೌರವಗಳಿಂದ ಪುರಸ್ಕೃತರಾಗಿದ್ದಾರೆ.

ಕಲ್ಯಂಪುಡಿ ರಾಧಾಕೃಷ್ಣ ರಾವ್, (ಸಿ.ಆರ್.ರಾವ್) (10.09.1920)



ಸಿ.ಆರ್. ರಾವ್ ಅವರು ಭಾರತೀಯ - ಅಮೇರಿಕನ್ ಗಣಿತಜ್ಞ ಮತ್ತು ಸಂಖ್ಯಾಶಾಸ್ತ್ರಜ್ಞ. ಪ್ರಸ್ತುತ ಪೆನ್ಸಿಲ್ವೇನಿಯಾ ಸ್ಟೇಟ್ ಯುನಿವರ್ಸಿಟಿಯಲ್ಲಿ ಪ್ರಾಧ್ಯಾಪಕರಾಗಿದ್ದಾರೆ ಮತ್ತು ಬಫಲೋ ವಿಶ್ವವಿದ್ಯಾಲಯದ ಸಂಶೋಧನಾ ಪ್ರಾಧ್ಯಾಪಕರಾಗಿದ್ದಾರೆ. ರಾವ್ ಅವರನ್ನು ಹಲವು ಕೊಲೊಕ್ವಿಯಾ, ಗೌರವಾನ್ವಿತ ಪದವಿಗಳನ್ನು ನೀಡಿ ಗೌರವಿಸಲಾಗಿದೆ ಮತ್ತು 2002ರಲ್ಲಿ ಯುಎಸ್ ನ್ಯಾಷನಲ್ ಮೆಡಲ್ ಆಫ್ ಸೈನ್ಸ್ ಪ್ರಶಸ್ತಿಯನ್ನು ಪಡೆದರು. ಏಷ್ಯಾದ ಹೃದಯರಕ್ತನಾಳದ ಕಾಯಿಲೆಯ ಅರಿವು ಮೂಡಿಸಲು ಕೇಂದ್ರೀಕರಿಸಿದ ಇಂಡಿಯನ್ ಹಾರ್ಟ್ ಅಸೋಸಿಯೇಷನ್ ನ ಹಿರಿಯ ನೀತಿ ಮತ್ತು ಅಂಕಿಅಂಶಗಳ ಸಲಹೆಗಾರರು ಸಿ.ಆರ್.ರಾವ್. ಇವರು ಕರ್ನಾಟಕದ ಬಳ್ಳಾರಿ, ಹೂವಿನ ಹಡಗಲಿಯಲ್ಲಿ ಜನಿಸಿದರು. ರಾವ್ ಅವರು ಆಂಧ್ರ ವಿಶ್ವವಿದ್ಯಾಲಯದಿಂದ ಗಣಿತಶಾಸ್ತ್ರದಲ್ಲಿ ಎಂ.ಎಸ್ಸಿ. ಮತ್ತು ಕಲ್ಕತ್ತಾ ಯುನಿವರ್ಸಿಟಿಯಲ್ಲಿ ಎಮ್.ಎ. ಪದವಿಯನ್ನು ಪಡೆದು, ಆರ್.ಎ. ಫಿಶರ್ ಅವರ ನೇತೃತ್ವದಲ್ಲಿ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ ಕಿಂಗ್ಸ್ ಕಾಲೇಜಿನಲ್ಲಿ ಪಿ.ಹೆಚ್.ಡಿ ಪದವಿಯನ್ನು ಪಡೆದರು. ರಾವ್ಅವರುಪಡಿಯನ್ ಸ್ಟ್ಯಾಟಿಸ್ಟಿಕಲ್ ಇನ್ಸ್ಟಿಟ್ಯೂಟ್ ಮತ್ತು ಕೇಂಬ್ರಿಡ್ಜ್ ನ ಮಾನವಶಾಸ್ತ್ರದ ಮ್ಯೂಸಿಯಂ, ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್ಸ್ಟಿಟ್ಯೂಟ್‌ನ ನಿರ್ದೇಶಕ, ದೇಶ ವಿದೇಶದ ಹಲವಾರು ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕ, ನಿರ್ದೇಶಕ ಮತ್ತಿತರ ಉನ್ನತ ಸ್ಥಾನಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಇವರ ಸಂಶೋಧನೆಗೆ 'ಸರ್ದಾರ್ ರತ್ನ', 'ಗಯ್ ಮೆಡಲ್ ಇನ್ ಗೋಲ್ಡ್ ಆಫ್ ದ ರಾಯಲ್ ಸ್ಟ್ಯಾಟಿಸ್ಟಿಕಲ್ ಸೊಸೈಟಿ', 'ಇಂಡಿಯಾ ಸೈನ್ಸ್ ಅವಾರ್ಡ್', 'ಇಂಟರ್ನ್ಯಾಷನಲ್ ಮಹಲನೋಬಿಸ್ ಪ್ರೈಸ್ ಆಫ್ ದ ಇಂಟರ್ನ್ಯಾಷನಲ್ ಸ್ಟ್ಯಾಟಿಸ್ಟಿಕಲ್ ಇನ್ಸ್ಟಿಟ್ಯೂಟ್' ಭಾರತ ಸರ್ಕಾರದಿಂದ ಪದ್ಮವಿಭೂಷಣ, ಪದ್ಮಭೂಷಣ, ಕಲ್ಕತ್ತಾದಿಂದ ಡಾಕ್ಟರ್ ಆಫ್ ಸೈನ್ಸ್ ಗೌರವ ಹಾಗೂ ಇನ್ನೂ ಹಲವಾರು ಪ್ರಶಸ್ತಿ ಗೌರವಗಳು ಸಂದಿವೆ.

ಇವರಿಗೆ,

____

____

Printed and Published by Secretary, Karnataka Gandhi Smaraka Nidhi on behalf of Gandhi Bhavana, Kumarapark East, Bengaluru - 560001, Ph : 080 22261967, Printed at CreativeGeekZ, #58, Yadhava College Road, Madhavanagara Bengaluru - 560001, Ph : 080 40927049